ದುಡಿವ ಜನರ ಪ್ರಾಣಮಿತ್ರ

ಜನಶಕ್ತಿ

ಕನ್ನಡ ವಾರಪತ್ರಿಕೆ


ಸಂಪುಟ 3 ಸಂಚಿಕೆ 52

ಡಿಸೆಂಬರ್ 27, 2009

ರೂ. 5/-



ಪ್ರತ್ಯೇಕ ತೆಲಂಗಾಣ : ರಾಜ್ಯ ವಿಭಜನೆ ಎಂಬುದು ಲೂಟಿ ನೀತಿ




ಅಸ್ಥಿರತೆಯತ್ತ ಬಿಜೆಪಿ ಸರ್ಕಾರ



ವಿಶ್ವ ತುಳು ಸಮ್ಮೇಳನ ಪಾಳೇಗಾರಿ ಮೌಲ್ಯಗಳ ಪುನರುತ್ಥಾನದ ಪ್ರಯತ್ನ

ಕೋಪನ್‌ಹೆಗನ್ : ಕ... ಆಶಾಕಿರಣ ?



ಭಯೋತ್ಪಾದಕ ಹೆಡ್ಲಿ ಬೆನ್ನ ಹಿಂದೆ....?!

ಸಂದರ್ಶನ

ಮುಗಿಲೆತ್ತರದ ಕಟ್ಟಡಗಳನ್ನು ಕಟ್ಟಿ 'ತಳಾದಿ'ಗೆ ಸಿಕ್ಕಿಕೊಂಡಂತಹ ಸ್ಥಿತಿಯಲ್ಲಿರುವ ಕಟ್ಟಡ ಕಾರ್ಮಿಕರು ಕರ್ನಾಟಕ ರಾಜ್ಯದಲ್ಲಿಯೂ ಸಂಘಟಿತರಾಗುತ್ತಿದ್ದಾರೆ. ಇತ್ತೀಚಿನ ಚಳುವಳಿ ಕುರಿತು ಕಟ್ಟಡ ಕಾರ್ಮಿಕರ ಸಂಘಟನೆ ರಾಜ್ಯ ಕಾರ್ಯದರ್ಶಿ ವೀರಸ್ವಾಮಿಯವರ ಸಂದರ್ಶನ



'ಕಟ್ಟಡ ಕಾರ್ಮಿಕರ ಚಳುವಳಿ ಬೆಳೆಯುತ್ತಿದೆ'

ವೀರಾಸ್ವಾಮಿ

ಪ್ರಶ್ನೆ : ಇತ್ತೀಚಿಗೆ ನಡೆದ ಕಟ್ಟಡ ಕಾರ್ಮಿಕರ ಪ್ರತಿಭಟನೆಗಳ ಬೇಡಿಕೆ ಏನು?

ಉತ್ತರ : ಕಟ್ಟಡ ಕಾರ್ಮಿಕರ ಕಾಯ್ದೆ 1996 ರಲ್ಲಿ ಕೇಂದ್ರದಲ್ಲಿ ಅಂಗೀಕಾರವಾಗಿದ್ದರೂ ಕೂಡ ರಾಜ್ಯಗಳಲ್ಲಿ ಅದನ್ನು ಜಾರಿಗೊಳಿಸಲಿಲ್ಲ. ನಮ್ಮ ರಾಜ್ಯದಲ್ಲಿ 2006 ನವೆಂಬರ್‌ನಿಂದ ಅಂದರೆ 10 ವರ್ಷದ ನಂತರ ಹಲವು ಪ್ರತಿಭಟನೆಗಳ ನಂತರ ಜಾರಿಗೆ ಬರುತ್ತಿದೆ.

ಕಟ್ಟಡ ಸಾಮಗ್ರಿಗಳ ಬೆಲೆ ಅಂದರೆ ಮರಳು, ಸಿಮೆಂಟ್, ಕಬ್ಬಿಣ ಇತ್ಯಾದಿಗಳ ಬೆಲೆ ಹೆಚ್ಚಾಗಿರುವುದು ಹಾಗೂ ಜಾಗತಿಕ, ಆರ್ಥಿಕ ಬಿಕ್ಕಟ್ಟಿನ ಪರಿಣಾಮವಾಗಿ ಕಟ್ಟಡ ಕಾರ್ಮಿಕ ಕೆಲಸದ ಅವಕಾಶಗಳು ಕಡಿತವಾಗಿವೆ. ಈ ಹಿನ್ನೆಲೆಯಲ್ಲಿ ಅಖಿಲ ಭಾರತ ಕಟ್ಟಡ ಕಾರ್ಮಿಕರ ಫೆಡರೇಷನ್ (ಸಿ.ಡಬ್ಲ್ಯು.ಎಫ್.ಐ) ಮೇ 30, 31 ಜೂನ್ 1, 09 ರಂದು ಪಶ್ಚಿಮ ಬಂಗಾಳದ ಬರ್ದ್ವಾನ್‌ನಲ್ಲಿ ನಡೆದ ಸಭೆಯಲ್ಲಿ ಚರ್ಚಿಸಿ ಅಖಿಲ ಭಾರತ ಹೋರಾಟಕ್ಕೆ ಕರೆ ನೀಡಿತು. ಅದರಂತೆ ಅಕ್ಟೋಬರ್ 3 ರಂದು ಒಂದು ಪ್ರತಿಭಟನಾ ಸಭೆ ದೇಶಾದ್ಯಂತ ನಡೆಸುವುದೆಂದು ತೀರ್ಮಾನವಾಯಿತು. ಈ ಕೆಳಕಂಡ 10 ಬೇಡಿಕೆ ಮುಂದಿಟ್ಟು ಡಿಸೆಂಬರ್ 8, 2009 ರಂದು ಅಖಿಲ ಭಾರತ ಕಟ್ಟಡ ಕಾರ್ಮಿಕರ ಮುಷ್ಕರಕ್ಕೆ ಕರೆ ನೀಡಲಾಗಿತ್ತು.



ಚಿತ್ರದುರ್ಗದಲ್ಲಿ ನಡೆದ ಬೃಹತ್ ಪ್ರತಿಭಟನೆ

ಬೇಡಿಕೆಗಳು

1. 1996 ಕಟ್ಟಡ ಕಾರ್ಮಿಕರ ಕಾನೂನನ್ನು ಎಲ್ಲಾ ರಾಜ್ಯಗಳಲ್ಲೂ ಹಾಗೂ ಕೇಂದ್ರ ಆಡಳಿತ ಪ್ರದೇಶಗಳಲ್ಲೂ ಜಾರಿಗೊಳಿಸಬೇಕು.
2. ರಾಷ್ಟ್ರೀಯ ಸ್ವಸ್ತಿ ಭೀಮಾ ಯೋಜನೆಯನ್ನು ದೇಶಾದ್ಯಂತ ಎಲ್ಲಾ ಕಟ್ಟಡ ಕಾರ್ಮಿಕರಿಗೂ ಅನ್ವಯಿಸುವಂತೆ ಜಾರಿಗೊಳಿಸಬೇಕು.
3. ಕಟ್ಟಡ ಕಾರ್ಮಿಕರಿಗೆ ನಿರಂತರವಾಗಿ ಕೆಲಸ ದೊರಕಲು ಕಟ್ಟಡ ಸಾಮಗ್ರಿಗಳು ಬೆಲೆಯನ್ನು ಇಳಿಸಬೇಕು.
4. ಅಂತರ ರಾಜ್ಯ ವಲಸೆ ಕಾರ್ಮಿಕರ 1979 ರ ಕಾನೂನನ್ನು ಕಟ್ಟುನಿಟ್ಟಾಗಿ ಜಾರಿಗೊಳಿಸಬೇಕು.
5. ಗೃಹ ನಿರ್ಮಾಣ ಕ್ಷೇತ್ರದಲ್ಲಿ ಶೇ.100 ರಷ್ಟು ಹೊರ ದೇಶ ನೇರ ಬಂಡವಾಳ ಹೂಡಿಕೆಗೆ ಅವಕಾಶ ನೀಡಿರುವ ಕೇಂದ್ರ ಸರ್ಕಾರದ ಆದೇಶವನ್ನು ಹಿಂತೆಗೆದು ನಮ್ಮ ದೇಶದ ಕಟ್ಟಡ ನಿರ್ಮಾಣ ಕಂಪನಿಗಳನ್ನು ರಕ್ಷಿಸಬೇಕು.
6. ಮೂಲಭೂತ ಅಭಿವೃದ್ಧಿ ಕಾಮಗಾರಿಗಳಿಗೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಹೆಚ್ಚಿನ ಹಣವನ್ನು ಹೂಡಿಕೆ ಮಾಡಬೇಕು.
7. ವಿವಿಧ ದೇಶಗಳಲ್ಲಿ ಜೈಲಿನಲ್ಲಿರುವ 3846 ವಲಸೆ ಕಟ್ಟಡ ಕಾರ್ಮಿಕರ ಬಿಡುಗಡೆಗೆ ತಕ್ಷಣ ಕ್ರಮ ವಹಿಸಬೇಕು. (ಅನಕ್ಷರಸ್ಥ ಹಾಗೂ ಅರೆಶಿಕ್ಷಿತ ಕಟ್ಟಡ ಕಾರ್ಮಿಕರು ಹೊಟ್ಟೆಪಾಡಿಗಾಗಿ ಕಟ್ಟಡ ಕಾರ್ಮಿಕರಾಗಿ ಕೆಲಸ ಮಾಡಲು ವಿದೇಶಗಳಿಗೆ ಹೋಗುತ್ತಾರೆ. ಅಲ್ಲಿನ ಕಾನೂನು ಹಾಗೂ ಕಟ್ಟಳೆಗಳ ಅರಿವಿಲ್ಲದೆ ತಪ್ಪುಗಳಾಗಿ ಜೈಲು ಸೇರುತ್ತಾರೆ.)
8. ನಿವೇಶನದ ಹಕ್ಕನ್ನು ಮೂಲಭೂತ ಹಕ್ಕನ್ನಾಗಿ ಪರಿಗಣಿಸಿ ಜಾರಿಗೊಳಿಸಬೇಕು.
9. ಅಸಂಘಟಿತ ವಲಯದ ಕಾರ್ಮಿಕರಿಗಾಗಿ ತಂದಿರುವ "ಸಾಮಾಜಿಕ ಭದ್ರತಾ ಕಾನೂನನ್ನು" ಸೂಕ್ತವಾಗಿ ತಿದ್ದುಪಡಿ ಮಾಡಿ ಹೆಚ್ಚಿನ ಮೊತ್ತವನ್ನು ಮೀಸಲಿಟ್ಟು ಆದಷ್ಟು ಬೇಗನೆ ಜಾರಿಗೊಳಿಸಬೇಕು.




ಪ್ರಶ್ನೆ : ಈ ಹೋರಾಟದ ಕರೆಗೆ ರಾಜ್ಯದಲ್ಲಿ ಪ್ರತಿಕ್ರಿಯೆ ಹೇಗಿದೆ?

ಉತ್ತರ : ನಮ್ಮ ರಾಜ್ಯದಲ್ಲಿ ಕೂಡ ಒಳ್ಳೆ ಪ್ರತಿಕ್ರಿಯೆ ಸಿಕ್ಕಿದೆ. ಚಿತ್ರದುರ್ಗದಲ್ಲಿ ಮುಷ್ಕರಕ್ಕೆ ಕರೆ ಕೊಟ್ಟಿದ್ದರೂ ಕೂಡ ಬಂದ್ ಆಗಿದೆ. ಸುಮಾರು ಒಂದು ಸಾವಿರ ಕಾರ್ಮಿಕರು ಮೆರವಣಿಗೆ ಹೋಗಿ ಜಿಲ್ಲಾಧಿಕಾರಿಗೆ ಮನವಿ ಕೊಟ್ಟಿದ್ದಾರೆ. ಮಂಡ್ಯದಲ್ಲಿ ನಗರ ಕೇಂದ್ರದಲ್ಲಿ ಪ್ರತಿಭಟನಾ ಸಭೆ ಮಾಡಿ ಜಿಲ್ಲಾಧಿಕಾರಿಗೆ ಮನವಿ ಕೊಟ್ಟಿದ್ದಾರೆ. ಮಂಗಳೂರಿನಲ್ಲಿ 200 ಜನ ಕಾರ್ಮಿಕರು, ದಕ್ಷಿಣ ಕನ್ನಡ ಜಿಲ್ಲೆಯ ತೊಕ್ಕೊಟ್ಟುವಿನಲ್ಲಿ 300 ಜನ ಕಾರ್ಮಿಕರು ಬೆಂಗಳೂರಿನ ಲಾಲ್‌ಬಾಗ್‌ನಿಂದ ಡೈರಿ ಸರ್ಕಲ್‌ನ ಕಾರ್ಮಿಕ ಆಯುಕ್ತರ ಕಛೇರಿವರೆಗೆ ಮೆರವಣಿಗೆ ಮಾಡಿ ಮನವಿ ಸಲ್ಲಿಸಿದ್ದಾರೆ. ಉತ್ತರಕನ್ನಡ ಜಿಲ್ಲೆ ಅಂಕೋಲಾದಲ್ಲಿ ಸುಮಾರು 100 ಕಾರ್ಮಿಕರು ಪ್ರತಿಭಟನೆ ಮಾಡಿದ್ದಾರೆ.



ಗುಲ್ಬರ್ಗಾದಲ್ಲಿ ಸೂಪರ್ ಮಾರ್ಕೆಟ್ ಬಳಿ ಸುಮಾರು 100 ಪ್ರತಿಭಟನೆ ಮಾಡಿ ಕಾರ್ಮಿಕ ಆಯುಕ್ತರಿಗೆ ಮನವಿ ಸಲ್ಲಿಸಿದ್ದಾರೆ. ಬಳ್ಳಾರಿ ಜಿಲ್ಲೆ ಕುರುಗೋಡಿನಲ್ಲಿ ಪ್ರತಿಭಟನೆ ನಡೆದಿದೆ.

ಸೆಪ್ಟೆಂಬರ್ 7 ರಿಂದ 15ರವರೆಗೆ ರಾಜ್ಯದಲ್ಲಿ ಅಸಂಘಟಿತರ ಹೋರಾಟದಲ್ಲಿ ಸಾಮಾನ್ಯ ಕನಿಷ್ಠ ಕೂಲಿಗಾಗಿ ನಡೆದ ಹೋರಾಟದಲ್ಲಿಯೂ ಕಟ್ಟಡ ಕಾರ್ಮಿಕ ರಾಜ್ಯಾದ್ಯಂತ ದೊಡ್ಡ ಸಂಖ್ಯೆಯಲ್ಲಿ ಪಾಲ್ಗೊಂಡಿದ್ದಾರೆ. ಇದಲ್ಲದೆ ನವೆಂಬರ್ 25 ರ ಆಹಾರ ಹಕ್ಕಿಗಾಗಿ ಹಾಗೂ ನವೆಂಬರ್ 26 ರಂದು ನಡೆದ ಕನಿಷ್ಟ ಕೂಲಿ ಹೋರಾಟದಲ್ಲಿ ಕಟ್ಟಡ ಕಾರ್ಮಿಕರು ದೊಡ್ಡ ಸಂಖ್ಯೆಯಲ್ಲಿ ಪಾಲ್ಗೊಂಡಿದ್ದಾರೆ.



ಪ್ರಶ್ನೆ : ಚಳುವಳಿಯ ಫಲಿತಾಂಶವೇನು?

ಡಿಸೆಂಬರ್ 8, 2009 ರಂದು ಅಖಿಲ ಭಾರತ ಮುಷ್ಕರವು ದೇಶಾದ್ಯಂತ ವ್ಯಾಪಕವಾಗಿ ನಡೆದಿದ್ದು ಈ ಹೋರಾಟದ ಫಲವಾಗಿ ಅಖಿಲ ಭಾರತ ಕಟ್ಟಡ ಕಾರ್ಮಿಕರ ಫೆಡರೇಷನ್‌ನ ಪದಾಧಿಕಾರಿಗಳಾದ ಪ್ರಧಾನ ಕಾರ್ಯದರ್ಶಿ ದೀಬನ್ ಚಕ್ರವರ್ತಿ ಸಿಪಿಐ(ಎಂ) ಸಂಸದೀಯ ಮುಖಂಡರಾದ ಬಸುದೇವ್ ಆಚಾರ್ಯ, ತಪನ್ ಸೇನ್ ಮತ್ತು ನಿಯೋಗದ ಸದಸ್ಯರೊಡನೆ ಕೇಂದ್ರ ಕಾರ್ಮಿಕ ಮಂತ್ರಿ ಮಲ್ಲಿಕಾರ್ಜುನ ಖರ್ಗೆ ಹಾಗೂ ವಲಸೆ ಕಾರ್ಮಿಕರ ಸಮಸ್ಯೆ ಬಗೆಗೆ ಸಚಿವ ವಯಲಾರ್ ರವಿ ಅವರೊಂದಿಗೆ ಚರ್ಚೆ ನಡೆಸಲಾಗಿದೆ.

ಪ್ರಶ್ನೆ : ಹೋರಾಟದ ಮುಂದಿನ ಹಂತ ಏನು?

ಉತ್ತರ : ಹೋರಾಟದ ಮುಂದಿನ ಹಂತದ ಸ್ವರೂಪ ಕುರಿತು ಚರ್ಚಿಸಲು ಜನವರಿ 5 ಕೇರಳದ ಮಲ್ಲಪುರಂನಲ್ಲಿ ಸಿ.ಡಬ್ಲ್ಯುಎಫ್.ಐ ಸೆಕ್ರಾಟರಿಯೇಟ್ ಸಭೆ ನಡೆಯಲಿದೆ. ಈ ಸಭೆಯಲ್ಲಿ ಹೋರಾಟದ ಮುಂದಿನ ಹಂತದ ಸ್ವರೂಪದ ಕುರಿತು ಚರ್ಚಿಸಲಾಗುವುದು.

ಪ್ರಶ್ನೆ : ರಾಜ್ಯದ ಸಂಘಟನೆ ನಡೆದು ಬಂದ ದಾರಿ ಕುರಿತು ....

ಪುಟ 4 ಕ್ಕೆ

ಸಂಪಾದಕೀಯ

ಬೆಲೆ ಏರಿಕೆ ಬಿಸಿ - ಸರ್ಕಾರದ ನಿರ್ಲಕ್ಷ್ಯ

ಜೀವನಾವಶ್ಯಕ ಆಹಾರಧಾನ್ಯಗಳು ಹಾಗೂ ಅಗತ್ಯ ವಸ್ತುಗಳ ಬೆಲೆಗಳು ಏರುತ್ತಲೇ ಇರುವುದನ್ನು ಕೇಂದ್ರ ಸರ್ಕಾರ ಮತ್ತೊಮ್ಮೆ ಪುನರುಚ್ಚರಿಸಿದೆ. ಈ ಬೆಲೆ ಏರಿಕೆಯು ಈ ಒಂದು ದಶಕದಲ್ಲೇ ಅತೀ ಹೆಚ್ಚು ಎಂಬುದು ಕಳವಳಕಾರಿಯಾದ ಅಂಶವಾಗಿದೆ.

ಈಗ ಲಭ್ಯವಾದ ಅಧ್ಯಯನ ವರದಿಯಂತೆ ಕಳೆದ ವರ್ಷಕ್ಕೆ ಹೋಲಿಸಿದರೆ ಬೇಳೆ ಕಾಳುಗಳು ಶೇ.40 ರಷ್ಟು, ಈರುಳ್ಳಿ ಶೇ.15.4, ಆಲೂಗಡ್ಡೆ ಶೇ.13.6 ರಷ್ಟು, ಆಹಾರ ಪದಾರ್ಥಗಳು ಶೇ.19.9ರಷ್ಟು ಎಂದಿದೆ. ಗೋಧಿ ಶೇ.14, ಹಾಲು ಶೇ.13.6, ಅಕ್ಕಿ 12.7, ಹಣ್ಣು ಶೇ.11 ಎಂದು ಸರ್ಕಾರ ಹೇಳುತ್ತಿದೆ. ಆದರೆ ವಾಸ್ತವದಲ್ಲಿ ಇದಕ್ಕಿಂತಲೂ ಹೆಚ್ಚು. ಕೆಲವು ಬಾರಿ ದುಪ್ಪಟ್ಟು, ಉದಾಹರಣೆಗೆ ಅಕ್ಕಿ ಕೆ.ಜಿ.ಗೆ ರೂ.18 ರಿಂದ 28ರವರೆಗೆ ಇದ್ದದ್ದು ಈಗ ಕನಿಷ್ಠ ರೂ.28ರಿಂದ 40 ರೂ.ಗಳ ಗಡಿ ದಾಟಿದೆ. ತರಕಾರಿಬೇಳೆಗಳು ಇತ್ಯಾದಿಗಳದ್ದು ಇದೇ ಪಾಡು. ಆದರೆ ಇಂತಹ ಅಂಕಿ ಅಂಶಗಳನ್ನು ನೀಡಿ, ಸನ್ನಿವೇಶ ಗಂಭೀರ ಎಂದು ಹೇಳಿಬಿಟ್ಟರೆ ಸರ್ಕಾರದ ಹೊಣೆಗಾರಿಕೆ ಅಲ್ಲಿಗೆ ಮುಗಿಯುವುದಿಲ್ಲ. ಸಂಸತ್‌ನಲ್ಲಿ ಅರ್ಥ ಸಚಿವ ಪ್ರಣಬ್ ಮುಖರ್ಜಿ ಧಾನ್ಯ ಆಮದು ಮಾಡಿಕೊಳ್ಳುವ ಮಾತನಾಡಿರುವುದು ಪೂರ್ಣ ಹೊಣೆಗಾರಿಕೆ ವಹಿಸಿಕೊಂಡು ನಿಭಾಯಿಸದೇ ನುಣುಚಿಕೊಳ್ಳುವಂತಹದ್ದು. ನಿಜ. ಆಹಾರದ ವಸ್ತುಗಳ ಉತ್ಪಾದನೆ ಹೆಚ್ಚಬೇಕು. ಆದರೆ ಹೇಗೆ? ಈಗಾಗಲೇ ಒಟ್ಟು ಕಾರ್ಷಿಕ ಬಿಕ್ಕಟ್ಟಿನ ಘೋರ ಪರಿಣಾಮಗಳು, ಹಬ್ಬಿದ ಬರ, ನೆರೆ ಹಾವಳಿ ದಿವಾಳಿಯಿಂದಾಗಿ ಉತ್ಪಾದನೆ ಕುಸಿದಿದೆ. ಇನ್ನೂ ಕುಸಿಯುವ ಎಲ್ಲಾ ಲಕ್ಷಣಗಳು ಸ್ಪಷ್ಟವಾಗಿವೆ. ಈ ಕೊರತೆಯ ದುರ್ಲಾಭವನ್ನು ಅಕ್ರಮ ದಾಸ್ತಾನುಗಾರರು, ದೊಡ್ಡ ವಹಿವಾಟುದಾರರು ಪಡೆಯಲಿದ್ದಾರೆ. ಕೃತಕ ಅಭಾವವನ್ನು ಸೃಷ್ಟಿಸಿದ್ದಾರೆ. ಇಲ್ಲಿ ಸರ್ಕಾರದ ಹೊಣೆಯೇನು? ಕೇವಲ ಆಮದಿನ ಭರವಸೆಯೇ? ಇದಷ್ಟೇ ಬೆಲೆ ಏರಿಕೆ ತಡೆದು ಹಸಿವಿನ ಸಾಮ್ರಾಜ್ಯಕ್ಕೆ ತಳ್ಳಲ್ಪಡುತ್ತಿರುವ ಜನತೆಯನ್ನು ಕಾಪಾಡುವುದಿಲ್ಲ. ಆದ್ದರಿಂದ ಬೃಹತ್ ಕಂಪನಿಗಳಿಗೆ ಆ ವಾಯಿದೆ ವ್ಯಾಪಾರ, ಊಹಾತ್ಮಕ ವ್ಯವಹಾರ, ದಾಸ್ತಾನು ಮಾಡಿಕೊಳ್ಳಲು ಮುಕ್ತ ಅವಕಾಶದಂತಹ ಮಾರುಕಟ್ಟೆಯನ್ನೇ ಅಲ್ಲೋಲ ಕಲ್ಲೋಲಗೊಳಿಸುವಂತಹ ಕ್ರಮಗಳನ್ನು ನಿರ್ಬಂಧಿಸಲೇಬೇಕು. ಅಕ್ರಮ ದಾಸ್ತಾನುದಾರರ ಮೇಲೆ ಧಾಳಿ ನಡೆಸಿ ವಶಪಡಿಸಿಕೊಳ್ಳಬೇಕು. ಮುಖ್ಯವಾಗಿ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಸುಲಭದರದಲ್ಲಿ ಜೀವನಾವಶ್ಯಕ ವಸ್ತುಗಳು ಸಿಗುವಂತೆ ಪಡಿತರ ವ್ಯವಸ್ಥೆಯ ಸಾರ್ವತ್ರೀಕರಣ ಮಾಡಬೇಕು. ಕಾರ್ಪೋರೇಟ್ ಕಂಪನಿಗಳಿಗೆ ಯಥೇಚ್ಛವಾಗಿ ರಿಯಾಯಿತಿ ನೀಡಲು ಅಳುಕದ ಸರ್ಕಾರ ಪಡಿತರಕ್ಕೆ ಸಹಾಯ ನೀಡಲು ಕನಿಷ್ಠವಾದ ಹಣವನ್ನು (ರೂ.56,000 ಕೋಟಿ) ಒದಗಿಸುತ್ತಿಲ್ಲ. ಈ ದಿಶೆಯಲ್ಲಿ ಎಡಪಕ್ಷಗಳ ಹಲವಾರು ಸೂಚನೆಗಳನ್ನು ಸರ್ಕಾರ ಒಪ್ಪಲೇಬೇಕು. ಆದರೆ ಸರ್ಕಾರ ದಿವ್ಯನಿರ್ಲಕ್ಷ್ಯವನ್ನೇ ತೋರಿಸುತ್ತಾ ಜನವಿರೋಧಿಯಾಗಿಯೇ ವರ್ತಿಸುತ್ತಿದೆ.


ಇಂತಹ ಗಂಭೀರ ಸನ್ನಿವೇಶದಲ್ಲಿ ಕರ್ನಾಟಕ ರಾಜ್ಯ ಸರ್ಕಾರ ಸ್ವಲ್ಪ ಕಡಿಮೆ ಬೆಲೆಯಲ್ಲಿ ವಾರದಲ್ಲಿ ಒಂದು ದಿನ ಬೆಂಗಳೂರಿನ ಜನತಾ ಬಜಾರ್‌ಗಳಲ್ಲಿ ಅಕ್ಕಿ ನೀಡುವ ಒಂದು ಕಿರು ನಾಟಕವನ್ನಾಡುತ್ತಿತ್ತು. ಇಂತಹ ಒಂದು ಪುಟ್ಟ ಯೋಜನೆಯನ್ನು ಮುಖ್ಯಮಂತ್ರಿಗಳು ನಿಲ್ಲಿಸಿ ಬಿಟ್ಟು ಅಕ್ರಮ ದಂಧೆಕೋರರಿಗೆ ಮಣಿದಿದ್ದಾರೆ. ಇದನ್ನು ಆರಂಭಿಸುವ ಮೊದಲು ರಾಜ್ಯದಾದ್ಯಂತ ವಿಸ್ತರಿಸುವುದಾಗಿ ಸರ್ಕಾರ ಹೇಳಿತ್ತು. ಅವರ ಅಭಿಪ್ರಾಯದಂತೆ ಗಿರಣಿ ಮಾಲೀಕರ ಹಿತಗಳಿಗೆ ಶರಣಾಗಿದೆ. ಎರಡು ರೂಪಾಯಿಗೆ ಕೆ.ಜಿ.ಅಕ್ಕಿ ನೀಡುವ ಅದರ ಚುನಾವಣೆ ಭರವಸೆ ಎಂದೋ ಮರೆತು ವಚನಭ್ರಷ್ಟತೆ ತೋರಿದ ಬಿಜೆಪಿ ಸರ್ಕಾರಕ್ಕೆ ಜನರ ಹಿತಗಳತ್ತ ಗಮನವೆಲ್ಲಿ?

ರಾಜ್ಯದಲ್ಲಿ ಅಕ್ಕಿ ವ್ಯಾಪಾರಿಗಳು ಅಪಾರ ಪ್ರಮಾಣದಲ್ಲಿ ಅಕ್ರಮವಾಗಿ ಅಕ್ಕಿ ಮುಂತಾದ ಧಾನ್ಯಗಳನ್ನು ದಾಸ್ತಾನು ಮಾಡಿದ್ದಾರೆ. ಆಳಂದದ ಮೂಲಕ ಗುಜರಾತ್‌ಗೆ ಸಾಗಿಸುತ್ತಿದ್ದ ಒಂದು ಲಕ್ಷ ಕೆ.ಜಿ.ಯಷ್ಟು ಅಕ್ಕಿ ಪೊಲೀಸರ ಒಂದು ದಾಳಿಯಲ್ಲಿ ಗುರುವಾರ ಸಿಕ್ಕಿದೆ. ಆದರೆ ಅಂತಹ ಕ್ರಮ ವಹಿಸಲು ನೀಡಲು ಸರ್ಕಾರ ಹಿಂದೇಟು ಹಾಕುತ್ತಿದೆ. ಆದ್ದರಿಂದ ಸರ್ಕಾರ ದಿಢೀರನೆ ಅಕ್ಕಿ ಸಂತೆಯನ್ನು ರದ್ದು ಮಾಡಿದ್ದು ಸರಿಯಲ್ಲ. ಮುಖ್ಯವಾಗಿ ತನ್ನ ಚುನಾವಣಾ ಭರವಸೆಯಂತೆ 2 ರೂ.ಗೆ ಕೆ.ಜಿ ಅಕ್ಕಿ ನೀಡಬೇಕು. ಮಾತ್ರವಲ್ಲದೇ ಕೇರಳದ ಎಲ್.ಡಿ.ಎಫ್. ಸರ್ಕಾರದ ಮಾದರಿಯಂತೆ ಎಲ್ಲಾ ಜೀವನಾವಶ್ಯಕ ವಸ್ತುಗಳು ಕಡಿಮೆ ದರದಲ್ಲಿ ಸಿಗುವಂತೆ ಕೂಡಲೇ ಕ್ರಮ ವಹಿಸಬೇಕು.

ಬೆಲೆ ಏರಿಕೆ ವಿರೋಧಿಸಿ ಆಹಾರದ ಹಕ್ಕಿಗಾಗಿ ರಾಜ್ಯದಲ್ಲಿ ಚಳುವಳಿ ನಡೆದ ಬಳಿಕವೂ, ರಾಜಧಾನಿಯಲ್ಲಿ ಅಣಿ ನೆರೆದು ಸಾವಿರ ಸಾವಿರ ಜನತೆ ಆಗ್ರಹಿಸಿದ್ದರೂ ಅದರ ಬಗ್ಗೆ ಚಕಾರ ಎತ್ತದೇ ನಿರ್ಲಕ್ಷಿಸಿರುವ ಸರ್ಕಾರದ ನಿಲುವು ಖಂಡನೀಯ. ಆದ್ದರಿಂದ ಒಂದೆಡೆ ಮಾತುಕತೆಗೆ ಆಗ್ರಹಿಸುತ್ತಲೇ ರಾಜ್ಯದಾದ್ಯಂತ ಪಡಿತರ ವಿಷಯದಲ್ಲಿ ವ್ಯಾಪಕ ಹೋರಾಟ ತೀವ್ರಗೊಳಿಸುವುದು ಅನಿವಾರ್ಯ.


ತೀವ್ರ ಅಸ್ಥಿರತೆಯತ್ತ ಬಿಜೆಪಿ ಸರ್ಕಾರ

‘ಹೋದೆಯಾ ಪಿಶಾಚಿ ಎಂದರೆ ಬಂದೆ ಗವಾಕ್ಷೀಲಿ’ ಎಂಬಂತಹ ಸ್ಥಿತಿಯೇ ಇಂದಿನ ಬಿಜೆಪಿಯದು. ಗಣಿಗಳ್ಳರ ಇಷ್ಟಾರ್ಥ ಪೂರೈಕೆಯಾದ ಮೇಲೆ ಭಿನ್ನಮತ ಮುಗಿಯಿತೆಂದೂ, ತಾವೆಲ್ಲಾ ಬಹಳ ಒಗ್ಗಟ್ಟಿನಿಂದ ರಾಜ್ಯದ ಅಭಿವೃದ್ಧಿಗೆ (?) ಟೊಂಕಕಟ್ಟಿ ನಿಂತುಬಿಟ್ಟಿದ್ದೇವೆಂದು ಘೋಷಿಸುತ್ತಿದ್ದ ನಾಯಕರೀಗ ರೆಸಾರ್ಟ್, ಮಠ, ಕೇಶವಕೃಪಾಗಳನ್ನು ಹುಡುಕಿಕೊಂಡು ಓಡಾಡುತ್ತಿದ್ದಾರೆ. ‘ರೆಡ್ಡಿಗಳನ್ನು ತೃಪ್ತಿಪಡಿಸುವುದರಲ್ಲೇ ಮೈ ಮರೆತು, ತಮ್ಮನ್ನು ಮರೆತುಬಿಡಲಾಗಿದೆ, ರೆಡ್ಡಿಗಳು ತಮ್ಮನ್ನು ಬಳಸಿ ಬಿಸಾಡಿದ್ದಾರೆ’ ಎಂಬುದು ಈ ಭಿನ್ನಮತೀಯರ ದೂರು! 7 ಸಚಿವರನ್ನು ಒಳಗೊಂಡು ಒಟ್ಟು 24 ಶಾಸಕರ ಬಂಡಾಯವೆದ್ದು ಬಿಜೆಪಿ ಸರ್ಕಾರವನ್ನೇ ಔಟ್ ಮಾಡಿಬಿಡುವ ಕೂಗು ಹಾಕಿರುವುದು ಬಿಜೆಪಿ-ಆರ್‌ಎಸ್‌ಎಸ್ ವಲಯದಲ್ಲಿ ತಲ್ಲಣವನ್ನೇ ಸೃಷ್ಟಿಸಿದೆ. ಬಿಜೆಪಿಯೇ ಒಡೆದು ಹೋಗಬಹುದು, ಈ ಸರ್ಕಾರ ಪತನವಾಗಿದೆ ಇದನ್ನೇ ಬಳಸಿ ಪರ್ಯಾಯ ಸರ್ಕಾರ ರಚಿಸಬಹುದು ಅಥವಾ ಮಧ್ಯಂತರ ಚುನಾವಣೆಗೆ ಹೋಗಬಹುದು ಎಂಬಂತಹ ವಿಪರೀತ ಪರಿಣಾಮಗಳ ಲೆಕ್ಕಾಚಾರಗಳೂ ತೇಲಿ ಬಂದವು. ಹೀಗಾಗಿಯೇ ಮುಖ್ಯಮಂತ್ರಿ ಯಡಿಯೂರಪ್ಪ ನೆರೆ ಸಂತ್ರಸ್ತರ ಕಣ್ಣೀರು ಒರೆಸುವ ನಟನೆ ಕೈಬಿಟ್ಟು, ಕುರ್ಚಿ ಅಲುಗಾಡಿಸುತ್ತಿರುವ ಭಿನ್ನಮತೀಯರ ಕಣ್ಣೀರು ಒರೆಸಿ, ಪನ್ನೀರು ಕುಡಿಸಲು ಪೂರ್ಣಾವಧಿ ಸ್ವಯಂ ಸೇವಕರಾಗಿ ಕಾಲು ಸುಟ್ಟ ಬೆಕ್ಕಿನಂತೆ ಆರ್.ಎಸ್.ಎಸ್. ಕಛೇರಿ, ಭಿನ್ನಮತೀಯರ ರಾಜಕೀಯ ಅಡಗು ತಾಣದತ್ತ ಓಡಾಡುತ್ತಿದ್ದಾರೆ.



ಭಿನ್ನಮತೀಯರ ಬೇಡಿಕೆಗಳು!

ತಮಗೆ ಕೊಟ್ಟ ಭರವಸೆ ಈಡೇರಿಸಿ ಎಂದು ಭಿನ್ನಮತಿಯ ಈ ಗುಂಪು ಕೇಳುತ್ತಿದೆ! ಕಳೆದ ತಿಂಗಳ ಕಿತ್ತಾಟದಲ್ಲಿ ಇವರ ನಡುವೆ ಏನೇನು ನಡೆದಿತ್ತು. ಒಪ್ಪಂದಗಳೇನು ಎಂಬುದು ರಾಜ್ಯದ ಜನತೆಗೆ ಅಧಿಕೃತವಾಗಿ ಇವರು ತಿಳಿಸಬೇಕಿತ್ತು. ಈ ಒಳ ಒಪ್ಪಂದದಂತೆ ಶಾಸಕ ರೇಣುಕಾಚಾರ್ಯ ಒಳಗೊಂಡು ಮೂವರಿಗೆ ಸಚಿವ ಸ್ಥಾನ, ಉಳಿದ ಒಂಭತ್ತು ಶಾಸಕರಿಗೆ ಸಂಪುಟ ದರ್ಜೆಯ ಸ್ಥಾನ ಸಿಗುವಂತೆ, ನಿಗಮ-ಮಂಡಳಿ ನೇಮಕ, ಈಗಿರುವ ಪಕ್ಷೇತರರಾಗಿದ್ದ, ಸಚಿವರ ಜಿಲ್ಲಾ ಉಸ್ತುವಾರಿ, ಖಾತೆಗಳನ್ನು ಬದಲಾಯಿಸುವುದು ಇತ್ಯಾದಿ ಬೇಡಿಕೆಗಳನ್ನು ಇಡಲಾಗಿದೆ. ಇದರಲ್ಲಿ ಒಬ್ಬರಿಗೆ ಈಗ ಸಚಿವರ ಸ್ಥಾನ ನೀಡುವ ಭರವಸೆಯನ್ನು ಸಿ.ಎಂ. ಕೊಟ್ಟಿದ್ದಾರಂತೆ.. ಉಳಿದವರಿಗೂ ಸಮಾಧಾನಕರ ಮೇವಿದೆಯಂತೆ!



ಕೃಪೆ: ಪ್ರಜಾವಾಣಿ

ವಿಕೃತ ಸಂತಾನಗಳು

ರಾಜ್ಯದ ಬಿಜೆಪಿಯಲ್ಲಂತೂ ಈಗ ಹಲವು ಗುಂಪುಗಳು ಸೃಷ್ಟಿಯಾಗುತ್ತಲೇ ಇವೆ. ಯಡಿಯೂರಪ್ಪನವರದ್ದು ಒಂದು, ಜರ್ನಾರ್ಧನರೆಡ್ಡಿಗಳದ್ದು ಇನ್ನೊಂದು, ಅನಂತಕುಮಾರ್ ಮತ್ತೊಂದು, ರೇಣುಕಾಚಾರ್ಯ ಇತ್ಯಾದಿಗಳದ್ದು ಮಗದೊಂದು.... ಇನ್ನೂ....ಹೀಗೆ..., ಹೀಗೆ ರಾಷ್ಟ್ರ ನಾಯಕರನ್ನು ಒಳಗೊಂಡು ಬಿಜೆಪಿ ಒಡೆದ ಮನೆ. ಅದಕ್ಕೆ ದೇಶದ, ರಾಜ್ಯದ ಹಿತ ಕಾಯುವುದು ಕಾಲ ಕಸಕ್ಕಿಂತ ಕಡೆ, ರಾಜಕೀಯ ಮತ್ತು ಅಧಿಕಾರವನ್ನೂ ಬಳಸಿ ಲೂಟಿ ಹೊಡೆಯುವ ರಾಜಕೀಯ ದಂಧೆಯನ್ನಾಗಿಸಿ ಕೊಂಡಿರುವ ಬಿಜೆಪಿಯಂತಹ ಪಕ್ಷಕ್ಕೆ ಇನ್ನೇನು ಮಾಡಲು ಸಾಧ್ಯ. ‘ಹಿಂದುತ್ವ’ ಎನ್ನುವುದೂ ಕೂಡ ದೇಶ ವಿಭಜಕ ಸಿದ್ಧಾಂತ. ಅದು ಅತ್ಯಂತ ಬಲಪ್ರತಿಗಾಮಿ ಬಂಡಳವಾಳಶಾಹಿ ರಾಜಕೀಯ ಸಿದ್ಧಾಂತವಾಗಿದೆ. ದೇಶ ವಿದೇಶದ ಪ್ರತಿಗಾಮಿಗಳ ಸೇವೆಗೆ ತನ್ನನ್ನು ಪೂರ್ಣ ಸಮರ್ಪಿಸಿಕೊಂಡಿದೆ. ಜನತೆ ಕೊಟ್ಟ ಅಧಿಕಾರವನ್ನು ಆ ಉದ್ದೇಶಕ್ಕೆ ಬಳಸುತ್ತಿರುವ ಆರ್.ಎಸ್.ಎಸ್.ನ ವಿಕೃತ ಸಂತಾನವಾಗಿರುವ ಬಿಜೆಪಿಯಂತಹ ಪಕ್ಷದಿಂದ ಇನ್ನೇನನ್ನು ನಿರೀಕ್ಷಿಸಲು ಸಾಧ್ಯ? ಈಗಲೂ ರಾಜ್ಯದಲ್ಲಿನ ಅಧಿಕಾರದಾಹಿಗಳ ಈ ಕಚ್ಚಾಟದ ಶಮನಕ್ಕೆ ‘ಸಾಂಸ್ಕೃತಿಕ ಸಂಘಟನೆ’ಯೆಂದು ಹೇಳಿಕೊಳ್ಳುವ ಆರ್‌ಎಸ್‌ಎಸ್ ತನ್ನ ಕೈ ಚಾಚಿದೆಯೆಂದರೆ ಅದರ ದಿವಾಳಿತನ ಎಷ್ಟು ಎಂದು ತಿಳಿದೀತು. ಇಂತಹ ಗುಂಪುಗಳ ಕಚ್ಚಾಟಗಳು, ಸರ್ಕಾರದಲ್ಲಿ ಹುಟ್ಟುಹಾಕುವ ಅಸ್ಥಿರತೆಗಳಿಂದ ಚುನಾಯಿತ ಸರ್ಕಾರ ಅಲುಗಾಡುತ್ತಿದ್ದರೆ ಇಡೀ ಆಡಳಿತ ಯಂತ್ರವನ್ನೂ-ಸರ್ಕಾರ ಮತ್ತು ಸಚಿವರನ್ನೂ ತನ್ನ ಮನಬಂದಂತೆ ಆಡಿಸಬಹುದು ಎಂಬ ದುರಾಲೋಚನೆ ಆರ್‌ಎಸ್‌ಎಸ್‌ನಲ್ಲಿದೆ. ಆದ್ದರಿಂದಲೇ ಬಿಜೆಪಿಯಲ್ಲಿ ಕಿತ್ತಾಟ ಎಷ್ಟೇ ನಡೆಯುತ್ತಿದ್ದರೂ ರಾಜ್ಯದಲ್ಲಿ ಕೋಮುವಾದಿ, ಅಜೆಂಡಾ ಜಾರಿ ಹಾಗೂ ಗುಜರಾತ್ ಮಾದರಿಗೆ ಸಿದ್ಧತೆಗಳು ಆರ್‌ಎಸ್‌ಎಸ್‌ನಿಂದ ಎಳ್ಳಷ್ಟು ಬಿಡದೇ

ಪುಟ 4ಕ್ಕೆ



ದಕ್ಷಿಣ ಕನ್ನಡ

ಖಾಕಿ ಪೊಲೀಸರ ಚೆಡ್ಡಿ ಪ್ರೇಮ

ಮಂಗಳೂರು ಪೊಲೀಸರ ಖಾಕಿ ಖದರ್ ಜೊತೆ ಚೆಡ್ಡಿ ಪ್ರೇಮವೂ ದಿನೇ ದಿನೇ ಬಯಲಾಗುತ್ತಿದೆ. ಇಲಾಖೆಯೊಳಗೆ ಭಾರೀ ಪ್ರಮಾಣದಲ್ಲಿ ಚೆಡ್ಡಿ ಪಡೆ ಸೇರಿಕೊಂಡಿದೆ ಎಂಬುದಕ್ಕೆ ಸಾಕಷ್ಟು ಪುಷ್ಟಿ ಸಿಗುತ್ತಿದೆ. ಗಮನಕ್ಕೆ ಬಂದ ಇಂತಹ ಕೆಲ ಘಟನೆಗಳ ವಿವರ ಇಲ್ಲಿದೆ.

ವಿಎಚ್‌ಪಿ ನಾಯಕನ ವಿರುದ್ಧದ ಸಾಕ್ಷ್ಯ ನಾಶ

ರಮ್ಯ ಎಂಬ ಹಿಂದೂ ಯುವತಿ ಮುಸ್ಲಿಂ ಯುವಕನೊಂದಿಗೆ ನಾಪತ್ತೆಯಾಗಿದ್ದಾಳೆ, ಆಕೆಯನ್ನು ಪತ್ತೆ ಮಾಡಿ ಎಂದು ಹಿಂದೂ ಸಂಘಟನೆಗಳು ಒತ್ತಾಯಿಸಿದ್ದವು. ಇದಕ್ಕೆ ಲವ್ ಜಿಹಾದ್ ಎಂಬ ಹಣೆಪಟ್ಟಿಯನ್ನೂ ಕಟ್ಟಿದ್ದರು. ಬಜರಂಗದಳ, ವಿಎಚ್‌ಪಿ ನೇತೃತ್ವದಲ್ಲಿ ಕೊಣಾಜೆ ಪೊಲೀಸ್ ಠಾಣೆ ಮುಂದೆ ಪ್ರತಿಭಟನೆಯೂ ನಡೆಯಿತು. ಇಲ್ಲಿ ಭಾಷಣ ಮಾಡಿದ ಜಗದೀಶ ಶೇಣವ ಎಂಬ ವಿಎಚ್‌ಪಿ ನಾಯಕ ಮುಸ್ಲಿಮರ ಕಾಲು ಕಡಿಯುತ್ತೇನೆ, ಕೈ ಕಡಿಯುತ್ತೇನೆ, ದೇಶದಿಂದಲೇ ಹೊರಗೆ ಓಡಿಸುತ್ತೇವೆ ಎಂಬ ಉದ್ರೇಕಕಾರಿ ಭಾಷಣವನ್ನು ಮಾಡಿದ. ಈ ಹೇಳಿಕೆಗೆ ವ್ಯಾಪಕ ಆಕ್ರೋಶ, ವಿರೋಧ ವ್ಯಕ್ತವಾದಾಗ ಭಾಷಣದ ವೀಡಿಯೋ ಚಿತ್ರೀಕರಣ ನೀಡುವಂತೆ ಎಸ್‌ಪಿ ಠಾಣೆಗೆ ಸೂಚನೆ ನೀಡಿದರು. ಆಗ ವೀಡಿಯೋ ಚಿತ್ರೀಕರಣ ಮಾಡಿದ್ದ ಭಾಸ್ಕರ್ ಎಂಬ ಪೇದೆ 'ವೀಡಿಯೋ ಚಿತ್ರೀಕರಣ ಮಾಡಿಲ್ಲ' ಎಂದು ಕೈತೊಳೆದುಕೊಂಡ.

ಆತನಿಗೆ ನಿಜವಾದ ಸಮಸ್ಯೆ ಆದದ್ದು ಮರುದಿನ ಪೇಪರ್‌ನಲ್ಲಿ ಬಂದ ಪ್ರತಿಭಟನೆಯ ಫೋಟೋ. ಈ ಚಿತ್ರದಲ್ಲಿ ಭಾಸ್ಕರ್ ಕ್ಯಾಮಾರ ಬಳಸುತ್ತಿದ್ದ ದೃಶ್ಯ ಸ್ಪಷ್ಟವಾಗಿತ್ತು. ಕೂಡಲೇ ಈ ಬಗ್ಗೆ ಎಸ್‌ಪಿ ತನಿಖೆಗೆ ಆದೇಶಿಸಿದರು. ಆಗ ಗೊತ್ತಾದದ್ದು, ಪೇದೆ ಭಾಸ್ಕರ್, ವಿವಾದಿತ ಉದ್ರೇಕಕಾರಿ ಭಾಷಣ ನಾಶಪಡಿಸಿ ವಿಎಚ್‌ಪಿ ನಾಯಕನನನ್ನು ಬಚಾವ್ ಮಾಡಿದ್ದ ಎಂದು. ಕೂಡಲೇ ಆತನನ್ನು ಅಮಾನತು ಮಾಡುವ ಆದೇಶವೂ ಹೊರಬಿತ್ತು.

ಈ ಭಾಸ್ಕರ್ ಮಂಗಳೂರು ಗ್ರಾಮಾಂತರ ಎಸ್‌ಐ ಪ್ರಕಾಶ್ ಎಂಬವನ ಸಹೋದರ. ಎನ್‌ಕೌಂಟರ್ ಸ್ಪೆಷಲಿಸ್ಟ್ ಎಂದು ಕರೆಸಿಕೊಳ್ಳುವ ಪ್ರಕಾಶ್ ಮತ್ತು ಭಾಸ್ಕರ್ ಸಂಘ ಪರಿವಾರದ ಕಟ್ಟಾ ಕಾರ್ಯಕರ್ತರು. ಎಬಿವಿಪಿ ಮತ್ತು ಆರ್‌ಎಸ್‌ಎಸ್‌ನಲ್ಲಿ ಸಕ್ರಿಯರಾಗಿದ್ದರು.



ಉದ್ರೇಕಕಾರಿ ಭಾಷಣದ ವಿರುದ್ಧ ಪ್ರತಿಭಟನೆ. ಒಳಚಿತ್ರ ಜಗದೀಶ ಶೇಣವ

ಮುಸ್ಲಿಮರ ಮೇಲೆ ವಿನಾ ಹಲ್ಲೆ

ಮಂಗಳೂರಿನ ವಿಮಾನ ನಿಲ್ದಾಣ ಇರುವ ಬಜಪೆ ಕೋಮುಸೂಕ್ಷ್ಮ ಪ್ರದೇಶ. ಇಲ್ಲಿ ಡಿಸೆಂಬರ್ 12ರಂದು ಗೆಳೆಯನನ್ನು ಡ್ರಾಪ್ ಮಾಡಲು ಬಂದ ಯುವಕರ ತಂಡ ರಸ್ತೆ ಬದಿಯಲ್ಲಿ ವಾಹನ ನಿಲ್ಲಿಸಿ ಗೂಡಂಗಡಿಯಲ್ಲಿ ಚಾ ಕುಡಿಯುತ್ತಿತ್ತು. ಇಲ್ಲಿಗ ಆಗಮಿಸಿದ ಬಜಪೆ ಎಸ್‌ಐ ಪ್ರಮೋದ್, ವಿನಾ ಕಾರಣ ಇವರ ಮೇಲೆ ಹಲ್ಲೆ ನಡೆಸಿದ್ದಾನೆ. ಇದನ್ನು ಪ್ರಶ್ನಿಸಿದಾಗ ಕೇಸು ಹಾಕುವ ಬೆದರಿಕೆ ಹಾ ತೆರಳಿದ್ದಾನೆ. ಇವರು ಮುಸ್ಲಿಮರು ಎಂದು ಭಾವಿಸಿ ಪ್ರಮೋದ್ ಈ ಕೃತ್ಯ ನಡೆಸಿದ್ದಾನೆ. ಇಂತಹ ಹಲವ ಘಟನೆಗಳು ಇಲ್ಲಿ ದಿನನಿತ್ಯ ನಡೆಯುತ್ತಿವೆ. ಇಲಾಖೆಯ ಅಧಿಕಾರ ಬಳಸಿ ಬಡಪಾಯಿಗಳನ್ನು ಬೆದರಿಸುವ ಪ್ರಮೋದ್, ತಾನು ಸಂಘದ ಹೆಮ್ಮೆಯ ಕಾರ್ಯಕರ್ತ ಎಂದು ಹೇಳಿಕೊಳ್ಳುತ್ತಾನೆ.

ಸಂಘ ಪರಿವಾರದ ಎಲ್ಲ ಚಟುವಟಿಕೆಗಳಿಗೂ ನೇರವಾಗಿ ಹಾಗೂ ಪರೋಕ್ಷವಾಗಿ ಪ್ರೋತ್ಸಾಹ ನೀಡುವ, ಬೆಂಬಲಿಸುವ ಇಂತಹ ಅಧಿಕಾರಿಗಳಿಂದ ಕರಾವಳಿ ಜಿಲ್ಲೆಯ ಜನ ನೆಮ್ಮದಿ ಕಳೆದುಕೊಂಡಿದ್ದಾರೆ.

ಅಲ್ಪಸಂಖ್ಯಾತರ ಮೇ ದೌರ್ಜನ್ಯ, ನೈತಿಕ ಪೊಲೀಸ್‌ಗಿರಿ ಮುಂತಾದ ಸಮಾಜ ಬಾಹಿರ ಕೃತ್ಯಗಳಿಗೂ ಇವರೇ ಪ್ರೇರಣೆ ನೀಡುತ್ತಿದ್ದಾರೆ ಎಂಬುದು ಗುಟ್ಟಾಗಿ ಉಳಿದಿಲ್ಲ. ಇಂತಹ ಪೊಲೀಸ್ ಅಧಿಕಾರಿಗಳ ಕಾರ್ಯವೈಖರಿ ಬಗ್ಗೆ ಸಮಗ್ರ ತನಿಖೆ ನಡೆಯಬೇಕಾಗಿದೆ.

ಅಸ್ಥಿರತೆಯತ್ತ ಬಿಜೆಪಿ ಸರ್ಕಾರ....

ಪುಟ 3 ರಿಂದ

ನಿರಂತರವಾಗಿ ನಡೆಯುತ್ತಿರುವುದು. ಮತ್ತು ಅಪಾರ ಸಂಪನ್ಮೂಲಗಳನ್ನು ಸಂಗ್ರಹಿಸುತ್ತಿರುವುದು.

ಹೇಸಿಗೆ ತರುವ ಮಠಾಧೀಶರು

ಇನ್ನೊಂದು ಹೇಸಿಗೆ ತರುವ ಸಂಗತಿಯೆಂದರೆ ರಾಜ್ಯದ ಜನತೆಯನ್ನು ವಂಚಿಸಿ, ಲೂಟಿ ಹೊಡೆಯುವ ಅಧಿಕಾರದಾಹಿಗಳ ಹಂಚಿಕೆಗಳನ್ನು ಶಮನಗೊಳಿಸಲು ಕೆಲವು ಮಠಾಧೀಶರು ತೊಡಗಿದ್ದಾರೆ. ಉಡುಪಿಯ ಪೇಜಾವರರು ಪೂರ್ಣಾವಧಿ ರಾಜಕಾರಣಕ್ಕೆ ಇಳಿದಿರುವುದು ಗೊತ್ತಿರುವ ಸಂಗತಿ. ಆದರೆ ಸಿದ್ದಗಂಗಾ ಹಿರಿಯ ಸ್ವಾಮೀಜಿ, ಮೈಸೂರಿನ ಶಿವರಾತ್ರಿ ಮಠದ ಸ್ವಾಮೀಜಿಗಳು ಬಿಜೆಪಿಯ ಭಿನ್ನಮತಕ್ಕೆ ತ್ಯಾಪೆ ಹಚ್ಚುವುದರಲ್ಲಿ ಕಾರ್ಯಮಗ್ನರಾಗಿದ್ದಾರೆ. ಭ್ರಷ್ಟರನ್ನು ಅವರ ದುಷ್ಟತನವನ್ನು ಕಾಯುವ ಅನೈತಿಕ ರಾಜಕಾರಣಕ್ಕೆ ಈ 'ಧಾರ್ಮಿಕ' ಪ್ರಮುಖರ ಸಹಭಾಗಿತ್ವ ನೈತಿಕ ದಿವಾಳಿತನವನ್ನೇ ತೋರಿಸುತ್ತದೆ. ಇಂತಹದ್ದರ ಬಗ್ಗೆ ಅವರಿಗೆ ಅಸಹ್ಯ ಹುಟ್ಟಿಸದೇ ಇರುವುದು ಯಾವ ಧಾರ್ಮಿಕ (ಜಾತಿ) ಪುರುಷಾರ್ಥವಿದೆಯೋ ಅವರೇ ಹೇಳಬೇಕು.

ಅಧಃಪತನ

ಇಲ್ಲಿ ಬಿಜೆಪಿಯ ಮತ್ತೊಂದು ರಾಜಕೀಯ ಅಧಃಪತನದ ಪ್ರಯತ್ನವನ್ನು ಗಮನಿಸಬೇಕು. 24 ಶಾಸಕರ ಬಂಡಾಯವನ್ನು ಬಗ್ಗುಬಡಿಯಲು, ಸರ್ಕಾರವನ್ನು ಹೇಗಾದರೂ ಉಳಿಸಿಕೊಳ್ಳಲು ಮತ್ತೆ ಬೇರೆ ಪಕ್ಷಗಳ ಶಾಸಕರನ್ನು ಕುಖ್ಯಾತ 'ಆಪರೇಷನ್ ಕಮಲ' ದ ಹೆಸರಿನಲ್ಲಿ ಖರೀದಿಸಲು ಮುಂದಾಗಿರುವುದು. ಮತ್ತೊಂದೆಡೆ ವಿಧಾನಪರಿಷತ್ ಚುನಾವಣೆಯಲ್ಲಿ ಗೆಲ್ಲಲು ಮತದಾರರಾಗಿರುವ ಸ್ಥಳೀಯ ಸಂಸ್ಥೆಗಳ ಸದಸ್ಯರಿಗೆ ರೆಸಾರ್ಟ್ ಮೋಜು, ಅಲ್ಲದೇ ಹಣ, ಬಂಗಾರ ಆಮಿಷ ಒಡ್ಡಲಾಗಿದೆ. ಬಿಜೆಪಿಯ ಈ ಆಮಿಷಗಳ ಪ್ರಯತ್ನಗನ್ನು ಚುನಾವಣಾ ಆಯೋಗ ಬಾಯಿ ಮುಚ್ಚಿ ನೋಡುತ್ತಿದೆ!

ಇಂತಹ ಸ್ಥಿತಿಯಲ್ಲಿ ವಿರೋಧಪಕ್ಷಗಳ ಪಾತ್ರವೇನು?

ಬಳಸಲು ಮತ್ತೆ ಕಾಂಗ್ರೆಸ್ ಜಾತ್ಯಾತೀತ ಜನತಾದಳಗಳ ನಡುವೆ ಮರು 'ಮೈತ್ರಿ' ಏರ್ಪಡಿಸಿಕೊಳ್ಳುವ ಪ್ರಯತ್ನಗಳಿಗೆ ಚಾಲನೆ ಸಿಕ್ಕಿದ ಸನ್ನಿವೇಶ (ಹಿಂದಿನ ಬಿಕ್ಕಟ್ಟಿನಲ್ಲಿ ಜೆಡಿ(ಎಸ್) ಹಾಗೂ ಯಡಿಯೂರಪ್ಪ ಮಾತುಕತೆಗಳು) ರಾಜ್ಯದಲ್ಲಿ ಅವಕಾಶವಾದಿ ರಾಜಕಾರಣ ಮೇಲುಗೈ ಪಡೆಯುತ್ತಿರುವುದನ್ನು ತೋರಿಸುತ್ತದೆ. .

ವಿಫಲ ಸರ್ಕಾರ

ಬಿಜೆಪಿಯೊಳಗೆ ಇಷ್ಟೆಲ್ಲಾ ಕಿತ್ತಾಟದ ತಾರಕಗಳು, ಸರ್ಕಾರದ ಅಸ್ಥಿರತೆಯು ತೀವ್ರಗೊಂಡಿರುವುದನ್ನು ಸೂಚಿಸುತ್ತವೆ. ಜನತೆಯ ಬರ-ನೆರೆ, ಬೆಲೆ ಏರಿಕೆ, ಉದ್ಯೋಗ ನಾಶದಂತಹ ತೀವ್ರ ಸಂಕಷ್ಟದಲ್ಲಿರುವಾಗ ಇಂತಹ ಅಸ್ಥಿರ ಸರ್ಕಾರ ನಿಜಕ್ಕೂ ಪರಿಹಾರ ನೀಡಲು, ಸಹಾಯದ ಹಸ್ತಚಾಚಲು ಸಾಧ್ಯವೇ? ಇಂತಹ ಅಸ್ಥಿರತೆ ಹಾಗೂ ಆಡಳಿತ ಯಂತ್ರವನ್ನು ದುರ್ಬಲಗೊಳಿಸುವ ವಿಪರೀತ ರಾಜಕೀಯ ಹಸ್ತಕ್ಷೇಪದಿಂದ ಜನಪರವಾದ ಉತ್ತಮ, ದಕ್ಷ ಆಡಳಿತವನ್ನು ನಿರೀಕ್ಷಿಸಲು ಸಾಧ್ಯವೇ? ಹೀಗಾಗಿ ಜನರ ಪ್ರಜಾಸತ್ತಾತ್ಮಕ ಹಕ್ಕುಗಳನ್ನು ದಮನ ಮಾಡುವ ಪೊಲೀಸ್ ದೌರ್ಜನ್ಯಗಳು, ಸರ್ಕಾರದ ಅಸಹನೆ ಮತ್ತು ಆಕ್ರಮಣಕಾರಿತನವನ್ನೇ ಮತ್ತೆ ಮತ್ತೆ ಬಯಲು ಮಾಡುತ್ತಿವೆ. ಆದ್ದರಿಂದಲೇ ವಿಪರೀತ ಭ್ರಷ್ಟಾಚಾರ ಸಮಸ್ಯೆಗೆ ಪರಿಹಾರ ಕೇಳಿ ಚಳುವಳಿಗಿಳಿದರೆ ದಮನ ಈಗ ಜನತೆ ನೀಡಿದ ಅಧಿಕಾರವನ್ನು ಜನತೆಗಾಗಿ ಬಳಸದೇ, ಬಿಜೆಪಿಯ ಅಧಿಕಾರವನ್ನು ನಡೆಸಲಾಗದ ಸಂಪೂರ್ಣ ವಿಫಲವಾಗಿದೆ. ಇದು ಜ ಬಗೆಯುತ್ತಿರುವ ದ್ರೋಹ.

'ಕಟ್ಟಡ ಕಾರ್ಮಿಕರ ಚಳುವಳಿ ಬೆಳೆಯುತ್ತಿದೆ'

ಪುಟ 2 ರಿಂದ

ಉತ್ತರ : 2000 ಸುಮಾರಿನಿಂದ ಬೆಂಗಳೂರಿನಲ್ಲಿ, ಉಡುಪಿ, ದಕ್ಷಿಣ ಕನ್ನಡ ಈ ಮೂರು ಜಿಲ್ಲೆಗಳಲ್ಲಿ ಸ್ಥಳೀಯ ಮಟ್ಟಗಳಲ್ಲಿ ಕಟ್ಟಡ ಕಾರ್ಮಿಕರನ್ನು ಸಂಘಟಿಸಲಾಗುತ್ತಿತ್ತು. 2004 ರಲ್ಲಿ ರಾಜ್ಯಮಟ್ಟದ ಸಮನ್ವಯ ಸಮಿತಿ ರಚನೆ ಮಾಡಲಾಯಿತು. 2005 ರಲ್ಲಿ ರಾಜ್ಯ ಫೆಡರೇಷನ್ ರಚಿಸಲಾಯಿತು. ಫೆಡರೇಷನ್ ನೇತೃತ್ವದಲ್ಲಿ ಮಾರ್ಚ್ 5, 2005 ರಂದು ಸುಮಾರು 5 ಸಾವಿರ ಕಾರ್ಮಿಕರು ಪಾಲ್ಗೊಂಡ ರಾಜ್ಯಮಟ್ಟದ ರ್‍ಯಾಲಿ ನಡೆಯಿತು. ಆ ಪ್ರತಿಭಟನಾ ರ್‍ಯಾಲಿಯ ನಂತರ ರಾಜ್ಯದಲ್ಲಿ ಕಾಯ್ದೆ ಜಾರಿಯ ಭರವಸೆ ಸಿಕ್ಕಿತ್ತು. ಮತ್ತೆ ಒಂದು ವರ್ಷದ ನಂತರ ಜಾರಿ ಆರಂಭವಾಯಿತು. ಇಂತಹ ಹೋರಾಟಗಳ ಮೂಲಕ ಸಂಘಟನೆ ಬೆಳೆಯುತ್ತಿದೆ. ಈ ಕಾಯ್ದೆ ಜಾರಿಗೆ ಹೋರಾಟ ಮಾಡಿದ ಪ್ರಮುಖ ಸಂಘ ಸಿಐಟಿಯು ನೇತೃತ್ವದ ಕರ್ನಾಟಕ ರಾಜ್ಯ ಕಟ್ಟಡ ಮತ್ತು ಇತರೆ ಕಾರ್ಮಿಕರ ಫೆಡರೇಷನ್ (ರಿ) ಆಗಿದೆ.

ಆದರೆ ರಾಜ್ಯ ಸರ್ಕಾರವು ಜನವರಿ 2007 ರಲ್ಲಿ ಕಟ್ಟಡ ಕಾರ್ಮಿಕರಿಗೆ ಸಂಬಂಧಿಸಿದ ಕಲ್ಯಾಣ ಮಂಡಳಿಯಲ್ಲಿ ಸಿಐಟಿಯು ಸಂಘಟನೆಗೆ ಪ್ರಾತಿನಿಧ್ಯ ಕೊಡದೆ ವಂಚಿಸಿದೆ. ಡಿಸೆಂಬರ್ 3 ರಂದು ಅಸಂಘಟಿತ ಕಾರ್ಮಿಕರ ಪರವಾಗಿ ಮುಖ್ಯಮಂತ್ರಿಗಳನ್ನು ಭೇಟಿ ಮಾಡಿದ ಸಿಐಟಿಯು ರಾಜ್ಯ ನಿಯೋಗ ಈ ಪ್ರಶ್ನೆ ಕುರಿತು ಚರ್ಚಿಸಿ ಪ್ರಾತಿನಿಧ್ಯ ನೀಡಲು ಒತ್ತಾಯಿಸಿದೆ.

ಸಂದರ್ಶಿಸಿದವರು

ಆರ್. ರಾಮಕೃಷ್ಣ

ದಕ್ಷಿಣ ಕನ್ನಡ ಜಿಲ್ಲೆಯ ಉಜಿರೆಯಲ್ಲಿ ವಿಶ್ವ ತುಳು ಸಮ್ಮೇಳನ ನಡೆದಿದೆ. ಸಮಾಜದ ಪ್ರಗತಿಪರ ಬದಲಾವಣೆಗೆ ಅಗತ್ಯವಾದ ಸೈದ್ಧಾಂತಿಕ ನೆಲೆಗಟ್ಟು ಇಲ್ಲದ ಜಾತಿವಾದಿ, ಪ್ರಗತಿವಿರೋಧಿ ಕಣ್ಣೋಟ ಇಡೀ ಸಮ್ಮೇಳನದಲ್ಲಿ ಕಣ್ಣು ಕುಕ್ಕುವಂತೆ ಎದ್ದು ಕಾಣುತ್ತಿತ್ತು ಎಂಬುದು ಆತಂಕಕಾರಿ ವಿಷಯವಾಗಿದೆ.

ವಿಶ್ವ ತುಳು ಸಮ್ಮೇಳನ

ಪಾಳೆಯಗಾರಿ ಮೌಲ್ಯಗಳ ಪುನರುತ್ಥಾನದ ಪ್ರಯತ್ನ

— ಕೃಷ್ಣಪ್ಪ ಕೊಂಚಾಡಿ —

ಡಿಸೆಂಬರ್ ತಿಂಗಳ 10 ರಿಂದ 13ರವರೆಗೆ ಉಜಿರೆಯಲ್ಲಿ ಜರುಗಿದ ಪ್ರಥಮ ವಿಶ್ವ ತುಳು ಸಮ್ಮೇಳನವು ತುಳು ಸಂಸ್ಕೃತಿಯ ಅವಿಭಾಜ್ಯ ಅಂಗವಾದ ಶ್ರಮ, ಸಂಸ್ಕೃತಿ, ಜನಪದ ಮಾನವೀಯ ಕಾಳಜಿಯ ಉದ್ದೀಪನ, ಕೋಮುವಾದ ಸೌಹಾರ್ದತೆ, ಬಡತನ, ವರದಕ್ಷಿಣೆ ಮತ್ತು ಜಾತಿ ಪದ್ಧತಿಯ ನಾಶ ಹಾಗೂ ಅಸ್ಪೃಶ್ಯತೆಯ ಮೂಲೋತ್ಪಾಟನೆ ಇವೇ ಮೊದಲಾದವುಗಳ ಬಗ್ಗೆ ಹೊಸ ಭಾಷ್ಯವನ್ನು ಬರೆಯುವಲ್ಲಿ ಸಂಪೂರ್ಣ ವಿಫಲವಾಗಿ ಪಾಳೆಯಗಾರಿ ಜನವಿರೋಧಿ ಮೌಲ್ಯಗಳ ಪುನರುತ್ಥಾನದತ್ತ ಹೊಸ ಪ್ರಯತ್ನಗಳನ್ನು ಗಂಭೀರವಾಗಿ ನಡೆಸದ ಪ್ರಯತ್ನವೆಂಬುದು ಸಮ್ಮೇಳನದ ಸುತ್ತ ಮುತ್ತ ಕಂಡುಬಂದ ವಸ್ತು ಪ್ರದರ್ಶನ, ಸಭೆ ಸಮಾರಂಭ, ವಿವಿಧ ಗೋಷ್ಠಿಗಳಲ್ಲಿ, ಸಾಂಸ್ಕೃತಿಕ ಜಾನಪದ ನೃತ್ಯ ಹಾಗೂ ತುಳು ಗ್ರಾಮದಲ್ಲಿ ಕಂಡುಬಂದ ಪ್ರಾತ್ಯಕ್ಷಿಕೆಗಳಿಂದ ವೇದ್ಯವಾಗುತ್ತಿದೆ. ಬಹುಮುಖಿ ತುಳು ಸಂಸ್ಕೃತಿಯನ್ನು ಏಕಮುಖಿ ಸಂಸ್ಕೃತಿಯತ್ತ ಲೀನಗೊಳಿಸುವ ಕುರುಹುಗಳೂ ಕಂಡುಬಂದಿದ್ದು ಸರಿಸುಮಾರು ವೈದಿಕ ಸಂಸ್ಕೃತಿಯ ಲೇಪನಗಳನ್ನು ಪ್ರಮುಖ ಆಯಕಟ್ಟಿನ ಸನ್ನಿವೇಶನದಲ್ಲಿ ನಯನಾಜೂಕಿನಿಂದ ರೂಪಿಸಲಾಗಿತ್ತು. ನಿಜ ಹೇಳಬೇಕೆಂದರೆ ತುಳು ಸಂಸ್ಕೃತಿಯ ವೈಶಿಷ್ಟ್ಯಪೂರ್ಣತೆ, ವೈವಿಧ್ಯಮಯವಾದ ತನ್ನತನ, ಆಚಾರ ವಿಚಾರಗಳ ಉದಾತ್ತ ಮೌಲ್ಯಗಳು; ಸಾಂಸ್ಕೃತಿಕ ಒಡಲಿನ ಅಗಾಧತೆ ಮತ್ತು ತುಳು ಭಾಷೆಯ ಸೊಗಡನ್ನು ಕನಿಷ್ಠ ಪಕ್ಷ ಕನ್ನಡ ನಾಡಿನ ಜನತೆಗೆ ಪರಿಚಯಿಸುವಲ್ಲಿ ಸಂಪೂರ್ಣ ವಿಫಲವಾಗಿರುವಾಗ ಇನ್ನು ಭಾರತದ ಇತರ ಸಾಂಸ್ಕೃತಿಕ ಜಗತ್ತಿಗೆ ಹಾಗೂ ವಿಶ್ವಕ್ಕೆ ತಿಳಿಯಪಡಿಸುವುದಾದರೂ ಹೇಗೆ?

ಜನರ ಉತ್ಸಾಹ

ಆದರೆ ಜನರ ದೃಷ್ಟಿಯಿಂದ ಹೇಳುವುದಾದರೆ ತುಳು ಭಾಷೆಯನ್ನು ಮಾತನಾಡುವ ಜನತೆ ಈ ಸಮ್ಮೇಳನದ ಸ್ಫೂರ್ತಿ(?)ರೆ ನಡೆನುಡಿ ಆಶಯವನ್ನು ತಮ್ಮದೇ ಆಶಯಗಳು ಎಂದು ಅಭಿಮಾನದಿಂದ ಸ್ವೀಕರಿಸಿ ಲಕ್ಷೋಪಲಕ್ಷ ಸಂಖ್ಯೆಯಲ್ಲಿ ಸ್ವಯಂಸ್ಫೂರ್ತಿಯಿಂದ ಭಾಗವಹಿಸಿದುದು ಅವಿಭಜಿತ ದಕ್ಷಿಣ ಕನ್ನಡ ಜಿಲ್ಲೆಯ ಇತಿಹಾಸದಲ್ಲೇ ಒಂದು ದಾಖಲೆಯಾಗಿದೆ. ಎಲ್ಲರ ಬಾಯಿಯಲ್ಲೂ ಉಜಿರೆಗೆ ಹೋಗುವುದಿಲ್ಲವೇ ಎಂಬುದು ಸಾಮಾನ್ಯ ಪ್ರಶ್ನೆಯಾಗಿತ್ತು. ದೃಶ್ಯ ಹಾಗೂ ಮುದ್ರಣ ಮಾಧ್ಯಮಗಳು ಪೂರ್ವದಲ್ಲೇ ನೀಡಿರುವ ಅಗಾಧ ಪ್ರಮಾಣದ ವೈಭವೀಕೃತಗೊಂಡ ಪ್ರಚಾರ ಎಲ್ಲರಿಗೂ ಮುಂಕುಬೂದಿ ಎರಚಿ ಸಮೂಹ ಸನ್ನಿಯಾಯಿತು. ಎಂದೂ ಭಾಷಾಂಧಭಿಮಾನಕ್ಕೆ ಸಿಲುಕದ ತುಳುವರ ತುಳು ಅಭಿಮಾನವು ಸಹಜವಾಗಿಯೇ ತುಳು ಸಮ್ಮೇಳನದಲ್ಲಿ ಭಾಗವಹಿಸಬೇಕೆಂಬ ಉತ್ಕಟ ಇಚ್ಛೆಗೆ ಕಾರಣವಾಯಿತು. ಇದರ ಪರಿಣಾಮವೆನ್ನುವಂತೆ ಶನಿವಾರ ಮತ್ತು ಆದಿತ್ಯವಾರ ತೆರೆಗಳಂತೆ ಜನಸಾಗರವೇ ನಿರ್ಮಾಣವಾಯಿತು. ಕಾರ್ಯಕ್ರಮ ಸಂಘಟಕರು, ಪೊಲೀಸರು ಇಷ್ಟೊಂದು ಜನಸಾಗರ ಪ್ರವಹಿಸಬಹುದೆಂಬುದನ್ನು ಅಂದಾಜಿಸದ ಕಾರಣ ಸುಮಾರು 14 ಕಿ.ಮೀ. ದೂರದಲ್ಲೇ ರಸ್ತೆ ಸಂಚಾರ ಬಂದ್ ಆಗಿ ಜನ ಪಾದಯಾತ್ರೆ ಮಾಡಬೇಕಾಗಿ ಬಂತು. ಮಕ್ಕಳು, ವಯೋವೃದ್ಧರು, ಮಹಿಳೆಯರು ಭಾರೀ ತೊಂದರೆಗೆ ಒಳಗಾಗಬೇಕಾಯಿತು. ಮಂಗಳೂರಿನ ಸುತ್ತಮುತ್ತ ಕಾಸರಗೋಡು, ಉಡುಪಿ ಮೊದಲಾದ ಕಡೆಗಳ ಗ್ರಾಮೀಣ ಪ್ರದೇಶದಿಂದ ಬಂದ ಜನರಿಗೆ ಮರಳಿ ಹೋಗಲು ಬಸ್ಸು ಸಿಗದೇ



ಬಸ್‌ಸ್ಟಾಂಡ್, ರಸ್ತೆ ಬದಿ, ಅಂಗಡಿ ಬದಿಗಳಲ್ಲಿ ಕೊರೆಯುವ ಚಳಿಯಲ್ಲಿ ರಾತ್ರಿಯನ್ನು ಕಳೆಯಬೇಕಾದ ಅನಿವಾರ್ಯತೆ ಉಂಟಾಯಿತು. ಇನ್ನೂ ಸಾವಿರ ಸಾವಿರ ಸಂಖ್ಯೆಯಲ್ಲಿ ಬರಿದ ಖಾಸಗಿ ಕಾರು, ಮೆಟಡೋರ್, ಬೈಕ್ ಪ್ರಯಾಣಿಕರೂ ಟ್ರಾಫಿಕ್ ಜಾಮ್‌ನಿಂದ ಸಾಕಷ್ಟು ತೊಂದರೆಗೆ ಒಳಗಾಗಿ ತುಳು ಸಂಸ್ಕೃತಿಯ ವಸ್ತು ಪ್ರದರ್ಶನ, ಪುಸ್ತಕ ಪ್ರದರ್ಶನ, ಮಾದರಿ ತುಳು ಗ್ರಾಮಗಳನ್ನು ಲೆಕ್ಕಕ್ಕಷ್ಟೇ ವೀಕ್ಷಿಸಲು ಸಾಧ್ಯವಾಯಿತು. ಸರಿಸುಮಾರು 30,000 ಪ್ರತಿನಿಧಿಗಳು ನೊಂದಾವಣೆ ಮಾಡಿದ್ದಾರೆ ಎಂದು ವರದಿಯಾಗಿದೆ. ಶನಿವಾರ ಸಂಭವಿಸಿದ ಅಸ್ತವ್ಯಸ್ತತೆ ಗೊಂದಲದ ಬಗ್ಗೆ ಮಾಧ್ಯಮಗಳಲ್ಲಿ ಸಾಕಷ್ಟು ವರದಿಯಾದರೂ ಆದಿತ್ಯವಾರ ಬೃಹತ್ ಜನಪ್ರವಾಹ ಬೆಳಗ್ಗಿನಿಂದಲೇ ಜಮಾವಣೆಗೊಂಡಿತ್ತು. ಜಿಲ್ಲೆಯಲ್ಲಿ ನಡೆದಂತಹ ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ಸೇರಿದ ಜನಸಂಖ್ಯೆಗಿಂತ ಎಷ್ಟೋ ಪಾಲು ಜಾಸ್ತಿ ಜನ ಸೇರಿದರು.

ಜಾತೀಯತೆ, ಅಸಮಾನತೆ

ಸಮ್ಮೇಳನದ ಉದ್ಘಾಟನೆಯ ಸ್ವರೂಪವೂ ಸೇರಿದಂತೆ ತುಳು ಗ್ರಾಮದ ಅನಾವರಣ ಹಾಗೂ ಸಮ್ಮೇಳನದಲ್ಲಿ ಅಳವಡಿಸಲಾದ ಹಲವಾರು ಸಾಂಸ್ಕೃತಿಕ ಕಾರ್ಯಕ್ರಮಗಳು ಪ್ರಗತಿಪರ ಮನೋಭಾವದ ಜನರಲ್ಲಿ ಅಲ್ಲಿ ಕಂಡುಕೊಂಡ ಪ್ರಾತ್ಯಕ್ಷಿಕೆಗಳು ಜಾತೀಯತೆ ಮತ್ತು ಪಾಳೆಯಗಾರಿ ಮೌಲ್ಯಗಳ ಅನಾವರಣವು ವೇದನೆಯನ್ನು ತರುವಂತಿತ್ತು. ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ದಲಿತ ಜಾತಿಗಳಿಂದಲೇ ಅವರವರ ಜಾತೀಯ ಜಾನಪದ ನೃತ್ಯಗಳನ್ನು ಪ್ರದರ್ಶಿಸಿದಾಗ ಒಂದೊಮ್ಮೆ ಪಾಳೆಗಾರಿ ಶಕ್ತಿಗಳು ಕೇಂದ್ರೀಕರಿಸಿಕೊಂಡಿದ್ದ ಅಸಮಾನತೆ, ಅಸ್ಪೃಶ್ಯತೆ ಜಾತೀಯತೆಗಳ ನೃತ್ಯ ಇಂದು ಕೂಡಾ ಅನಿವಾರ್ಯವೇ ಎಂಬುದನ್ನು ಪ್ರಶ್ನಿಸುತ್ತಿತ್ತು. ಈ ನೃತ್ಯಗಳನ್ನು ಯಾರೂ ಕೂಡಾ (ಈಗಾಗಲೇ ಮಾಡುತ್ತಿರುವಂತೆ) ಮಾಡಬಹುದಿತ್ತು. ಜಾತೀಯಾಧಾರಿತ ನೃತ್ಯ ನೋಡುವವರಿಗೆ ಭವ್ಯವೂ ಉಜ್ವಲವೂ ಎಂದು ಕಾಣಬರುತ್ತದೆ. ಆದರೆ ಅದರ ಹಿಂದೆ ಇರುವ ಜಾತೀಯತೆ, ಅಸ್ಪೃಶ್ಯತೆ, ಅವಮಾನ ಆ ಸಮುದಾಯದವರಿಗೆ ಮಾತ್ರ ಗೊತ್ತು. ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಜಾನಪದೀಯದ ಪ್ರಾತ್ಯಕ್ಷಿಕೆಗಳ ಪರಿ ಈ ರೀತಿ ಅಸಮಾನತೆಯನ್ನು ವೈಭವೀಕರಣ ಮಾಡುತ್ತಿತ್ತು.

ಔಪಚಾರಿಕ ಭಾಷಣ

ಇನ್ನು ಸಮ್ಮೇಳನಾಧ್ಯಕ್ಷರ ಭಾಷಣವೆಂಬುದು ತನ್ನ ಗಂಭೀರತೆಯನ್ನು ಕಳೆದುಕೊಂಡು ಕೇವಲ ಔಪಚಾರಿಕವಾಗಿತ್ತು. ತುಳು ವಿದ್ವಾಂಸರೊಂದಿಗೆ ಕಾಂಗ್ರೆಸ್ಸು ಮತ್ತು ಬಿಜೆಪಿಯ ರಾಜಕೀಯ ನಾಯಕರು ಪರಸ್ಪರ ಸಹಕಾರದಲ್ಲಿದ್ದರು. ನೇರ ನಡೆನುಡಿಯ ಮತ್ತು ವಸ್ತುನಿಷ್ಠ ಜನಪರ ನೆಲೆಯ ವಿದ್ವಾಂಸರಾದ ಅಮೃತ ಸೋಮೇಶ್ವರರವರೂ ಕೂಡಾ ತನ್ನ ಮನಃಸಾಕ್ಷಿಗೆ ಅನುಗುಣವಾಗಿ ವೇದಿಕೆಯಲ್ಲಿ ಅಭಿಪ್ರಾಯ ವ್ಯಕ್ತಪಡಿಸಲಿಲ್ಲ. ಸ್ಥಳೀಯ ವಿದೇಶಿ ನೆರವಿನ ಸ್ವಯಂಸೇವಾ ಸಂಘಟನೆಯಾಗಿದ್ದ ನಾಗರಿಕ ಸೇವಾ ಸಮಿತಿಯ ವಿವಿಧ ಸಂಘಟನೆಗಳು ಆಯೋಜಿಸಿದ ಕಾರ್ಯಕ್ರಮದಲ್ಲಿ ಇದೇ ವಿದ್ವಾಂಸರು ವಿಚಾರ ಪ್ರಚೋದಕ ಭಾಷಣ ಮಾಡಿ ಪ್ರಗತಿಪರ ಚಿಂತಕರ ಗಮನ ಸೆಳೆದಿದ್ದರು. ಯಾಕೋ ಏನೋ ಈ ವೇದಿಕೆಯಲ್ಲಿ ಇಂತಹ ವಿಚಾರ ಪ್ರಚೋದಕ ಭಾಷಣ ಹರಿದುಬರಲಿಲ್ಲ.

ವಿವಿಧ ಗೋಷ್ಠಿಗಳು


ತುಳು ಸಾಹಿತ್ಯ ಸಂಸ್ಕೃತಿ ಮತ್ತು ಬದುಕು ಬದಲಾವಣೆಗೆ ಸಂಬಂಧಿಸಿ ನಡೆದ ವಿವಿಧ ಗೋಷ್ಠಿಗಳು ಚರ್ವಿತ ಚರ್ವಣದಂತಿತ್ತು. ಈಗಾಗಲೇ ಹಲವಾರು ವಿದ್ವಾಂಸರು ಕಂಡುಕೊಂಡು ಬರೆದ ಸಾಹಿತ್ಯ, ವಿಮರ್ಶಾ ಗ್ರಂಥಗಳ ಉಲ್ಲೇಖನ ಯಾ ವೈಭವೀಕರಣವಲ್ಲದೆ, ತುಳು ಸಂಸ್ಕೃತಿಯ ಮೂಲದ ವೈಜ್ಞಾನಿಕ ವಿಶ್ಲೇಷಣೆಗೆ ಬೆಳಕು ಚೆಲ್ಲುವ ಯಾವುದೇ ಪ್ರಬಂಧಗಳು, ಚಿಂತನೆಗಳು ಹರಿದು ಬಂದಿಲ್ಲವೆಂದರೆ ತಪ್ಪಾಗಲಾರದು. ಬದಲಾಗಿ ಜೀವವಿರೋಧಿ ಮೌಲ್ಯಗಳು ಮತ್ತು ಆಚಾರ ವಿಚಾರಗಳ ವೈಭವೀಕರಣದ ಪ್ರತಿಗಾಮಿ ಧೋರಣೆ ಕಂಡುಬಂತು.

ಭೂತಾರಾಧನೆಯ ಜಾನಪದೀಯ ಅಧ್ಯಯನ ನಡೆಸಿದ ಹಿರಿಯ ವಿದ್ವಾಂಸರೂ ಮಂಗಳೂರು ವಿ.ವಿ.ಯ ರಿಜಿಸ್ಟ್ರಾರ್ ಆದ ಡಾ: ಕೆ.ಚಿನ್ನಪ್ಪಗೌಡರವರು ಸಾಂಸ್ಕೃತಿಕ ಪಲ್ಲಟದ ಗೋಷ್ಠಿಯೊಂದರಲ್ಲಿ ಮಾತನಾಡುತ್ತಾ ಕೃಷಿ ಸಂಸ್ಕೃತಿಯ ಹಿನ್ನೆಲೆಯಲ್ಲಿ ನಮ್ಮ ಆಚರಣೆ ಆರಾಧನೆಗಳು, ಪದ್ಧತಿಗಳು ರೂಪುಗೊಂಡಿದೆ. ಹಣದ ಹರಿವು ಹೆಚ್ಚಾಗಿ ನಮ್ಮ ಗದ್ದೆಗಳು ಮಾಯವಾಗಿ ಸಂಸ್ಕೃತಿಯಲ್ಲಿ ಬದಲಾವಣೆಗಳಾಗಿವೆ. ನಮ್ಮ ಆಚರಣೆ ಆರಾಧನೆಯ ಬಗೆಗೆ ಪುನಃಶ್ಚೇತನ ಶಿಬಿರಗಳು ನಡೆಯಬೇಕಾದ ಅಗತ್ಯವಿದೆ. (ವಾರ್ತಾಭಾರತಿ ಪತ್ರಿಕೆ ದಿನಾಂಕ 13.12.2009) ಎಂದು ಹೇಳಿರುವುದು ವರದಿಯಾಗಿದೆ. ಇಲ್ಲಿ ಕಾಣಬರುವ ಅಂಶವೆಂದರೆ ಸಂಸ್ಕೃತಿ ಎಂದರೆ ಅದು ಸ್ಥಿರವಾದುದು ಚಲನರಹಿತವಾದುದು ಯಾ ನಿಂತನೀರು ಎಂಬ ಅತಾರ್ಕಿಕ ಮನೋಧರ್ಮ ವಾಸ್ತವಿಕವಾಗಿ ಅದು ಕಾಲದೊಂದಿಗೆ ಹೆಜ್ಜೆ ಹಾಕುತ್ತಾ ಬದಲಾವಣೆಗೆ ತನ್ನನ್ನು ತಾನು ಒಗ್ಗಿಕೊಳ್ಳುತ್ತದೆ. ಅದಕ್ಕೆ ತುಳು ಸಂಸ್ಕೃತಿಯು ಹೊರತಲ್ಲ. ಈ ಪಲ್ಲಟದ ವಾಸ್ತವಿಕ ಕಾರಣಗಳನ್ನು ಕಂಡುಕೊಂಡು ಮುಂದಡಿಯಿಡುವ ಬದಲು ಪುನಶ್ಚೇತನಕ್ಕೆ ಮೊರೆ ಹೋಗುವುದು ಸರಿಯೇ ಎಂಬ ಪ್ರಶ್ನೆ ಎದುರಾಗುತ್ತದೆ.

ಈ ಮಧ್ಯೆ ಒಂದು ಆಶಾಕಿರಣದ ಧ್ವನಿ ಗ್ರಾಮೀಣ ಕುಶಲತೆಗಳ ಪಲ್ಲಟದ ಗೋಷ್ಠಿಯಲ್ಲಿ ಮೂಡಿಬಂದಿದೆ. ಇಲ್ಲಿ ರಾಣಿ ಅಬ್ಬಕ್ಕ ತುಳು ಅಧ್ಯಯನ ಕೇಂದ್ರದ ಅಧ್ಯಕ್ಷರಾದ ಪ್ರಾಧ್ಯಾಪಕ ತುಕರಾಮ ಪೂಜಾರಿಯವರು ಮಾತನಾಡುತ್ತಾ

ಪುಟ 15ಕ್ಕೆ


ಯಾರ ಲಾಭಕ್ಕೆ ವಿಶ್ವ ತುಳು ಸಮ್ಮೇಳನ?



ತುಳು ಸಂಸ್ಕೃತಿ ಮತ್ತು ಪರಂಪರೆಯನ್ನು ಜನಪ್ರಿಯಗೊಳಿಸುವ ಉದ್ದೇಶದಿಂದ ಉಜಿರೆಯಲ್ಲಿ ನಾಲ್ಕು ದಿನಗಳ ವಿಶ್ವ ತುಳು ಸಮ್ಮೇಳನ ಭರ್ಜರಿಯಾಗಿ ನಡೆಯಿತು. ಈ ನಾಲ್ಕು ದಿನಗಳ ಕಾಲ ತುಳುವರ ಜನಪದ ಕಲೆ, ಸಂಸ್ಕೃತಿ ಮತ್ತು ಆಚಾರ ವಿಚಾರಗಳ ಬಗ್ಗೆ ವಿಚಾರ ವಿಮರ್ಶೆಯೂ ನಡೆಯಿತು. ಈ ಸಮ್ಮೇಳನಕ್ಕೆ ಪೂರ್ವಭಾವಿಯಾಗಿ ಸುಮಾರು ಎರಡು ತಿಂಗಳ ಮೊದಲೇ ಉಡುಪಿ ಮತ್ತು ದಕ್ಷಿಣ ಕನ್ನಡದ ಎಲ್ಲ ತಾಲೂಕುಗಳಲ್ಲಿ ವಿಚಾರ ಸಂಕಿರಣ, ತುಳು ಗ್ರಾಮೀಣ ಕ್ರೀಡೆಗಳು, ಜನಪದ ಆಚರಣೆಗಳನ್ನು ಬಿಂಬಿಸುವ ಕೆಲಸ ಮಾಡಲಾಯಿತು.

ಚಿನ್ನಿ ದಾಂಡು, ಡೊಂಕ, ಲಗೋರಿ, ಕಲ್ಲಾಟ, ಕೊತ್ತಲಿಂಗೆಯಲ್ಲಿ ಕ್ರಿಕೆಟ್ ಮುಂತಾದ ಕ್ರೀಡೆಗಳು





ನಡೆದು ಸಾಕಷ್ಟು ಮನರಂಜನೆಯನ್ನೂ ನೀಡಿದವು. ಇದರ ಜೊತೆಗೆ ವಿಚಾರ ಸಂಕಿರಣಗಳು, ತುಳುವಿನ ಎದುರುಕಥೆಗಳು, ಜಾನಪದ, ಪಾಡ್ದನ ಹಾಗೂ ವಿವಿಧ ಜಾತಿ-ಧರ್ಮಗಳ ಕಟ್ಟುಪಾಡುಗಳು, ಶುಭ ಸಮಾರಂಭಗಳ ಆಚರಣೆಯ ವಿಧಾನವನ್ನು ಬಿಂಬಿಸುವ ಕಾರ್ಯಕ್ರಮಗಳನ್ನು ಪ್ರದರ್ಶಿಸಲಾಯಿತು. ಇದರ ಅಂತಿಮ ಘಟ್ಟ ಎಂಬಂತೆ ಈ ನಾಲ್ಕು ದಿನಗಳ ತುಳು ಸಮ್ಮೇಳನ ನಡೆಯಿತು.

ಹಿಂದಿರುವ ಉದ್ದೇಶ....?

ಹಳೆಯ ತಲೆಮಾರಿನ ತುಳುವರ ಜೀವನ ಪದ್ಧತಿಯನ್ನು ಮತ್ತೆ ಜನಪ್ರಿಯಗೊಳಿಸುವ ಮತ್ತು ತುಳುನಾಡಿನ ಅಭಿವೃದ್ಧಿಗೆ ಸಂಕಲ್ಪ ಕೈಗೊಳ್ಳುವ ಉದ್ದೇಶವನ್ನು ಘೋಷಿಸಲಾಗಿತ್ತು. ಪ್ರತ್ಯೇಕ ತುಳುನಾಡಿನ ರಚನೆಯ ಕೂಗು ಇಲ್ಲಿ ಕೇಳಿಬರುವ ಸಾಧ್ಯತೆ ಇತ್ತು. ಇದಕ್ಕೆ ತೆರೆಮರೆಯಲ್ಲಿ ಎಲ್ಲ ಕಸರತ್ತೂ ನಡೆದಿತ್ತು. ಆದರೆ, ಇದು ಮತ್ತಷ್ಟು ವಿವಾದ ಎಬ್ಬಿಸುವುದು ಬೇಡ ಎಂಬ ನೆಲೆಯಲ್ಲಿ ಸಂಘಟಕರು ಈ ಬಗ್ಗೆ ಜಾಣತನ ಪ್ರದರ್ಶಿಸಿದರು.

ಜೈನರ ಉತ್ಸವ

ವಿಶ್ವ ತುಳು ಸಮ್ಮೇಳನ ಎಂಬ ಇಡೀ ಉತ್ಸವ ಜೈನರ ಉತ್ಸವವಾಗಿ ಮಾರ್ಪಟ್ಟದ್ದು ಮತ್ತೊಂದು ವಿಶೇಷ. ಧರ್ಮಸ್ಥಳದ ಧರ್ಮಾಧಿಕಾರಿ ಡಾ. ಡಿ. ವೀರೇಂದ್ರ ಹೆಗ್ಗಡೆ ಅವರ ಮುಂದಾಳತ್ವದಲ್ಲಿ ಅವರದ್ದೇ ಕಾರ್ಯಕ್ಷೇತ್ರದಲ್ಲಿ ಈ ಸಮ್ಮೇಳನ ನಡೆಯಿತು ಎಂಬ ಕಾರಣಕ್ಕೆ ಇಂತಹ ಎಲ್ಲ ಪ್ರಕ್ರಿಯೆಗಳು ಎಗ್ಗಿಲ್ಲದೆ ಸಾಗಿದವು. ವಿಶ್ವ ತುಳು ಸಮ್ಮೇಳನ ಎಂಬ ಪರಿಕಲ್ಪನೆಗೆ ಚಾಲನೆ ನೀಡಿದ್ದ ತುಳು ಸಾಹಿತ್ಯ ಅಕಾಡೆಮಿ ತೆರೆಮರೆಗೆ ಸರಿದು ಹೆಗ್ಗಡೆ ಅವರ ಕೂಟ ಒಡ್ಡೋಲಗ ಅಲಂಕರಿಸಿತು. ಸಮ್ಮೇಳನದ ಸ್ವಾಗತ ಸಮಿತಿಯೂ ಸಿದ್ಧವಾಯಿತು.

ಕೆಳಜಾತಿಗಳ ಕಡೆಗಣನೆ

ಸಮ್ಮೇಳನದ ಸಮಿತಿಗಳೂ ರಚನೆಯಾಯಿತು. ಎಲ್ಲ 23 ಸಮಿತಿಗಳಲ್ಲೂ ಹೆಗ್ಗಡೆ ಅವರ ಹೊಗಳುಭಟ್ಟರು, ಸಂಬಂಧಿಕರು, ನೆಂಟರಿಷ್ಟರು ಸೇರಿಕೊಂಡರು.

ಕಾರ್ಯದರ್ಶಿಯಾಗಿ ಹೆಗ್ಗಡೆ ಅವರ ಮೈದುನ (ಹೆಂಡತಿ ತಮ್ಮ) ಯಶೋವರ್ಮ, ಕೋಶಾಧಿಕಾರಿಯಾಗಿ ಸಹೋದರ ಹರ್ಷೇಂದ್ರ ಕುಮಾರ್, ಪ್ರಮುಖ ಸಂಘಟಕರಾಗಿ ಮಾವ ಎಸ್. ಪ್ರಭಾಕರ್, ನೆಚ್ಚಿನ ಭಂಟ ಮೋಹನ ಆಳ್ವ ಕಾರ್ಯಾಧ್ಯಕ್ಷರಾಗಿರುವ ಸಮಿತಿ ರಚನೆಯಾಯಿತು. ಈ ಎಲ್ಲ ಸಮಿತಿಗಳಲ್ಲೂ ಒಬ್ಬನೇ ಒಬ್ಬ ದಲಿತನೂ ಇಲ್ಲ ಎಂಬುದು ವಿಷಾದದ ಸಂಗತಿ.

ಸರ್ಕಾರಿ ಯಂತ್ರದ ಬಳಕೆ

ಸಾಹಿತ್ಯ ಸಮ್ಮೇಳನಗಳಿಗೆ ಸಾಮಾನ್ಯವಾಗಿ ಒಂದು ಕೋಟಿ ರೂ. ಅನುದಾನ ನೀಡುವಂತೆ ಈ ಸಮ್ಮೇಳನಕ್ಕೂ ಒಂದು ಕೋಟಿ ಬಿಡುಗಡೆ ಮಾಡಲಾಯಿತು. ಅದಲ್ಲದೆ, ಗ್ರಾಮಾಭಿವೃದ್ಧಿ ಯೋಜನೆಯ ಕಾರ್ಯಕರ್ತರಿಂದ, ಸ್ವಸಹಾಯ ಸಂಘಗಳ ಸದಸ್ಯರಿಂದ 250 ರೂ. ಸಂಗ್ರಹಿಸಲಾಯಿತು. ಬ್ಯಾಂಕ್ ಮತ್ತಿತರ ವಿವಿಧ ಸಂಸ್ಥೆಗಳಿಂದ, ಉದ್ಯಮಿಗಳಿಂದ, ಪ್ರತಿಷ್ಠಿತ ವ್ಯಕ್ತಿಗಳಿಂದ ಕೋಟಿಗಟ್ಟಲೆ ಹಣವನ್ನು ಸಂಗ್ರಹಿಸಲಾಯಿತು.

ಸರ್ಕಾರಿ ಖರ್ಚಿನಲ್ಲಿ ಉಜಿರೆಯನ್ನು ಸಂಪರ್ಕಿಸುವ ಎಲ್ಲ ರಸ್ತೆಗಳಿಗೆ ಟಾರ್ ಹಾಕಲಾಯಿತು. ವಿವಿಧ ಅಭಿವೃದ್ಧಿ ಕಾಮಗಾರಿಗಳನ್ನು ತ್ವರಿತಗತಿಯಲ್ಲಿ ನಡೆಸಲಾಯಿತು. ಇದೆಲ್ಲದರ ಪ್ರಯೋಜನ ದೊರಕುವುದು ಅಂತಿಮವಾಗಿ ಧರ್ಮಸ್ಥಳಕ್ಕೆ ಮತ್ತು ವೈಯಕ್ತಿಕವಾಗಿ ಡಾ. ಡಿ. ವೀರೇಂದ್ರ ಹೆಗ್ಗಡೆಯವರಿಗೆ.

ಸಮ್ಮೇಳನದ ಪ್ರಧಾನ ಆಕರ್ಷಣೆಯಾದ ತುಳು ಗ್ರಾಮ ಮತ್ತು ರತ್ನಮಾನಸ ಸಭಾಮಂಟಪ ಸೇರಿದಂತೆ ಅದರ ಸುತ್ತಮುತ್ತಲಿನ ಜಾಗದಲ್ಲಿ ಸರ್ಕಾರಿ ಖರ್ಚಿನಲ್ಲಿ ಆರು ಕೊಳವೆಬಾವಿಯನ್ನು ತೆರೆಯಲಾಯಿತು. ಇದು ಹೆಗ್ಗಡೆ ಅವರ ಕುಟುಂಬಕ್ಕೆ ಸಂಬಂಧಿಸಿದ ಜಾಗ ಎನ್ನಲಾಗಿದೆ. ಇದರ ಜೊತೆಗೆ ಸರ್ಕಾರಿ ಜಮೀನನ್ನು ಜಿಲ್ಲಾ ಪಂಚಾಯತ್ ವತಿಯಿಂದ ನೆಲಸಮಗೊಳಿಸಲಾಯಿತು. ಈ ಜಾಗವನ್ನು ಅಕ್ರಮ ಸಕ್ರಮ ಮಾಡಿಕೊಂಡು ಹೆಗ್ಗಡೆ ತಮ್ಮ ವೈದ್ಯಕೀಯ ಕಾಲೇಜಿಗೆ ಬಳಸುತ್ತಾರೆ ಎಂಬ ಗುಸುಗುಸು ಇಡೀ ಜಿಲ್ಲೆಯಲ್ಲಿ ಹಬ್ಬಿದೆ.



ವೇದಿಕೆಯಲ್ಲೂ ಜೈನರ ಟಚ್

ಸಮ್ಮೇಳನದಲ್ಲಿ ತುಳುನಾಡಿನ ವಿಶಿಷ್ಟ ಪರಂಪರೆಯನ್ನು ಬದಲು ಬರೀ ಜೈನರನ್ನು ಹಾಡಿಹೊಗಳುವ ಪ್ರಕ್ರಿಯೆ ನಡೆಯಿತು. ಸಾವಿರ ಕಂಬದ ಬಸದಿ ವೇದಿಕೆಯ ಬ್ಯಾಕ್‌ಡ್ರಾಪ್ ಆಯಿತು. ಜೈನರ ಬಸದಿಯಲ್ಲಿ ಕಾಣಸಿಗುವ ಮಾನಸ್ತಂಭ ಮುಖ್ಯ ವೇದಿಕೆಯ ಮುಂದೆ ತಲೆಎತ್ತಿ ನಿಂತಿತು. ಸಮ್ಮೇಳನದ ಪ್ರಧಾನ ಆಕರ್ಷಣೆಯಾದ ತುಳುಗ್ರಾಮದಲ್ಲೂ ಪಂಚಾಯಿತಿ ಕಟ್ಟೆ ಬದಲು ಪಂಚಾಯಿತಿ ಬಸದಿ, ಮೊಗವೀರರ ಮನೆಯಲ್ಲಿ ಜೀವಂತ ಮೀನಿಗೆ ಬದಲಾಗಿ ಮೀನಿನ ಚಿತ್ರಗಳನ್ನು ಹಾಕಲಾಯಿತು.

ತುಳುನಾಡಿನ ಶೇಕಡಾ 85ರಷ್ಟು ಮಂದಿಯ ನಿತ್ಯ ಆಹಾರವಾದ ಮೀನಿನ ಆಹಾರಕ್ಕೆ ಇಲ್ಲಿ ಅವಕಾಶವೇ ಇರಲಿಲ್ಲ. ಕರಾವಳಿಯ ನೆಚ್ಚಿನ ಫುಡ್‌ಗಳಾದ ಕೋಳಿ ರೊಟ್ಟಿ, ಮೀನು ಫ್ರೈ, ಚಿಕನ್ ಸುಕ್ಕ, ಬಿರಿಯಾನಿ ಸೇರಿದಂತೆ ಮಾಂಸಾಹಾರಿ ಆಹಾರಕ್ಕೆ ಜಾಗವೇ ಸಿಗಲಿಲ್ಲ. ಅದಕ್ಕೆ ಬದಲಾಗಿ, ಬಿಳಿಯಕ್ಕಿ ಊಟ, ಸಾರು, ಜೈನರ ಆಹಾರ ಪದ್ಧತಿಗೆ ಪೂರಕವಾದ ಅಡುಗೆ.

ಗೋಷ್ಠಿಗಳು ಜನರಿಂದ ದೂರ...

ಸಮ್ಮೇಳನದ ಎಲ್ಲ ಗೋಷ್ಠಿಗಳೂ ಅಕಾಡೆಮಿಕ್ ಲೆವೆಲ್‌ನಲ್ಲಿ ನಡೆಯಿತು. ಸಮ್ಮೇಳನಕ್ಕೆ ಬಂದ ಸಾಮಾನ್ಯ ಜನರಂತೂ ತುಳುಗ್ರಾಮ ಮತ್ತು ಅಟೆಲ್ ಅರಗಣೆ ನೋಡಲು ಆದ್ಯತೆ ನೀಡಿದರು. ಪ್ರತಿನಿಧಿಗಳಿಗೆ ಮಾತ್ರ ವೇದಿಕೆ ಕಾರ್ಯಕ್ರಮ ಎಂಬ ಭಾವನೆ ಮೂಡಿಸಿದ ಹಿನ್ನೆಲೆಯಲ್ಲಿ ಬಹುತೇಕರು ಅತ್ತ ತಲೆ ಹಾಕಲಿಲ್ಲ. ಹಾಗಾಗಿ ಎಲ್ಲ ಗೋಷ್ಠಿಗಳೂ ಸಾಮಾನ್ಯರಿಂದ ದೂರವಾಗಿತ್ತು.

ಸಮ್ಮೇಳನದಲ್ಲಿ ಎಲ್ಲೂ ತುಳುನಾಡನ್ನು ಕಾಡುವ ಜ್ವಲಂತ ಸಮಸ್ಯೆಗಳ ಬಗ್ಗೆ ಚರ್ಚೆಯಾಗಲೇ ಇಲ್ಲ. ಕೃಷಿ ಸಮಸ್ಯೆಗಳು, ಬೆಲೆ ಏರಿಕೆ, ಬೀಡಿ ಉದ್ಯಮದ ಬಿಕ್ಕಟ್ಟು, ಅಡಿಕೆಗೆ ಬೆಂಬಲ ಬೆಲೆ, ಎಂಡೋಸಲ್ಫಾನ್ ಸಮಸ್ಯೆಗಳು ಮುಂತಾದುವು ಸಮ್ಮೇಳನದ ಹತ್ತಿರವೂ ಸುಳಿಯಲಿಲ್ಲ. ಎಲ್ಲವೂ ಗುತ್ತಿನ ಮನೆಯ ಚರ್ಚೆಯ ಹೊರತು ಗುಡಿಸಲಿನ ಮನೆ ಬಗ್ಗೆ ಯಾರಿಗೂ ಚಿಂತೆ ಇದ್ದಂತಿರಲಿಲ್ಲ. ವಿಶೇಷ ಆರ್ಥಿಕ ವಲಯಕ್ಕೆ ಅಲ್ಲಲ್ಲಿ ವಿರೋಧ ವ್ಯಕ್ತವಾಯಿತಾದರೂ ಧಾರಣ ಸಾಮರ್ಥ್ಯದ ಕುರಿತ ನಿರ್ಣಯ ಮಂಡಿಸಿ ಕೈತೊಳೆಯಲಾಯಿತು.

ಪುಸ್ತಕ ಮಳಿಗೆಗಳು...

ತುಳುವಿನ ವೈಚಾರಿಕ ಸಾಹಿತ್ಯಕ್ಕೆ ಬದಲಾಗಿ ಇಸ್ಕಾನ್ ಸಂಸ್ಥೆಯ ಭಗವದ್ಗೀತೆ ಮತ್ತಿತರ ಧಾರ್ಮಿಕ ಪುಸ್ತಕಗಳ ಮಾರಾಟ, ಮಾತಾ ಅಮೃತಾನಂದಮಯಿ ಬುಕ್ ಸ್ಟಾಲ್ ಎಲ್ಲರ ಗಮನ ಸೆಳೆಯಿತು. ಎಲ್ಲಕ್ಕಿಂತ ಮುಖ್ಯವಾಗಿ ಕರಾ[illegible] ಮಾಧ್ಯಮಗಳಂತೂ ಅತಿ ರಂಜಿತ ಸುದ್ದಿ, ವಿಶೇಷ ಪುರವಣಿ ಪ್ರಕಟಿಸಿ ತುಳು ಸಮ್ಮೇಳನವನ್ನು ಶತಮಾನದ ಯಶಸ್ವೀ ಕಾರ್ಯಕ್ರಮ ಎಂಬಂತೆ ಬಿಂಬಿಸಿದರು.

ಪ್ರಚಾರ ಪ್ರಿಯನಾಗಿ...

ಅಂತಿಮವಾಗಿ ಸಮ್ಮೇಳನ ಅಂತ್ಯಗೊಂಡಾಗ ಹೆಗ್ಗಡೆ ಒಬ್ಬ ಸಂಘಟಕನಾಗಿ, ಪ್ರಶ್ನಾತೀತ ನಾಯಕನಾಗಿ ಗುರುತಿಸಿಕೊಂಡರು. ತುಳುನಾಡಿನ ಎಲ್ಲ ಆಚಾರ-ವಿಚಾರ, ಜಾನಪದ ಆಚರಣೆಗಳಿಗೂ ಮಿಗಿಲಾಗಿ ತಮ್ಮ ನಿಲುವನ್ನು ಸಾರುವಲ್ಲಿ ಸಮ್ಮೇಳನವನ್ನು ಬಳಸಿಕೊಂಡರು. ಈ ಮೂಲಕ ವೈಯಕ್ತಿಕ ಲಾಭ ಗಿಟ್ಟಿಸಿಕೊಂಡರು. ಇಷ್ಟೆಲ್ಲ ಆದ ಮೇಲೆ ತುಳುನಾಡಿನ ಅನೇಕ ಮಂದಿ ಕೇಳಿದ ಒಂದೇ ಪ್ರಶ್ನೆ ಎಂದರೆ ಎರಡು ತಿಂಗಳ ಈ ಸರಣಿ ಕಾರ್ಯಕ್ರಮ ಮತ್ತು ಉತ್ಸವ ಯಾರ ಲಾಭಕ್ಕೆ ಎಂದು. ಹೌದು, ಇದರ ನಿಜವಾದ ಲಾಭ ಪಡೆದುಕೊಂಡದ್ದು ವೈಯಕ್ತಿಕವಾಗಿ ವೀರೇಂದ್ರ ಹೆಗ್ಗಡೆ ಮತ್ತು ಧರ್ಮಸ್ಥಳದ ಮಹಾ ಸಂಸ್ಥಾನಕ್ಕೆ.

ಭಾರತ-ಅಮೆರಿಕಾ ಪರಮಾಣು ವ್ಯವಹಾರ ಎಂಬುದು ದೇಶವನ್ನು ಮಾರಿಕೊಂಡ ವ್ಯವಹಾರ ಎಂಬುದಕ್ಕೆ ನಾಗರಿಕ ಪರಮಾಣು ಬಾಧ್ಯತೆ ಕುರಿತ ಪ್ರಸ್ತಾವಿತ ಮಸೂದೆ ಇನ್ನೊಂದು ಉದಾಹರಣೆ. ಇದನ್ನು ಒಪ್ಪಿಕೊಂಡರೆ ಇದು ಅಮೆರಿಕಾಕ್ಕೆ ತಲೆಬಗ್ಗಿಸುವ ಮತ್ತು ನಮ್ಮ ಜನತೆಯ ಹಿತಾಸಕ್ತಿಗಳಿಗಿಂತ ಅಮೆರಿಕಾದ ಬಂಡವಾಳದ ಹಿತಾಸಕ್ತಿಗೇ ಮಣೆ ಹಾಕುವ ಇನ್ನೊಂದು ನಿದರ್ಶನವಾಗುತ್ತದೆ. ಖಾಸಗಿ ಪರಮಾಣು ವಿದ್ಯುತ್ ಮತ್ತು ವಿದೇಶಿ ಪೂರೈಕೆದಾರರನ್ನು ಪ್ರೋತ್ಸಾಹಿಸಲು ಯುಪಿಎ ಸರಕಾರ ತನ್ನದೇ ಜನಗಳನ್ನು ಬಲಿಗೊಡಲು ಕೂಡಾ ಸಿದ್ಧವಾಗಿರುವಂತೆ ಕಾಣುತ್ತದೆ.

ಮತ್ತೆ ಅಮೆರಿಕನ್ ದೊರೆಗಳಿಗೆ ಶರಣಾರ್ಥಿ!

ನಾಗರಿಕ ಪರಮಾಣು ಬಾಧ್ಯತೆ ಎಂಬ ಮಸೂದೆಯನ್ನು ಸಂಸತ್ತಿನಲ್ಲಿ ಮಂಡಿಸಲು ಕೇಂದ್ರ ಸಂಪುಟ ಮಂಜೂರಾತಿ ನೀಡಿದೆ. ಏನಾದರೂ ಪರಮಾಣು ಅಪಘಾತ ನಡೆದರೆ ಪರಿಹಾರ ಕೊಡಬೇಕಾದ ಬಾಧ್ಯತೆಯಿಂದ ಪರಮಾಣು ಉಪಕರಣಗಳನ್ನು ಒದಗಿಸುವ ಅಮೆರಿಕನ್ ಪೂರೈಕೆದಾರರನ್ನು ರಕ್ಷಿಸಲು ಒಂದು ಶಾಸನ ತರಬೇಕು ಎಂಬ ಅಮೆರಿಕಾದ ಆಗ್ರಹವನ್ನು ಈಡೇರಿಸಲು ಇಂತಹ ಒಂದು ಮಸೂದೆಯನ್ನು ತರಲಾಗುತ್ತಿದೆ. ಭಾರತ ಪರಮಾಣು ಬಾಧ್ಯತೆಯ ಮೇಲೆ ಮಿತಿ [illegible]ದ ಮೇಲೆಯೇ ಭಾರತ-ಅಮೆರಿಕ ಪರಮಾಣು ಒಪ್ಪಂದವನ್ನು ಪೂರ್ಣ ಗೊಳಿಸುವುದು ಎಂದು ಅಮೆರಿಕಾ ಹೇಳಿರುವುದರಿಂದಲೇ ಈ ಮಸೂದೆಯನ್ನು ಸಂಸತ್ತಿನಲ್ಲಿ ತರಾತುರಿಯಿಂದ ಮಂಡಿಸಲಾಗುತ್ತಿದೆ. ಯುಪಿಎ ಸರಕಾರ 123 ಒಪ್ಪಂದವನ್ನು ಊರ್ಜಿತಗೊಳಿಸುವ ಮೊದಲೇ ಭಾರತ ಅಮೆರಿಕನ್ ಕಂಪನಿಗಳಿಂದ 10,000 ಮೆಗಾವಾಟ್ ಪರಮಾಣು ರಿಯಾಕ್ಟರುಗಳನ್ನು ಖರೀದಿಸುವುದಾಗಿ ಲಿಖಿತ ವಚನ ಕೊಟ್ಟಿದೆ. ಪರಮಾಣು ನಿರ್ವಾಹಕರ ಬಾಧ್ಯತೆಗಳನ್ನು ಮಿತಗೊಳಿಸಲು ಮತ್ತು ಉಪಕರಣಗಳ ಪೂರೈಕೆದಾರರಿಗೆ ಯಾವುದೇ ಬಾಧ್ಯತೆಗಳಿಲ್ಲದಂತೆ ಮಾಡಲು ಅಮೆರಿಕಾ ಇಂತಹ ಒಂದು ವ್ಯವಸ್ಥೆ ಬೇಕೆಂದು ಆಗ್ರಹಿಸುತ್ತಿದೆ.

ಒಂದು ಗಂಭೀರ ಪರಮಾಣು ಅಪಘಾತ ನಡೆದರೆ ನೂರಾರು ಕೋಟಿ ಡಾಲರುಗಳ ಹಾನಿಯಾಗುತ್ತದೆ. ಅದಕ್ಕೆ ಹೋಲಿಸಿದರೆ ಈ 45ಕೋಟಿ ಡಾಲರುಗಳ ಮಿತಿ ಅತ್ಯಲ್ಪ. ಈ ಪ್ರಸ್ತಾವ ಯುಪಿಎ ಸರಕಾರ ಭಾರತೀಯ ಜನತೆಯ ಬಗ್ಗೆ ಎಳ್ಳಷ್ಟೂ ಗೌರವ ಹೊಂದಿಲ್ಲ ಎಂಬುದನ್ನು ತೋರಿಸುತ್ತದೆ.

ಒಂದು ಪರಮಾಣು ಅವಘಡ ನಡೆದರೆ ಅದರಿಂದ ಉಂಟಾಗುವ ಎಲ್ಲಾ ಬಾಧ್ಯತೆಗಳನ್ನು ಕೇವಲ 30 ಕೋಟಿ ಎಸ್‌ಡಿಆರ್ ಅಂದರೆ 45ಕೋಟಿ ಡಾಲರುಗಳಿಗೆ ಮತ್ತು ನಿರ್ವಾಹಕರ ಬಾಧ್ಯತೆಯನ್ನು ಕೇವಲ 300 ಕೋಟಿ ರೂ.ಗಳಿಗೆ ಸೀಮಿತಗೊಳಿಸುವುದು ಈ ಮಸೂದೆಯ ಉದ್ದೇಶ. ಈ 45 ಕೋಟಿ ಡಾಲರು ಮತ್ತು 300ಕೋಟಿ ರೂ.ಗಳ ನಡುವಿನ ವ್ಯತ್ಯಾಸ(ಸುಮಾರು 6.7ಕೋಟಿ ಡಾಲರು) ಸರಕಾರದ ಬಾಧ್ಯತೆ. ಒಂದು ಗಂಭೀರ ಪರಮಾಣು ಅಪಘಾತ ನಡೆದರೆ ನೂರಾರು ಕೋಟಿ ಡಾಲರುಗಳ ಹಾನಿಯಾಗುತ್ತದೆ. ಅದಕ್ಕೆ ಹೋಲಿಸಿದರೆ ಈ 45ಕೋಟಿ ಡಾಲರುಗಳ ಮಿತಿ ಅತ್ಯಲ್ಪ. ಈ ಪ್ರಸ್ತಾವ ಯುಪಿಎ ಸರಕಾರ ಭಾರತೀಯ ಜನತೆಯ ಬಗ್ಗೆ ಎಳ್ಳಷ್ಟೂ ಗೌರವ ಹೊಂದಿಲ್ಲ ಎಂಬುದನ್ನು ತೋರಿಸುತ್ತದೆ.

ಪ್ರತಿಗಾಮಿ ಕ್ರಮ

ಭೋಪಾಲ ಅನಿಲ ದುರಂತಕ್ಕೆ ಸಂಬಂಧಪಟ್ಟಂತೆ ಭಾರತ ಮತ್ತು ಯೂನಿಯನ್ ಕಾರ್ಬೈಡ್ ನಡುವೆ ಆದ ಇತ್ಯರ್ಥ 47 ಕೋಟಿ ಡಾಲರುಗಳದ್ದು. ಇದನ್ನು ಸುಪ್ರಿಂ ಕೋರ್ಟ್ ಸ್ವೀಕರಿಸಿದೆ. ಆದರೆ ಇದು ಆಗಿರುವ ಹಾನಿಗಿಂತ ಎಷ್ಟೋ ಕಡಿಮೆ ಎಂದು ಪ್ರತ್ಯಕ್ಷವಾಗಿ ಕಂಡು ಬಂದಿದೆ. ಇಂದೂ ಕೂಡ ಲಕ್ಷಾಂತರ ಮಂದಿ ಅನಿಲ ದುರಂತ ಪೀಡಿತರು ನರಳುತ್ತಿದ್ದಾರೆ, ಅವರಿಗೆ ಸಿಕ್ಕಿದ ಪರಿಹಾರ ಅತ್ಯಲ್ಪ. ಭೋಪಾಲ ದುರಂತಕ್ಕಿಂತ ಎಷ್ಟೋ ದೊಡ್ಡದಾಗಿರ ಬಹುದಾದ ಎಲ್ಲಾ ಪರಮಾಣು ಅವಘಡಗಳಲ್ಲಿ ಬಾಧ್ಯತೆಯ ಮೇಲೆ ಈಗಾಗಲೇ ಅತ್ಯಲ್ಪ ಎಂದು ಕಂಡು ಬಂದಿರುವ ಒಂದು ಸಂಖ್ಯೆ ಗಿಂತಲೂ ಕಡಿಮೆ ಮಟ್ಟದಲ್ಲಿ ಮಿತಿ ಹಾಕುವುದು ಒಂದು ಸಂಪೂರ್ಣ ವಿಪರೀತ ನಿಲುವು. ಸರಕಾರ ಪರಮಾಣು ವಿದ್ಯುತ್ ವಲಯದಲ್ಲಿ ಖಾಸಗಿಯವರಿಗೆ ಅವಕಾಶವನ್ನು ಕೊಡಬೇಕೆಂದಿರು ವಾಗ ಇಂತಹ ಅತ್ಯಲ್ಪ ಮಟ್ಟದ ಪರಿಹಾರ ಅವರ ಹಿತಾಸಕ್ತಿಗಳನ್ನು ಕೂಡಾ ಈಡೇರಿಸುತ್ತದೆ. ಇಷ್ಟೇ ಅಲ್ಲ, ಪರಮಾಣು ಸ್ಥಾವರದ ನಿರ್ವಾಹಕರ ಬಾಧ್ಯತೆಯನ್ನು ಕೇವಲ 300ಕೋಟಿ ರೂ.ಗಳ ಸಣ್ಣ ಮೊತ್ತಕ್ಕೆ ಸೀಮಿತಗೊಳಿಸಿದರೆ ಅವರು ಸ್ಥಾವರದ ಸುರಕ್ಷಿತತೆಯೊಂದಿಗೆ ಆಟವಾಡಲು ಪ್ರೋತ್ಸಾಹ ಕೊಟ್ಟಂತಾಗುತ್ತದೆ.

ಸರಕಾರ ಪರಮಾಣು ವಿದ್ಯುತ್ ವಲಯದಲ್ಲಿ ಖಾಸಗಿಯವರಿಗೆ ಅವಕಾಶವನ್ನು ಕೊಡಬೇಕೆಂದಿರುವಾಗ ಇಂತಹ ಅತ್ಯಲ್ಪ ಮಟ್ಟದ ಪರಿಹಾರ ಅವರ ಹಿತಾಸಕ್ತಿಗಳನ್ನು ಕೂಡಾ ಈಡೇರಿಸುತ್ತದೆ. ಇಷ್ಟೇ ಅಲ್ಲ, ಪರಮಾಣು ಸ್ಥಾವರದ ನಿರ್ವಾಹಕರ ಬಾಧ್ಯತೆಯನ್ನು ಕೇವಲ 300ಕೋಟಿ ರೂ.ಗಳ ಸಣ್ಣ ಮೊತ್ತಕ್ಕೆ ಸೀಮಿತಗೊಳಿಸಿದರೆ ಅವರು ಸ್ಥಾವರದ ಸುರಕ್ಷಿತತೆಯೊಂದಿಗೆ ಆಟವಾಡಲು ಪ್ರೋತ್ಸಾಹ ಕೊಟ್ಟಂತಾಗುತ್ತದೆ.

ಭಾರತದ ಕಾನೂನು ವ್ಯವಸ್ಥೆ ಸ್ಪಷ್ಟವಾಗಿದೆ

ಹಾನಿಕಾರಕ ಉದ್ದಿಮೆಗಳಲ್ಲಿ ಸ್ಥಾವರದ ಮಾಲಕರಿಗೆ ಕಟ್ಟುನಿಟ್ಟಾದ ಬಾಧ್ಯತೆ ಇರುತ್ತದೆ. ಈ ಬಾಧ್ಯತೆಗೆ ಕಾನೂನು ಯಾವುದೇ ಮಿತಿಯನ್ನು ಒಪ್ಪುವುದೂ ಇಲ್ಲ. ಸಂಬಂಧಪಟ್ಟವರು ಪೂರ್ಣ ಪರಿಹಾರ ಕೊಡಬೇಕಷ್ಟೇ ಅಲ್ಲ, ಆ ಅಪಘಾತ ಏನಾದರೂ ಪರಿಸರ ಹಾನಿ ಉಂಟು ಮಾಡಿದ್ದರೆ ಅದರ ಖರ್ಚನ್ನು ಕೂಡಾ ಕೊಡಬೇಕು. ಶ್ರೀರಾಂ ಫುಡ್ ಅಂಡ್ ಫರ್ಟಿಲಿಟಿ ಕಾರ್ಖಾನೆಯಿಂದ ಓಲಿಯಂ ಸೋರಿಕೆಯ ಪ್ರಶ್ನೆ ಭಾರತದಲ್ಲಿ ಬಾಧ್ಯತೆಯ ವ್ಯವಸ್ಥೆಯನ್ನು ಇತ್ಯರ್ಥ ಮಾಡಿದೆ. ಹೀಗಿರುವಾಗ ಬಾಧ್ಯತೆಗೆ ಮಿತಿ ಹಾಕುವ ಯಾವುದೇ ಶಾಸನ ಪ್ರತಿಗಾಮಿಯಾಗುತ್ತದೆ.

ವಿದೇಶಿ ಹಿತಾಸಕ್ತಿಗಳಿಗಾಗಿಯಷ್ಟೇ

ಈ ಮಸೂದೆಯನ್ನು ವಿಯೆನ್ನಾ ಸಮಾವೇಶದ ಆಧಾರದಲ್ಲಿ ತಯಾರಿಸಲಾಗಿದೆ ಎಂದು ಹೇಳಲಾಗುತ್ತಿದೆ. ಆದರೆ ಈ ಸಮಾವೇಶ ಪರಮಾಣು ಬಾಧ್ಯತೆಯ ಮೇಲೆ ಮಿತಿ ಹಾಕಿಲ್ಲ, ಬದಲಿಗೆ ಕನಿಷ್ಟ ಮೊತ್ತವನ್ನು ನಮೂದಿಸಿದೆ. ಅದು ಆಯಾಯ ದೇಶಗಳು ತಮ್ಮದ್ದೇ ಬಾಧ್ಯತಾ ವ್ಯವಸ್ಥೆಗಳನ್ನು ನಿರ್ವಹಿಸಲು ಅವಕಾಶ ನೀಡುತ್ತದೆ. ಉದಾಹರಣೆಗೆ, ಜರ್ಮನಿ, ಜಪಾನ್ ಮತ್ತು ಫಿನ್‌ಲೆಂಡ್ ಈಗಿರುವ ಭಾರತೀಯ ಕಾನೂನುಗಳಂತೆ ಬಾಧ್ಯತೆಗಳ ಮೇಲೆ ಯಾವುದೇ ಮಿತಿ ಹಾಕಿಲ್ಲ. ಅಮೆರಿಕಾದಲ್ಲಿ 1020 ಕೋಟಿ (10.2 ಬಿಲಿಯನ್) ಡಾಲರ್ ಮಿತಿ ಇದೆ. ಭಾರತೀಯ ಸರಕಾರ ಪರಮಾಣು ಸ್ಥಾವರಗಳ ಬಾಧ್ಯತೆಯ ಮೇಲೆ ಮಿತಿ ಹಾಕ ಬಯಸುತ್ತದೆಯಷ್ಟೇ ಅಲ್ಲ, ಅದನ್ನು ಕೇವಲ 45ಕೋಟಿ ಡಾಲರುಗಳಿಗೆ ಮಿತಗೊಳಿಸಬಯಸುತ್ತದೆ. ಇದು ಯಾವುದೇ ಗಂಭೀರ ಪರಮಾಣು ಅಪಘಾತದಲ್ಲಿ ಸಂಭವಿಸಬಹುದಾದ ಹಾನಿಯ ಪ್ರಮಾಣಕ್ಕಿಂತ ಬಹಳ ಕೆಳಗಿನ ಮೊತ್ತ. ಖಾಸಗಿ ಪರಮಾಣು ವಿದ್ಯುತ್ ಮತ್ತು ವಿದೇಶಿ ಪೂರೈಕೆದಾರರನ್ನು ಪ್ರೋತ್ಸಾಹಿಸಲು ಯುಪಿಎ ಸರಕಾರ ತನ್ನದೇ ಜನಗಳನ್ನು ಬಲಿಗೊಡಲು ಕೂಡಾ ಸಿದ್ಧವಾಗಿರುವಂತೆ ಕಾಣುತ್ತದೆ.

ಪೂರೈಕೆದಾರರ ಬಾಧ್ಯತೆಯನ್ನು ಕೂಡಾ ಈ ಪ್ರಸ್ತಾವಿತ ಮಸೂದೆಯಲ್ಲಿ ಬಹಳಷ್ಟು ದುರ್ಬಲ ಗೊಳಿಸಲಾಗಿದೆ. ಸಾಮಾನ್ಯವಾಗಿ ಗುತ್ತಿಗೆಯನ್ನು ನಿರ್ವಹಿಸುವವರು ಹಾನಿಯನ್ನು ತುಂಬಿಕೊಡುವಂತೆ ಕೇಳುವ ಅವಕಾಶ ಕಾಂಟ್ರಾಕ್ಟ್ ಅಥವಾ ಗುತ್ತಿಗೆಗೆ ಸಂಬಂಧಪಟ್ಟ ಕಾನೂನಿನಲ್ಲಿಯೇ ಅಡಕವಾಗಿರುತ್ತದೆ. ಆದರೆ ಈ ಮಸೂದೆಯಲ್ಲಿ ಕಾಂಟ್ರಾಕ್ಟಿನಲ್ಲಿ ಹಾಗೆಂದು ನಿರ್ದಿಷ್ಟವಾಗಿ ನಮೂದಿಸಿದ್ದರೆ ಮಾತ್ರ ಈ ಅವಕಾಶ ಕೊಡಲಾಗಿದೆ. ಕಾಂಟ್ರಾಕ್ಟಿನಲ್ಲಿ ಈ ಬಗ್ಗೆ ನಿರ್ದಿಷ್ಟವಾಗಿ ನಮೂದಿಸಿಲ್ಲ ವಾದರೆ ಉಪಕರಣಗಳಲ್ಲಿ ದೋಷವಿತ್ತು ಎಂದು ಗೊತ್ತಾದರೂ ಅದನ್ನು ಒದಗಿಸಿದ ಪೂರೈಕೆದಾರರಿಂದ ಅದನ್ನು ನಿರ್ವಹಿಸುವವರು ಪರಿಹಾರ ಕೇಳುವಂತಿಲ್ಲ, ಅಂದರೆ ಅಮೆರಿಕನ್ ಪರಮಾಣು ರಿಯಾಕ್ಟರುಗಳನ್ನು ಖರೀದಿಸುವ ಕಾಂಟ್ರಾಕ್ಟುಗಳಲ್ಲಿ ಪೂರೈಕೆದಾರರ ಮೇಲೆ ಯಾವುದೇ ಬಾಧ್ಯತೆ ಇರುವುದಿಲ್ಲ ಎಂಬುದು ಸ್ವಯಂವೇದ್ಯ. ಇದರರ್ಥ ನಾವೀಗ ಅಂಗೀಕರಿಸುವ ಕಾನೂನಿನ ಪ್ರಕಾರ ಒಂದು ಅಮೆರಿಕನ್ ಕಂಪನಿ ಒದಗಿಸಿದ ಉಪಕರಣದಲ್ಲಿ ದೋಷವಿದ್ದುದ ರಿಂದ ಅಪಘಾತ ಸಂಭವಿಸಿದರೂ ಆ ಕಂಪನಿ ಯಾವುದೇ




ಪರಿಹಾರ ಕೊಡಬೇಕಾದ ಬಾಧ್ಯತೆಯಿಂದ ಸಂಪೂರ್ಣವಾಗಿ ಮುಕ್ತವಾಗಿರುತ್ತದೆ.

ಕೇವಲ ಅಮೆರಿಕನ್ ಕಾಳಜಿ

ಅಲ್ಲದೆ ಗಮನಿಸಬೇಕಾದ ಇನ್ನೊಂದು ಮಹತ್ವದ ಸಂಗತಿಯೆಂದರೆ ಪರಮಾಣು ಬಾಧ್ಯತೆಯ ಮೇಲೆ ಮಿತಿ ಹಾಕುವ ಈ ಪ್ರಶ್ನೆಯನ್ನು ರಶ್ಯಾದ ಅಥವಾ ಫ್ರಾನ್ಸಿನ ಪೂರೈಕೆದಾರರು ಎತ್ತಿಲ್ಲ. ಇದು ಕೇವಲ ಅಮೆರಿಕಾದ ಕಾಳಜಿಯಷ್ಟೇ, ಅಮೆರಿಕಾದ ಪೂರೈಕೆದಾರರು ಮತ್ತು ಹೂಡಿಕೆದಾರರ ಹಿತಾಸಕ್ತಿಗಳಿಗಾಗಿಯಷ್ಟೇ. ಇದನ್ನು ಒಪ್ಪಿಕೊಂಡರೆ ಇದು ಅಮೆರಿಕಾಕ್ಕೆ ತಲೆಬಗ್ಗಿಸುವ ಮತ್ತು ನಮ್ಮ ಜನತೆಯ ಹಿತಾಸಕ್ತಿಗಳಿಗಿಂತ ಅಮೆರಿಕಾದ ಬಂಡವಾಳದ ಹಿತಾಸಕ್ತಿಗೇ ಮಣೆ ಹಾಕುವ ಇನ್ನೊಂದು ನಿದರ್ಶನವಾಗುತ್ತದೆ.

ಭಾರತ-ಅಮೆರಿಕಾ ಪರಮಾಣು ವ್ಯವಹಾರ ಎಂಬುದು ದೇಶವನ್ನು ಮಾರಿಕೊಂಡ ವ್ಯವಹಾರ ಎಂಬುದಕ್ಕೆ ನಾಗರಿಕ ಪರಮಾಣು ಬಾಧ್ಯತೆ ಕುರಿತ ಈ ಪ್ರಸ್ತಾವಿತ ಮಸೂದೆ ಇನ್ನೊಂದು ಉದಾಹರಣೆ. ಸರಕಾರ ಭಾರತದ ಜನತೆಯ ಪ್ರಾಣ ಮತ್ತು ಸುರಕ್ಷೆಯನ್ನು ಕಡೆಗಣಿಸಲು ಅವಕಾಶ ನೀಡಬಾರದು. ಆದ್ದರಿಂದ ಸಂಸತ್ತು ಈ ಶಾಸನವನ್ನು ಮಂಡಿಸಿದಾಗ ಅದನ್ನು ತಿರಸ್ಕರಿಸಬೇಕಾದ್ದು ಅತ್ಯಗತ್ಯ. ಸಂಸತ್ತಿನಲ್ಲಿ ಪ್ರಾತಿನಿಧ್ಯ ಹೊಂದಿರುವ ಎಲ್ಲಾ ರಾಜಕೀಯ ಪಕ್ಷಗಳೂ ಭಾರತೀಯ ಜನತೆಯ ಮೂಲಭೂತ ಹಿತಾಸಕ್ತಿಗಳ ರಕ್ಷಣೆಯ ನಿಲುವು ತಳೆಯಲೇ ಬೇಕಾಗಿದೆ. ○





ತೆಲಂಗಾಣ ಪ್ರತ್ಯೇಕ ರಾಜ್ಯದ ಬೇಡಿಕೆಯ ಪ್ರಶ್ನೆಯ ಮೇಲೆ ಇಡೀ ಆಂಧ್ರ ಪ್ರದೇಶ ಉದ್ವಿಗ್ನಗೊಂಡಿದೆ. ಪ್ರದೇಶದ ಆಧಾರದ ಮೇಲೆ ಜನರಲ್ಲಿ ವಿಭಜನೆಯ ಭಾವನೆಗಳನ್ನು ಬಿತ್ತಲಾಗುತ್ತಿದೆ. ತೆಲಂಗಾಣ ಪ್ರದೇಶ ಶೈಕ್ಷಣಿಕವಾಗಿ, ಆರ್ಥಿಕವಾಗಿ ಹಿಂದುಳಿದಿರುವ ಪ್ರಶ್ನೆ ತೆಲಂಗಾಣದ ಜನರಿಗೆ ಉದ್ಯೋಗಾವಕಾಶದ ಪ್ರಶ್ನೆಗಳು ಪ್ರತ್ಯೇಕತೆ ಭಾವನೆಗೆ ಇಂಬು ಕೊಟ್ಟಿವೆಯೆಂಬ ವಾಸ್ತವ ನಮ್ಮ ಮುಂದಿದೆ. ಇದಕ್ಕೆ ಅಭಿವೃದ್ಧಿಯನ್ನು 'ಮಾರುಕಟ್ಟೆ' ಶಕ್ತಿಗಳಿಗೆ ಬಿಡುವ ಬಂಡವಾಳಶಾಹಿ ನೀತಿ ಕಾರಣ. ಉದಾರೀಕರಣ, ಖಾಸಗೀಕರಣದ ನೀತಿಗಳಿಗೆ ಜೋತುಬಿದ್ದ ರಾಜಕೀಯ ಪಕ್ಷಗಳು ಇದಕ್ಕೆ ಹೊಣೆಯೇ. ಇಷ್ಟು ಮಾತ್ರವಲ್ಲ, ಇತ್ತೀಚಿನ ಜಾಗತಿಕ, ಆರ್ಥಿಕ ಬಿಕ್ಕಟ್ಟು ಜಗತ್ತಿನ ಆರ್ಥಿಕತೆಯ ಮೇಲೆ ಬೀರಿರುವ ದುಷ್ಪರಿಣಾಮ ಜನರ ಆದಾಯದಲ್ಲಿ ಕುಸಿತ ನಿರುದ್ಯೋಗದಲ್ಲಿ ಹೆಚ್ಚಳ, ಇರುವ ಸೀಮಿತ ಅವಕಾಶಗಳಿಗಾಗಿ ಪೈಪೋಟಿ, ಹೆಚ್ಚುತ್ತಿರುವ ಜನರ ಬದುಕಿನ ಸಂಕಟಗಳು ಕಾರಣವಾಗಿವೆ. ಅಸಮಾನ ಬೆಳವಣಿಗೆಯ ಪ್ರಶ್ನೆಯ ಜೊತೆಗೆ ನೊಂದ ಸಂಕಷ್ಟ ಪೀಡಿತರಾದ ಎಲ್ಲ ಜನರ ಐಕ್ಯತೆಯಿಂದ ಪ್ರತ್ಯೇಕತೆಯ ಭಾವನೆಯನ್ನು ಎದುರಿಸಬೇಕಾಗಿದೆ. ಇಂತಹ ಸನ್ನಿವೇಶದಲ್ಲಿ ಸಿಪಿಐ(ಎಂ) ಪಾಲಿಟ್ ಬ್ಯೂರೋ ಸದಸ್ಯರೂ ಆಂಧ್ರ ಸಮಿತಿಯ ಕಾರ್ಯದರ್ಶಿಗಳೂ ಆದ ಬಿ.ವಿ.ರಾಘವುಲು ಒಟ್ಟು ಸಮಸ್ಯೆಗಳ ಕುರಿತು ಏನನ್ನುತ್ತಾರೆ? ಓದಿ.

"ರಾಜ್ಯ ವಿಭಜನೆ ಎಂಬುದು ಲೂಟಿ ನೀತಿ"

ಬಿ.ವಿ. ರಾಘವುಲು

ಪ್ರ: ರಾಜ್ಯದಲ್ಲಿನ ಪ್ರಸ್ತುತ ಸ್ಥಿತಿ ಕುರಿತು ನಿಮ್ಮ ನೋಟ ಏನು?

ರಾಜ್ಯವನ್ನು ವಿಭಜಿಸುವ ವಿಷಯವನ್ನು ಈಗ ಮತ್ತೆ ಮುಂಚೂಣಿಗೆ ತರಲಾಗಿದೆ. ಟಿಆರ್‌ಎಸ್ ನಾಯಕ ಚಂದ್ರಶೇಖರ್ ರಾವ್ ನಡೆಸಿದ ಉಪವಾಸ ಸತ್ಯಾಗ್ರಹದ ಹಿನ್ನೆಲೆಯಲ್ಲಿ ತೆಲಂಗಾಣ ರಾಜ್ಯ ರಚನೆಯ ಪ್ರಕ್ರಿಯೆ ಆರಂಭಿಸಲಾಗಿದೆ ಎಂದು ಕೇಂದ್ರ ಸರ್ಕಾರ ತನ್ನ ಉದ್ದೇಶವನ್ನು ಪ್ರಕಟಿಸಿದ ನಂತರ ರಾಜ್ಯದ ಇತರ ವಲಯಗಳಲ್ಲಿ ಐಕ್ಯ ಆಂಧ್ರಕ್ಕಾಗಿ ಪ್ರತಿ ಚಳವಳಿ ಆರಂಭಗೊಂಡಿದೆ. ಕಾಂಗ್ರೆಸ್, ಟಿಡಿಪಿ ಮತ್ತು ಪಿಆರ್‌ಪಿ ಪಕ್ಷಗಳ ಹೆಚ್ಚಿನ ಸಂಖ್ಯೆಯ ಶಾಸಕರು ಮತ್ತು ಕೆಲವು ಸಂಸದರು ರಾಜೀನಾಮೆ ಸಲ್ಲಿಸಿರುವುದು ರಾಜ್ಯವನ್ನು ಬಿಕ್ಕಟ್ಟಿಗೆ ದೂಡಿದೆ. ರಾಜ್ಯ ವಿಧಾನ ಸಭೆ ಅವೇಶನ ಇದ್ದಕ್ಕಿದ್ದಂತೆ ಸ್ಥಗಿತಗೊಂಡಿದೆ. ಸಾಮಾನ್ಯ ಜನ ಎದುರಿಸುತ್ತಿರುವ ಸಮಸ್ಯೆಗಳ ಕುರಿತು ಚರ್ಚಿಸಲು ಮತ್ತು ಬಳ್ಳಾರಿ ರೆಡ್ಡಿಗಳು ಮಾಡುತ್ತಿರುವ ಗಣಿ ಲೂಟಿಯನ್ನು ಚರ್ಚಿಸಲು ಅವಕಾಶವೇ ಇಲ್ಲದಂತಾಗಿದೆ. ರಾಜ್ಯದಲ್ಲಿನ ಇಡೀ ಪರಿಸ್ಥಿತಿ ಇಂದು ಹದಗೆಡುತ್ತಿದ್ದು ಸಂಕಷ್ಟದ ಪರಿಸ್ಥಿತಿಗೆ ಜಾರುತ್ತಿದೆ. ವಿವಿಧ ಪ್ರದೇಶಗಳ ಜನತೆಯ ನಡುವೆ ವಿಭಜನೆಯ ಭಾವನೆ ಬೆಳೆಯುತ್ತಿದೆ.

ಪ್ರ: ರಾಜ್ಯದಲ್ಲಿನ ಈ ಬೆಳವಣಿಗೆಗಳಿಗೆ ಯಾರು ಕಾರಣ?

ಇದಕ್ಕೆ ಕಾಂಗ್ರೆಸ್ ಪಕ್ಷ ಸಂಪೂರ್ಣ ಜವಾಬ್ದಾರಿಯಾಗಿದೆ. ಆರಂಭದಿಂದಲೂ ಕಾಂಗ್ರೆಸ್ ಪಕ್ಷ ರಾಜ್ಯದ ಐಕ್ಯತೆಯೊಂದಿಗೆ ಚೆಲ್ಲಾಟ ಆಡುತ್ತಿದೆ. ಆ ಪಕ್ಷ ದೀರ್ಘ ಕಾಲದಿಂದಲೂ ಅವಕಾಶವಾದಿ ರಾಜಕಾರಣ ಮಾಡುತ್ತಾ ಬಂದಿದೆ. ದಿನ ಕಳೆಯುತ್ತಿದ್ದಂತೆ ತೆಲಂಗಾಣ ಪ್ರದೇಶದ ಜನತೆಯ ಪ್ರತ್ಯೇಕ ರಾಜ್ಯದ ಬೇಡಿಕೆ ಹೆಚ್ಚು ಹೆಚ್ಚು ಗಟ್ಟಿಗೊಳ್ಳುತ್ತಾ ಬಂದಿದೆ. ಈ ಪ್ರದೇಶ ಹಿಂದುಳಿದಿರುವಿಕೆಯಿಂದ ಹೊರಬರಲು ಕಾಂಗ್ರೆಸ್ ಪಕ್ಷ ಎಂದೂ ಪ್ರಾಮಾಣಿಕ ಪ್ರಯತ್ನ ನಡೆಸಲೇ ಇಲ್ಲ. ಅಷ್ಟೇ ಅಲ್ಲದೆ ಕಾಲಕಾಲಕ್ಕೆ ನಡೆಯುವ ಚುನಾವಣೆಗಳ ಸಂದರ್ಭದಲ್ಲಿ ತಾತ್ಕಾಲಿಕ ಲಾಭಕ್ಕಾಗಿ ತಾನು ನೀಡಿದ್ದ ಎಲ್ಲ ಭರವಸೆಗಳನ್ನು ಉಲ್ಲಂಘಿಸುತ್ತಾ ಬಂದಿದೆ. ಹಿಂದುಳಿದ ಪ್ರದೇಶಗಳ ಅಭಿವೃದ್ಧಿಯ ಮೇಲ್ವಿಚಾರಣೆಗೆ ರಚಿಸಿದ್ದ ಪ್ರಾದೇಶಿಕ ಮಂಡಳಿ, ಈ ಪ್ರದೇಶದಲ್ಲಿ ಉದ್ಯೋಗಗಳ ರಕ್ಷಣೆಗೆ ರೂಪಿಸಿದ್ದ ಸರ್ಕಾರಿ ಆದೇಶ (ಜಿ.ಒ) 610ರ ಅನುಷ್ಠಾನ ಇಂತಹ ಎಲ್ಲ ಯೋಜನೆಗಳನ್ನು ಕಾಂಗ್ರೆಸ್ ನಿರ್ಲಕ್ಷಿಸಿದೆ. ಕಾಂಗ್ರೆಸ್‌ನ ಈಗಿನ ನಿರ್ಧಾರ ಈ ಅವಕಾಶವಾದಿ ರಾಜಕಾರಣದ ಉತ್ತುಂಗವಾಗಿದೆ. ಒಂದು ಕಡೆ ತನ್ನ ಉದ್ದೇಶವನ್ನು ಪ್ರಕಟಿಸಿದ ಸರ್ಕಾರ ಮರುದಿನವೇ ಭಿನ್ನ ಸೂಚನೆಗಳನ್ನು ನೀಡುತ್ತಿದೆ. ಈ ಪ್ರಕ್ರಿಯೆಯಲ್ಲಿ ಇದು ಪರಿಸ್ಥಿತಿಯನ್ನು ಇನ್ನಷ್ಟು ಜಟಿಲಗೊಳಿಸಿದೆ.







ಪ್ರ: ಈ ಬೆಳವಣಿಗೆಗಳ ಹಿನ್ನೆಲೆಯಲ್ಲಿ ಸಿಪಿಎಂ ನಿಲುವೇನು?

ಆಗಿನ ಅವಿಜಿತ ಭಾರತ ಕಮ್ಯೂನಿಸ್ಟ್ ಪಕ್ಷ -ಸಿಪಿಐ ಈಗ ಸಿಪಿಎಂ ಐಕ್ಯ ರಾಜ್ಯದ ಪರವಾಗೇ ನಿಂತಿವೆ. ಆಂಧ್ರದಲ್ಲಿ ಮಾತ್ರವಲ್ಲ ಇಡೀ ದೇಶದಲ್ಲಿ ಪಕ್ಷದ ನಿಲುವು ಇದೇ ಆಗಿದೆ. ಭಾಷಾವಾರು ಪ್ರಾಂತ್ಯಗಳ ಆಧಾರದಲ್ಲಿ ರಾಜ್ಯಗಳನ್ನು ರಚಿಸುವ ಈ ಸಿದ್ಧಾಂತಕ್ಕೆ ಸಿಪಿಎಂ ಪಕ್ಷ ಇವತ್ತೂ ಬದ್ಧವಾಗಿದೆ. ಈ ಹಿಂದಿನ ಯುಪಿಎ ಸರ್ಕಾರ ಪ್ರಣಬ್ ಮುಖರ್ಜಿ ನೇತೃತ್ವದಲ್ಲಿ ರಚಿಸಿದ್ದ ಸಮಿತಿ ಮುಂದೆಯೂ ಇದೇ ನಿಲುವನ್ನು ಪ್ರತಿಪಾದಿಸಿದ್ದೇವೆ. ಸತ್ಯ ಏನೆಂದರೆ ಸಿಪಿಎಂ ಪಕ್ಷ ಮಾತ್ರ ಮೊದಲಿನಿಂದಲೂ ತನ್ನ ಸೈದ್ಧಾಂತಿಕ ನಿಲುವಿಗೆ ಬದ್ಧವಾಗಿದೆ. ಇತರ ಎಲ್ಲ ಪಕ್ಷಗಳು ಅವಕಾಶಕ್ಕೆ ಅನುಗುಣವಾಗಿ ತಮ್ಮ ನಿಲುವಿನಲ್ಲಿ ಬದಲಾವಣೆ ಮಾಡಿವೆ. ಇಂದು ಈ ಪಕ್ಷಗಳ ವಿವಿಧ ಪ್ರದೇಶಗಳ ಸಮಿತಿಗಳು ತದ್ವಿರುದ್ಧ ನಿಲುವುಗಳನ್ನು ಹೊಂದಿರುವಂತಹ ಅಸಂಬದ್ಧತೆಗೆ ಸಿಲುಕಿವೆ. ಶೋಷಣೆಗೆ ಒಳಗಾಗಿರುವ ಜನತೆ ಐಕ್ಯವಾಗಿದ್ದರೆ ಮಾತ್ರ ಅವರ ಹಿತಾಸಕ್ತಿಗಳಿಗಾಗಿ ಹೋರಾಟ ನಡೆಸಲು ಸಾಧ್ಯ ಎಂಬುದು ಸಿಪಿಎಂ ನಿಲುವಿನ ಹಿನ್ನೆಲೆಯಾಗಿದೆ.

ಪ್ರ: ದೇಶದಲ್ಲಿ ಹಿಂದಿ ಮಾತನಾಡುವ ಹಲವಾರು ರಾಜ್ಯಗಳು ಇರುವಾಗ ಸಿಪಿಎಂ ಪಕ್ಷದ ಭಾಷಾವಾರು ರಾಜ್ಯ ರಚನೆ ಸಿದ್ಧಾಂತ ಟೀಕೆಗೆ ಗುರಿಯಾಗುವುದಿಲ್ಲವೇ?


ಇಲ್ಲಿ ಅತ್ಯಂತ ಪ್ರಮುಖವಾದ ವ್ಯತ್ಯಾಸವಿದೆ. ಇಲ್ಲಿ ಭಾಷಾವಾರು ರಾಜ್ಯಗಳ ರಚನೆ ಬ್ರಿಟಿಷ್ ಸಾಮ್ರಾಜ್ಯಶಾಹಿಗಳ ವಿರುದ್ಧ ಮೂಡಿದ ಸ್ವಾತಂ[…] ಹೋರಾಟದ ಭಾಗವ[…] ಬೆಳೆದುಬಂದಿರುವುದಾಗಿ[…] ಭಾಷಾವಾರು ರಾಜ್ಯಗಳ ರಚನೆಗ[…] ಕಾಂಗ್ರೆಸ್ ಮತ್ತು ಕಮ್ಯೂನಿ[…] ಪಕ್ಷಗಳು ಅವಿರತ ಹೋರಾಟಗಳ[…] ನಡೆಸಿದವು. ಇದು ಆಂಧ್ರ ಪ್ರದೇ[…] ಕರ್ನಾಟಕ, ಕೇರಳ, ಮಹಾರಾ[…] ರಾಜ್ಯಗಳ ರಚನೆಗೆ ಕಾರಣವಾಯಿ[…] ಉತ್ತರ ಭಾರತದಲ್ಲಿ ಇಂತ[…] ಯಾವುದೇ ಹೋರಾಟಗಳು ನಡೆದಿ[…] ಈ ರಾಜ್ಯಗಳನ್ನು ಪ್ರಮುಖವ[…] ಆಡಳಿತಾತ್ಮಕ ದೃಷ್ಟಿಕೋನದಿ[…] ರಚಿಸಲಾಯಿತು. ಹಾಗಾಗಿ ಇವರೆಡನ್ನೂ ಹೋ[…] ಮಾಡುವುದು ಸರಿಯಲ್ಲ.

ಪ್ರ: ಭಾರತದ ಜನಸಂಖ್ಯೆಯಲ್ಲಿ ಮೂ[…] ಒಂದು ಭಾಗದಷ್ಟಿರುವ ಅಮೆರಿಕದಲ್ಲಿ[…] ರಾಜ್ಯಗಳಿವೆ ಎಂದು ಹೇಳುವ ವ[…] ತೆಲಂಗಾಣ ರಾಜ್ಯ ರಚನೆ ಪ್ರಕ್ರಿ[…] ಆರಂಭಿಸಿರುವ ನಿರ್ಧಾರವನ್ನು ಗೃಹ ಸಚಿವ[…] ಸಮರ್ಥಿಸಿಕೊಂಡಿದ್ದಾ[…] ಉದ್ಯಮ ಒಕ್ಕೂಟಗಳ[…] ಸಿಐಐ ಮತ್ತು ಅಸೋಚಾ[…] ಸಹ ಈ ನಿರ್ಧಾರವ[…] ಸ್ವಾಗತಿಸಿವೆ. ಹೀಗಿರುವ[…] ಈ ನಿರ್ಧಾರದ ಹಿ[…] ಏನಾದರೂ ಸಂಚಿದೆಯೇ[…]

ಒಂದನೆಯದಾಗಿ, ಬಲಿಷ್ಠವ[…] ರಾಜ್ಯಗಳು ಇರುವುದರಿ[…] ರಾಷ್ಟ್ರೀಯ ಸಂಪನ್ಮೂಲಗಳ[…] ಸುಲಭವಾಗಿ ಲೂಟಿ ಮಾಡ[…] ಸಾಧ್ಯವಿಲ್ಲ ಎಂಬ ಭಾ[…] ಆಳುವ ವರ್ಗಗಳ[…] ಬೆಳೆಯುತ್ತಿದೆ. ನೈಸಗಿ[…]

> "ದೊಡ್ಡ ರಾಜ್ಯಗಳನ್ನು ಸಣ್ಣ ಸಣ್ಣ ರಾಜ್ಯಗಳಾಗಿ ವಿಭಜಿಸುವುದರಿಂದ ದೇಶಾದ್ಯಂತ ನೈಸರ್ಗಿಕ ಸಂಪನ್ಮೂಲಗಳನ್ನು ಕೊಳ್ಳೆ ಹೊಡೆಯಲು ಅನುಕೂಲವಾಗಲಿದೆ ಎಂದು ನಮ್ಮ ದೇಶದ ಆಳುವ ವರ್ಗಗಳು ಮತ್ತು ಸಾಮ್ರಾಜ್ಯಶಾಹಿಗಳು ಭಾವಿಸುವುದು ಹೆಚ್ಚುತ್ತಿದೆ. ಹಾಗಾಗಿ ರಾಜ್ಯಗಳನ್ನು ವಿಭಜಿಸುವ ಪ್ರಕ್ರಿಯೆಯನ್ನು ಅವರು ಬೆಂಬಲಿಸುತ್ತಾರೆ"
>
> - ರಾಘವುಲು

ಪುಟ 1



‘ಐಕ್ಯರಂಗ’ ವಾರ ಪತ್ರಿಕೆಯ 2006 ರ ಸುವರ್ಣ ಕರ್ನಾಟಕ ವಿಶೇಷ ಸಂಚಿಕೆಗೆ ‘ಆಧುನಿಕ ಭಾರತ ರೂಪುಗೊಂಡ ಬಗೆ ಹಾಗೂ ಭಾಷಾವಾರು ಪ್ರಾಂತಗಳ ಉದಯ, ರಾಷ್ಟ್ರೀಯತೆಗಳ ಪ್ರಶ್ನೆ’ಗಳ ಕುರಿತು ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಕಾಂ.ಪ್ರಕಾಶ್ ಕಾರಟ್‌ರವರನ್ನು ಸಂದರ್ಶಿಸಲಾಗಿತ್ತು. ತೆಲಂಗಾಣ ಪ್ರತ್ಯೇಕ ರಾಜ್ಯದ ಪ್ರಶ್ನೆಯ ಹಿನ್ನೆಲೆಯಲ್ಲಿ ಉಂಟಾಗಿರುವ ಸನ್ನಿವೇಶದಲ್ಲಿ ಪ್ರಕಾಶ್ ಕಾರಟ್‌ರವರ ಈ ಸಂದರ್ಶನಕ್ಕೆ ವಿಶೇಷ ಮಹತ್ವವಿದೆ. ಈ ಹಿನ್ನೆಲೆಯಲ್ಲಿ ಸಂದರ್ಶನದ ಆಯ್ದ ಭಾಗಗಳನ್ನು ಈ ಪ್ರಕಟಿಸಲಾಗಿದೆ.

ಆಧುನಿಕ ಭಾರತ ರೂಪುಗೊಂಡ ಬಗೆ ಹಾಗೂ ಭಾಷಾವಾರು ಪ್ರಾಂತ್ಯಗಳ ರಚನೆ

ಪ್ರಶ್ನೆ: ಆಧುನಿಕ ಭಾರತ ರೂಪುಗೊಂಡ ಬಗೆ ಮತ್ತು ಭಾಷಾವಾರು ಪ್ರಾಂತಗಳ ರಚನೆಯ ಕುರಿತಂತೆ ಮಾರ್ಕ್ಸ್‌ವಾದಿ ವಿಶ್ಲೇಷಣೆ ಏನು? ಇದರ ವರ್ಗ ಹಿತಾಸಕ್ತಿ ಏನು?

ಪ್ರಕಾಶ್ ಕಾರಟ್: ಆಧುನಿಕ ಭಾರತದ ಈ ರಾಷ್ಟ್ರೀಯತೆಯ ಪ್ರಜ್ಞೆ ಬ್ರಿಟೀಷ್ ಸಾಮ್ರಾಜ್ಯಶಾಹಿಯ ವಿರುದ್ಧದ ಸುದೀರ್ಘ ಹೋರಾಟದಲ್ಲಿ ರೂಪುಗೊಂಡದ್ದು. ಮಾರ್ಕ್ಸ್‌ವಾದಿ ದೃಷ್ಟಿಯಲ್ಲಿ ನೋಡುವುದಾದರೆ, ಬಂಡವಾಳಶಾಹಿ ವರ್ಗದ ಉದಯ ಈ ರಾಷ್ಟ್ರೀಯತೆಯ ಪ್ರಜ್ಞೆಯ ಜಾಗೃತಿಗೆ-ಬೆಳವಣಿಗೆಗೆ ಕಾರಣವಾಗುತ್ತದೆ. ಈ ಬೂರ್ಜ್ವಾ ವರ್ಗದ ‘ಸಾಮಾನ್ಯ ಮಾರುಕಟ್ಟೆ’ ಬೆಳವಣಿಗೆ ಇದರ ಹಿಂದಿರುತ್ತದೆ. ಯುರೋಪಿನಲ್ಲಿ 17ನೇ ಶತಮಾನದಲ್ಲಿ ಬೆಳೆದು ಬಂದ ರಾಷ್ಟ್ರೀಯತೆಯನ್ನಾಧರಿಸಿದ ರಾಜ್ಯದ ಪರಿಕಲ್ಪನೆಗೆ ಹೊಸದಾಗಿ ಉದಿಸಿದ ಬೂರ್ಜ್ವಾ ವರ್ಗವೇ ಆಧಾರವಾಗಿದೆ. ಪಾಳೇಗಾರಿ ರಾಜ ಪ್ರಭುತ್ವ ವ್ಯವಸ್ಥೆಗೆ ವಿರುದ್ಧವಾಗಿ ಇದು ವಿಶಾಲ ಪ್ರದೇಶಗಳನ್ನೊಳಗೊಂಡ ಹಾಗೂ ಗಡಿಗಳನ್ನು ನಿರ್ದಿಷ್ಟಗೊಳಿಸಿದ ಕೇಂದ್ರಿಕೃತವಾದ ವ್ಯವಸ್ಥೆಯಾಗಿತ್ತು. ನಿರ್ದಿಷ್ಟಗೊಳಿಸಲಾದ ಗಡಿಗಳನ್ನು ಹೊಂದಿರುವ ಮಾರುಕಟ್ಟೆಯ ಅಗತ್ಯ ಈ ಬೂರ್ಜ್ವಾ ವರ್ಗಕ್ಕಿತ್ತು.

ಈ ರಾಷ್ಟ್ರೀಯತೆಯ ಭಾವನೆಯ ಬೆಳವಣಿಗೆಗೆ ಭಾಷೆ ಒಂದು ವಾಹನವೆಂಬಂತ್ತಿತ್ತು. ಭಾರತದಲ್ಲಿ ಈ ಪ್ರಕ್ರಿಯೆ 19ನೇ ಶತಮಾನದ ಕೊನೆಯ ಭಾಗದಲ್ಲಿ ಆರಂಭಗೊಂಡು 20ನೇ ಶತಮಾನದಲ್ಲಿ ವಿಕಸನ ಗೊಂಡಿತು. ಭಾರತ ಆಧುನಿಕ ರಾಷ್ಟ್ರವಾಗಿ ರೂಪು ತಳೆಯತೊಡಗಿತು.

ಪ್ರಶ್ನೆ: ಭಾರತದಲ್ಲಿ ಭಾಷಾ ರಾಷ್ಟ್ರೀಯತೆಗಳು ರೂಪುಗೊಂಡ ಬಗೆ ಹೇಗೆ?


ಕಾರಟ್ : ಸ್ವಾತಂತ್ರ್ಯ ಹೋರಾಟದ ಕಡೆಗೆ ಹಿಂತಿರುಗಿ ನೋಡಿದರೆ, ಹೊಸದಾಗಿ ಉದಯಿಸುತ್ತಿದ್ದ ಬೂರ್ಜ್ವಾ ವರ್ಗ ಮತ್ತು ಆಧುನಿಕ ಶಿಕ್ಷಣ ಪಡೆದ ಮಧ್ಯಮ ವರ್ಗ ಇವರ ನಡುವೆ ರಾಷ್ಟ್ರೀಯತೆಯ ಪ್ರಜ್ಞೆ ಜಾಗೃತವಾಗುತ್ತಿದ್ದುದನ್ನು ಕಾಣುತ್ತೇವೆ. ಆಧುನಿಕ ಶಿಕ್ಷಣ ಪದ್ಧತಿಯೂ ಈ ರಾಷ್ಟ್ರೀಯತೆಯ ಬೆಳವಣಿಗೆಗೆ ಕಾರಣವಾಗಿದೆ. ಕಾಂಗ್ರೆಸ್ ಪಕ್ಷವು ಸ್ಥಾಪಿಸಲ್ಪಟ್ಟಾಗ ಈ ವರ್ಗಗಳೇ ಪ್ರಮುಖ ಪಾತ್ರ ವಹಿಸಿರುವುದನ್ನು ನೋಡುತ್ತೇವೆ. ಗಾಂಧೀಜಿಯವರ ಆಗಮನದೊಂದಿಗೆ ಕಾಂಗ್ರೆಸ್ ಪಕ್ಷವು ಒಂದು ಸಾಮೂಹಿಕ ಪಕ್ಷವಾಗಿ ರೂಪುಗೊಳ್ಳುತ್ತದೆ. ಈ ನಿಟ್ಟಿನಲ್ಲಿ ಗಾಂಧೀಜಿಯವರ ಪ್ರಥಮ ಹೆಜ್ಜೆಯೇ ಕಾಂಗ್ರೆಸ್ ಪಕ್ಷವನ್ನು ಭಾಷಾವಾರು ಪ್ರಾಂತಗಳ ಆಧಾರದಲ್ಲಿ ಪುನರ್ ರಚಿಸುವುದಾಗಿದೆ.

1920ರ ನಾಗಪುರ ಮಹಾ ಅಧಿವೇಶನವು ಈ ಕುರಿತು ನಿರ್ಣಯವನ್ನು ಅಂಗೀಕರಿಸುತ್ತದೆ. ಅಖಿಲ ಭಾರತ ಕಾಂಗ್ರೆಸ್ ಸಮಿತಿ (ಎಐಸಿಸಿ)ಯ ಜೊತೆಗೆ ಪ್ರದೇಶ ಕಾಂಗ್ರೆಸ್ ಸಮಿತಿ (ಪಿಸಿಸಿ)ಗಳನ್ನು ರಚಿಸಲು ನಿರ್ಣಯಿಸಲಾಯಿತು. ‘ರಾಷ್ಟ್ರೀಯ ಚಳುವಳಿಗೆ ಜನ ಸಮೂಹಗಳನ್ನು ಸೆಳೆಯಬೇಕಾದರೆ ಭಾಷಾ ರಾಷ್ಟ್ರೀಯತೆಯನ್ನು ಜಾಗೃತಗೊಳಿಸಬೇಕು’ ಎಂದು ಗಾಂಧೀಜಿಯವರು ಅರ್ಥಮಾಡಿಕೊಂಡರು. ಜನ ಸಮೂಹಗಳನ್ನು ಬಡಿದೆಬ್ಬಿಸಬೇಕಾದರೆ ಪ್ರಾಂತ್ಯಗಳ ಹಂತದಲ್ಲಿ ತಳ ಹಂತದಲ್ಲಿ ಜನ ಸಮೂಹಗಳನ್ನು ಜಾಗೃತಗೊಳಿಸಬೇಕೆಂಬ ಆಧಾರದಲ್ಲಿ ಹಾಗೆ ಮಾಡಲಾಯಿತು. ಸಮಗ್ರ ರಾಷ್ಟ್ರೀಯತೆ ಮತ್ತು ಭಾಷಾಧಾರಿತವಾದ ಕೆಲವರು ‘ಉಪ ರಾಷ್ಟ್ರೀಯತೆ’ ಎಂದು ಕರೆಯುವ ಭಾಷಾ ರಾಷ್ಟ್ರೀಯತೆಗಳೂ ಸಮಾನಾಂತರವಾಗಿಯೇ ಬೆಳೆದವು. ಈ ಭಾಷಾ ರಾಷ್ಟ್ರೀಯತೆಗಳು ಈ ಸಮಗ್ರ ರಾಷ್ಟ್ರೀಯತೆಯ ಭಾಗವಾಗಿಯೇ ಬೆಳೆದವು. ಇದನ್ನು ಒಂದಕ್ಕೊಂದು ವಿರುದ್ಧ ಎಂದು ಬಿಂಬಿಸುವುದು ತಪ್ಪಾಗುತ್ತದೆ. ಭಾಷಾ ಆಧಾರಿತವಾದ ರಾಷ್ಟ್ರೀಯತೆ ಜಾಗೃತವಾಗದೇ ಸಾಮ್ರಾಜ್ಯಶಾಹಿಯ ವಿರುದ್ಧ ವಿಶಾಲ ಪ್ರಜಾಪ್ರಭುತ್ವ ಚಳುವಳಿ ರೂಪಿಸುವುದು ಸಾಧ್ಯವಿರಲಿಲ್ಲ.

ಪ್ರಶ್ನೆ: ನಾವು ಯಾಕೆ ‘ಭಾಷಾ ರಾಷ್ಟ್ರೀಯತೆ’ ಎಂದೇ ಗುರುತಿಸುತ್ತೇವೆ. ಕೆಲವರು ಧರ್ಮದ ಆಧಾರದ ಮೇಲೆ ರಾಷ್ಟ್ರೀಯತೆಯನ್ನು ಗುರುತಿಸಲು ಯತ್ನಿಸುತ್ತಾರಲ್ಲ ಆ ಬಗ್ಗೆ..?

ನಮ್ಮ ತಿಳುವಳಿಕೆಯಲ್ಲಿ ರಾಷ್ಟ್ರೀಯತೆ ಹಾಗೂ ರಾಷ್ಟ್ರೀಯತೆಯ ಮೂಲ ಆಧಾರ ರಚನೆಯ ಅಂಶಗಳಲ್ಲಿ ಭಾಷೆ ಒಂದು ಪ್ರಮುಖವಾದ ಆಧಾರ. ಭಾರತ ಬಹು ಭಾಷಾ ದೇಶ. ಇಲ್ಲಿ ಹಲವು ಭಾಷೆಗಳು ಬೆಳೆದು ಬಂದಿವೆ. ರಾಷ್ಟ್ರೀಯತೆಯನ್ನು ನಾವು ಭಾಷೆಯಿಂದ ಪ್ರತ್ಯೇಕಿಸಲಾಗದು. ಆದರೆ ರಾಷ್ಟ್ರೀಯತೆಗೆ ಭಾಷೆಯೊಂದೇ ಆಧಾರವಲ್ಲ.

ಭಾಷಾವಾರು ಪ್ರಾಂತ ರಚನೆ ಸಮಾಜದ ಪ್ರಜಾಪ್ರಭುತ್ವೀಕರಣಕ್ಕೆ ಒಂದು ಪ್ರಮುಖ ಹೆಜ್ಜೆಯಾಗಿತ್ತು. ಕಾಂಗ್ರೆಸ್ ಪಕ್ಷವು ಸ್ವಾತಂತ್ರ್ಯ ಹೋರಾಟದ ಸಂದರ್ಭದಲ್ಲಿ ಭಾಷಾವಾರು ಪ್ರಾಂತ ರಚನೆಗೆ ವಚನಬದ್ಧವಾಗಿತ್ತು. ಆದರೆ ಸ್ವಾತಂತ್ರ್ಯಾ ನಂತರ ಕಾಂಗ್ರೆಸ್ ತನ್ನ ನಿಲುವು ಬದಲಿಸಿತು. ನೆಹರೂರವರು ಭಾಷಾವಾರು ಪ್ರಾಂತ ರಚನೆಯ ಕ್ರಮವನ್ನು ‘ಭಾರತದ ವಿಘಟನೆಯ ಕ್ರಮ, ಅದನ್ನು ಮಾಡಬಾರದು’ ಎಂದರು. ಜವಾಹರ್ ಲಾಲ್‌ನೆಹರು ಅವರು ಅಂದಿನ ಕೇಂದ್ರೀಕೃತವಾಗಿದ್ದ ಬಾಲ್ಕನ್ ದೇಶಗಳ ವಿಘಟನೆಯ ಹಿನ್ನಲೆಯಲ್ಲಿ ಭಾಷಾವಾರು ಪ್ರಾಂತ ರಚನೆಯ ಕುರಿತಾಗಿ ‘ಬಾಲ್ಕನೈಷನ್’ ಎಂದು ಕರೆದರು. ಕಮ್ಯೂನಿಸ್ಟರು ‘ಭಾಷಾವಾರು ಪ್ರಾಂತ ರಚನೆಯು ಸ್ವಾತಂತ್ರ್ಯ ಚಳುವಳಿಯ ಪ್ರತಿಜ್ಞೆಯ ಜಾರಿ’ ಎಂದು ವಾದಿಸಿದರು. ಪ್ರಜಾಪ್ರಭುತ್ವ, ಗಣತಂತ್ರದ ರಚನೆಯ ಪ್ರಕ್ರಿಯೆ ಇದು ಎಂದು ಭಾವಿಸಿದರು. ಈ ನಿಟ್ಟಿನಲ್ಲಿ ಭಾಷೆ ಒಂದು ಪ್ರಧಾನವಾದ ಅಂಶವಾಗಿತ್ತು. ಸ್ವಾತಂತ್ರ್ಯಾ ನಂತರ ಶಿಕ್ಷಣ, ಆಡಳಿತ, ಸಂವಹನ ಇತ್ಯಾದಿಗಳಲ್ಲಿ ತಮ್ಮ ಭಾಷೆಯನ್ನು ಬಳಸುವಂತಿರುವುದು ಅಗತ್ಯವಾಗಿತ್ತು.



ಒಂದು ಪ್ರಜಾಪ್ರಭುತ್ವ ರಾಜಕೀಯ ವ್ಯವಸ್ಥೆಯನ್ನು ರೂಪಿಸಬೇಕಿದ್ದರೆ ಅದು ಜನರಿಗೆ ಪರಕೀಯವಾದ ಭಾಷೆಯ ಮೂಲಕ ಸಾಧ್ಯವಿರಲಿಲ್ಲ. ಬ್ರಿಟೀಷರ ಆಡಳಿತದಲ್ಲಿ ಆಡಳಿತಾತ್ಮಕ ಅನುಕೂಲಗಳಿಗಾಗಿ ಪ್ರಾಂತಗಳನ್ನು ರಚಿಸಲಾಗಿತ್ತು. ಮುಂಬೈ ಪ್ರಾಂತ, ಮದ್ರಾಸ್ ಪ್ರಾಂತ ಹೀಗೆ, ಇದೆಲ್ಲವೂ ಬಹು ಭಾಷಾ ಪ್ರಾಂತಗಳಾಗಿದ್ದವು. ಈ ಬಹುಭಾಷಾ ಪ್ರಾಂತಗಳನ್ನು ಪುನರ್ ಸಂಘಟಿಸಿ ಭಾಷಾವಾರು ಪ್ರಾಂತ ರಚಿಸಬೇಕೆಂದು ಕಮ್ಯುನಿಸ್ಟರು ಹೋರಾಡಿದರು. ಕಾಂಗ್ರೆಸ್ ಪಕ್ಷ ಇದಕ್ಕೆ ಹಿಂದೆಗೆಯಿತು. ಕನ್ನಡ, ತೆಲುಗು, ತಮಿಳು ಈ ಎಲ್ಲಾ ಭಾಷೆಗಳನ್ನೊಳಗೊಂಡ ಒಂದು ಪ್ರಾಂತ ಇತ್ತು ಎಂದಾದರೆ ಅಲ್ಲಿ ಯಾವ ಭಾಷೆಯನ್ನು ಆಯ್ಕೆ ಮಾಡಿಕೊಳ್ಳಬೇಕೆಂಬ ಬಗ್ಗೆ ಗೊಂದಲ ಮೂಡುತ್ತಿತ್ತು. ಆ ಸಂದರ್ಭದಲ್ಲಿ ಇಂಗ್ಲೀಷ್ ಭಾಷೆಯನ್ನು ಮುಂದುವರಿಸುವುದು ಆಡಳಿತಗಾರರಿಗೆ ಸುಲಭವಾಗುತ್ತಿತ್ತು. ಶಿಕ್ಷಣ, ಆಡಳಿತ ಇತ್ಯಾದಿಗಳು ಜನರ ಭಾಷೆಯಲ್ಲಿರುವ ಭಾಷಾವಾರು ಪ್ರಾಂತ ರಚನೆಯ ಬೇಡಿಕೆಯೇನು ಸಮಾಜವಾದಿ ಬೇಡಿಕೆಯಾಗಿರಲಿಲ್ಲ. ಮೂಲಭೂತವಾಗಿ ಅದು ಒಂದು ಪ್ರಜಾಪ್ರಭುತ್ವ ಬೇಡಿಕೆಯಾಗಿತ್ತು!

ಸ್ವಾತಂತ್ರ್ಯವನ್ನು ಕ್ರೋಢೀಕರಿಸಿ, ಭಾರತದ ರಾಜ್ಯ ಸ್ವರೂಪವನ್ನು ಪುನರ್ ರಚಿಸಲು, ಪ್ರಜಾಪ್ರಭುತ್ವವನ್ನು ಬಲಪಡಿಸಲು ಅದು ಅಗತ್ಯವಾಗಿತ್ತು.

ಪ್ರಶ್ನೆ : ಭಾಷಾವಾರು ಪ್ರಾಂತ ರಚನೆಗಾಗಿ ಕಮ್ಯುನಿಸ್ಟರು ಬೇರೆ ಬೇರೆ ರಾಜ್ಯಗಳಲ್ಲಿ ಏನು ಪಾತ್ರ ವಹಿಸಿದರು?

ಭಾರತದ ಸಂವಿಧಾನ ರಚನೆಗೊಂಡ ಮೇಲೆ, 1951-52ರಲ್ಲಿ ಕಮ್ಯುನಿಸ್ಟ್ ಪಕ್ಷವು ಕಾನೂನುಬದ್ಧವಾದ ಮೇಲೆ, ಸ್ವತಂತ್ರ ಭಾರತದ ಪ್ರಥಮ ಸಾರ್ವತ್ರಿಕ ಚುನಾವಣೆಗಳ ಸಂದರ್ಭದಲ್ಲಿಯೇ ವಿಶಾಲಾಂಧ್ರದ ಪ್ರಶ್ನೆಯು ಎದ್ದು ಬಂದಿತು. ಈ ವಿಶಾಲಾಂಧ್ರ ಚಳುವಳಿಯಲ್ಲಿ ಕಮ್ಯುನಿಸ್ಟರು ನೇತೃತ್ವದ ಪಾತ್ರ ವಹಿಸಿದ್ದರು. ವಿಶಾಲಾಂಧ್ರದ ಈ ಚಳುವಳಿಯು ಭಾಷಾವಾರು ಪ್ರಾಂತ ರಚನೆಯ ಪ್ರಶ್ನೆಯನ್ನು ಮುಂಚೂಣಿಗೆ ತಂದಿತು. ಕೇಂದ್ರ ಸರ್ಕಾರ ಆರಂಭದಲ್ಲಿ ವಿಶಾಲಾಂಧ್ರದ ರಚನೆಗೆ ವಿರೋಧವಾಗಿತ್ತು.

ಜನ ಸಮುದಾಯದ ಸಾಮೂಹಿಕ ಹೋರಾಟ ಮೂಡಿಬಂದಿತು. ಕಾಂಗ್ರೆಸ್‌ನ ಮುಖಂಡರಾದ ಪೊಟ್ಟಿ ಶ್ರೀರಾಮುಲು ಅವರು ಈ ಉದ್ದೇಶಕ್ಕಾಗಿ ಉಪವಾಸ ಸತ್ಯಾಗ್ರಹ ನಡೆಸಿ ಈ ಹೋರಾಟದಲ್ಲೇ

ಪುಟ 10ಕ್ಕೆ

ಭಾಷಾವಾರು ಪ್ರಾಂತ್ಯಗಳ ರಚನೆ....

ಪುಟ 9 ರಿಂದ

ಮರಣ ಹೊಂದಿದರು. ಕಾಂಗ್ರೆಸ್ ಪಕ್ಷದ ಮೇಲೆ ಒತ್ತಡ ಹೆಚ್ಚಿತು. ಕಾಂಗ್ರೆಸ್ ಕಾರ್ಯಕರ್ತರೂ, ಮುಖಂಡರೂ ಈ ಚಳುವಳಿಗೆ ಸೇರಿದರು. ಈ ಹಿನ್ನೆಲೆಯಲ್ಲಿ ರಾಜ್ಯಗಳ ಪುನರ್‌ರಚನಾ ಆಯೋಗವನ್ನು ರಚಿಸ ಲಾಯಿತು. ಈ ಸಮಿತಿಯು ಸ್ಥೂಲವಾಗಿ ಭಾಷಾವಾರು ಪ್ರಾಂತ ರಚನೆಗೆ ಶಿಫಾರಸ್ಸು ಮಾಡಿತು. ಇಡಿಯಾಗಿ ಆಂಧ್ರದ ಎಲ್ಲಾ ಪ್ರದೇಶಗಳನ್ನು ಅದರಲ್ಲಿ ಸೇರಿಸುವ ಶಿಫಾರಸ್ಸು ಇರಲಿಲ್ಲ. ವಿಶಾಲಾಂಧ್ರದಲ್ಲಿ ಆದಂತೆ ಕೇರಳದಲ್ಲಿಯೂ ಕಾಂಗ್ರೆಸ್ ಅದೇ ನಿಲುವು ತಳೆಯಿತು. ಆಂಧ್ರದಲ್ಲಿ

ಕಾಂ|| ಪಿ. ಸುಂದರಯ್ಯ ಅವರು ತೆಲುಗು ಭಾಷಿಕ ಪ್ರದೇಶಗಳೆಲ್ಲಾ ಒಂದು ಗೂಡಿ ವಿಶಾಲಾಂಧ್ರ ಏಕಾಗಬೇಕೆಂದು ವಿವರಿಸಿ ಅತ್ಯುತ್ತಮವಾದ ಪುಸ್ತಕವನ್ನು ಬರೆದರು. ಅದೇ ರೀತಿ ಕಾಂ|| ಇ.ಎಂ.ಎಸ್.ನಂಬೂದರಿ ಪಾದ್‌ರವರು ಐಕ್ಯ ಕೇರಳದ ಬಗೆಗೆ ಕಿರುಹೊತ್ತಿಗೆ ಬರೆದರು. ಆಗ ಕೇರಳವು, ತಿರುವಾಂಕೂರು, ಕೊಚ್ಚಿನ್‌ಗಳ ರಾಜ ಪ್ರಭುತ್ವಗಳ ಅಡಿ ಮತ್ತು ಬ್ರಿಟೀಷ್ ಆಳ್ವಿಕೆಯ ಮದ್ರಾಸ್‌ಗಳಲ್ಲಿ ಹಂಚಿಹೋಗಿತ್ತು. ಇದಾದ ನಂತರ ಕರ್ನಾಟಕದ ಏಕೀಕರಣದ ಪ್ರಶ್ನೆ, ಅದೇ ರೀತಿ ಸಂಯುಕ್ತ ಮಹಾರಾಷ್ಟ್ರ, ಮಹಾ ಗುಜರಾತ್, ಹೀಗೆ ಹಲವು ಸಾಮೂಹಿಕ ಚಳುವಳಿಗಳು ಎದ್ದು ಬಂದವು. ಈ ಎಲ್ಲಾ ಹೋರಾಟಗಳಲ್ಲಿ ಅಂದಿನ ಅವಿಭಜಿತ ಕಮ್ಯುನಿಸ್ಟ್ ಪಕ್ಷವು ಇತರ ಪ್ರಜಾಪ್ರಭುತ್ವ ಶಕ್ತಿಗಳೊಂದಿಗೆ ಇದರಲ್ಲಿ ಪಾತ್ರ ವಹಿಸಿತು. ರಾಜಕೀಯ ಪಕ್ಷಗಳಲ್ಲಿ ಭಾಷಾವಾರು ಪ್ರಾಂತ ರಚನೆಯ ಬಗ್ಗೆ ಸದಸ್ಯತ್ವ ದೃಷ್ಟಿಕೋನ ಹೊಂದಿ, ಅದಕ್ಕಾಗಿ ಚಳುವಳಿ ನಡೆಸಿದ್ದು ಅಂದಿನ ಭಾರತ ಕಮ್ಯುನಿಸ್ಟ್ ಪಕ್ಷ(ಸಿಪಿಐ) ಮಾತ್ರ. ಮಹಾರಾಷ್ಟ್ರದಲ್ಲಿ ಆದಂತೆ ಕೆಲವು ರಾಜ್ಯ ಮಟ್ಟದ ಪ್ರಾದೇಶಿಕ ರಾಜಕೀಯ ಪಕ್ಷಗಳು, ಶಕ್ತಿಗಳು ಇದರಲ್ಲಿ ಸೇರಿದ್ದರೂ ಸಹ ಅಖಿಲ ಭಾರತ ಮಟ್ಟದಲ್ಲಿ ಈ ಬಗ್ಗೆ ಸ್ಪಷ್ಟ ತಿಳುವಳಿಕೆ, ದೃಷ್ಟಿಕೋನ ಹೊಂದಿದ್ದುದ್ದು ಕೇವಲ ಸಿಪಿಐ ಪಕ್ಷ ಮಾತ್ರ.

ಪ್ರಶ್ನೆ: ಭಾಷಾವಾರು ಪ್ರಾಂತ ರಚನೆಯ ಆಶೋತ್ತರಗಳು ಈಡೇರಿವೆಯೇ?

ಕಾರಟ್: ಇವತ್ತಿನ ಭಾರತದ ರಾಜ್ಯ ರಚನೆ, ರಾಜಕೀಯ-ಸಮಾಜ ವ್ಯವಸ್ಥೆ ಎಲ್ಲವೂ ಭಾಷಾವಾರು ರಾಜ್ಯಗಳ ವಾಸ್ತವವನ್ನೇ ಆಧರಿಸಿವೆ. ಇದೀಗ ನಾವದನ್ನು ತಿರುಗು ಮುರುಗು ಮಾಡಲಾಗದು. ಇದನ್ನು ನಾವು ಪೂರ್ಣ ಗಣರಾಜ್ಯ ಎಂದು ಹೇಳಲು ಸಾಧ್ಯವಿಲ್ಲವಾದರೂ, ಭಾರತ ಒಂದು ಅರೆ ಗಣರಾಜ್ಯವಾಗಿದ್ದರೂ (ಕ್ವಾಸಿ ಫೆಡರಲ್) ಇಲ್ಲಿ ಏನೆಲ್ಲಾ ಗಣ ತಂತ್ರದ ಅಂಶಗಳಿವೆಯೋ, ಲಕ್ಷಣ -ಸ್ವಭಾವ ಇದೆಯೋ ಅದೆಲ್ಲವೂ ಭಾಷಾವಾರು ರಾಜ್ಯ ರಚನೆಯನ್ನೇ ಪ್ರತಿಫಲಿಸುತ್ತದೆ. ಇಂದು ಭಾರತದಲ್ಲಿ ವಿವಿಧ ಭಾಷಾ ಜನಾಂಗಗಳನ್ನು ಪ್ರತಿನಿಧಿಸುವ 10 ಪ್ರಮುಖ ಭಾಷಾವಾರು ಪ್ರಾಂತಗಳಿವೆ. ಇದಲ್ಲದೆ ಈಶಾನ್ಯ ಪ್ರದೇಶದ ಸಣ್ಣ ಸಣ್ಣ ರಾಜ್ಯಗಳಿವೆ. ಈ ರೀತಿಯ ಭಾಷಾವಾರು ರಾಜ್ಯ ರಚನೆಯು -ರಾಜ್ಯಗಳು ಸಣ್ಣದಿರಲಿ ಅಥವಾ ದೊಡ್ಡದಿರಲಿ ಅವುಗಳ ಬೆಳವಣಿಗೆಗೆ ಸಮಾನ ಅವಕಾಶ ಗಳನ್ನು ಒದಗಿಸುತ್ತದೆ. ಹೆಚ್ಚು ಜನ ಮಾತ ನಾಡುವ ಭಾಷೆಯೇ ಇರಲಿ, ಕಡಿಮೆ ಜನರು ಬಳಸುವ ಭಾಷೆಯೇ ಇರಲಿ ಅವನ್ನು ಸಮಾನವಾಗಿ ಪರಿಗಣಿಸು ವಂತಾಗುತ್ತದೆ. ಭಾಷಾವಾರು ಪ್ರಾಂತ ರಚನೆಯಿಂದಾಗಿ ಕರ್ನಾಟಕದ ಕನ್ನಡ ಇರಲಿ, ಪಂಜಾಬ್‌ನಲ್ಲಿ ಪಂಜಾಬಿ ಇರಲಿ, ಅಸ್ಸಾಂನಲ್ಲಿ ಅಸ್ಸಾಮಿ, ಹೀಗೆ ಭಾರತದ ಎಲ್ಲ ಭಾಷೆಗಳು ಸಮಾನ ಎನ್ನುವ ನೀತಿಯ ಕಡೆಗೆ ಸಾಗಿದಂತಾಗುತ್ತದೆ. ಭಾಷಾವಾರು ಪ್ರಾಂತ್ಯ ಗಳಲ್ಲಿ ಸಹಜವಾಗಿ ಭಾಷಾ ಅಲ್ಪಸಂಖ್ಯಾತರು ಇದ್ದೇ ಇರುತ್ತಾರೆ. ಇಂತಹ ಭಾಷಾ ಅಲ್ಪಸಂಖ್ಯಾತರ ಹಕ್ಕುಗಳನ್ನು ಗುರುತಿಸಬೇಕು ಅವುಗಳನ್ನು ರಕ್ಷಿಸಬೇಕು.

ಪ್ರಶ್ನೆ: ಭಾಷಾವಾರು ಪ್ರಾಂತಗಳ ರಚನೆಯನ್ನು ಕೇವಲ ಭಾಷೆಗಳ ಬೆಳವಣಿಗೆಯ ದೃಷ್ಟಿಯಿಂದ ರಚಿಸ ಲಾಗಿಲ್ಲ. ಇದರ ಹಿಂದೆ ಆರ್ಥಿಕಾಭಿವೃದ್ಧಿಯ ಆಶಯಗಳೂ ಇದ್ದವು. ಕರ್ನಾಟಕ ಒಂದುಗೂಡಿದರೆ ಉತ್ತಮವಾದ ಅಭಿವೃದ್ಧಿ ಸಾಧಿಸಬಹುದು ಎಂಬ ನಿರೀಕ್ಷೆ ಇತ್ತು. ಇಂತಹ ಆಶಯಗಳು ಈಡೇರಿವೆಯೇ?

ಕಾರಟ್: ಆರ್ಥಿಕಾಭಿವೃದ್ಧಿಯ ಆಶಯಗಳು ಪೂರ್ಣವಾಗಿ ಈಡೇರಿಲ್ಲ. ಆದರೆ ಈಗ ಆಗಿರುವ ಬೆಳವಣಿಗೆಗಳು ಭಾಷಾವಾರು ರಚನೆ ಆಧಾರದ ಮೇಲೆಯೇ ಆಗಿವೆ. ಇದು ರಾಷ್ಟ್ರ ನಿರ್ಮಾಣದ ಪ್ರಕ್ರಿಯೆಯ ಭಾಗ. ನನ್ನ ದೃಷ್ಟಿಯಲ್ಲಿ ಭಾರತ ಈಗಲೂ ರೂಪುಗೊಳ್ಳುತ್ತಿರುವ ರಾಷ್ಟ್ರೀಯತೆ. ಅಖಿಲ ಭಾರತ ಮಟ್ಟದಲ್ಲಿ ಭಾಷಾ ರಾಷ್ಟ್ರೀಯತೆಯ ಗುರುತುಗಳನ್ನು ಬಲಪಡಿಸುವುದು ಭಾರತದ ರಾಷ್ಟ್ರೀಯತೆಯನ್ನು ದುರ್ಬಲಗೊಳಿಸುವುದಿಲ್ಲ, ಬದಲಿಗೆ ಅದಕ್ಕೆ ಪೂರಕವಾಗಿ ಅದನ್ನು ಬಲಪಡಿಸುತ್ತದೆ. ಭಾರತದ ಸಂವಿಧಾನ ಜಾರಿಗೆ ಬಂದ ಐದು ದಶಕಗಳಿಗೂ ಹೆಚ್ಚಿನ ಕಾಲವನ್ನು ಅವಲೋಕಿಸಿದರೆ ಈ ಅಂಶವು ಮನದಟ್ಟಾಗುತ್ತದೆ. ವಾಸ್ತವವಾಗಿ ಭಾಷಾವಾರು ರಾಜ್ಯಗಳು ಈ ಭಾರತದ ಒಗ್ಗಟ್ಟನ್ನು ಕಾಪಾಡುತ್ತಿವೆ.

ಒಂದೊಮ್ಮೆ ಈ ಭಾಷಾವಾರು ರಾಷ್ಟ್ರೀಯತೆಗಳ ಆಧಾರದ ಪ್ರಾಂತ ರಚನೆ ಆಗದೆ ಇದ್ದಿದ್ದರೆ ಆಗ ಇತರ ವಿಭಜನಾಕಾರಿ ಶಕ್ತಿಗಳು ತಾವೇ ಮೇಲುಗೈ ಸಾಧಿಸಲು ಅವಕಾಶವಾಗುತ್ತಿತ್ತು. ಸಂಕುಚಿತ ವಿಚ್ಛಿದ್ರಕಾರಿ (ಚಾವನಿಸ್ಟ್) ಭಾಷಾಂಧ ಶಕ್ತಿಗಳು ತಲೆ ಎತ್ತುತ್ತಿದ್ದವು. ಹಲವಾರು ಭಾಷಾ ರಾಷ್ಟ್ರೀಯತೆಗಳು ಅಸ್ತಿತ್ವದಲ್ಲಿರುವ ಭಾರತದಲ್ಲಿ ಭಾಷೆಗೆ ಸಂಬಂಧಿಸಿದ ಜನರ ಆಶೋತ್ತರಗಳಿಗೆ ಸೂಕ್ತವಾಗಿ ಸ್ಪಂದಿಸುವುದಿಲ್ಲ ವೆಂದಾಗಿದ್ದಿದ್ದಲ್ಲಿ ಜನರಲ್ಲಿ ಪರಕೀಯ ಭಾವನೆಗಳ ಬೆಳವಣಿಗೆಗೆ, ಆ ಮೂಲಕ ತೀವ್ರ ವಿಭಜನಕಾರಿ ಪ್ರವೃತ್ತಿಗಳಿಗೆ ಅವಕಾಶವಾಗುತ್ತಿತ್ತು. ಈಗ ಈ ಸಮಸ್ಯೆ ಇಲ್ಲವೆಂದಲ್ಲ. ಈಗಲೂ ಸಮಸ್ಯೆಗಳು ಇವೆ. ಆದರೆ ಭಾಷಾವಾರು ಪ್ರಾಂತ ರಚನೆಯ ಕಾರಣಗಳಿಂದಾಗಿ ಇಂತಹ ಸಮಸ್ಯೆಗಳನ್ನು ಎದುರಿಸುವುದು ಸುಲಭವಾಗಿದೆ.

ಪ್ರಶ್ನೆ: ಸಣ್ಣ ರಾಜ್ಯ ರಚನೆ ಮಾಡಿದಲ್ಲಿ ಆಡಳಿತಕ್ಕೆ ಅನುಕೂಲ ಎಂಬ ವಾದವಿದೆ. ಇದಲ್ಲದೆ ಇತ್ತೀಚಿಗೆ ಪ್ರತ್ಯೇಕ ರಾಜ್ಯದ ಬೇಡಿಕೆಗಳು ಎದ್ದು ಬರುತ್ತಿವೆ. ತೆಲಂಗಾಣ, ಹೈದರಾಬಾದ್-ಕರ್ನಾಟಕ, ಕೊಡಗು, ಇತ್ಯಾದಿ?

ಕಾರಟ್ : ಭಾಷಾವಾರು ಪ್ರಾಂತ ರಚನೆಯಾಗಿರುವಾಗ ಸಹಜವಾಗಿ ಮತ್ತು ಅನಿವಾರ್ಯವಾಗಿ (Obviously) ಆ ರಾಜ್ಯಗಳಲ್ಲಿ ಭಾಷಾ ಅಲ್ಪಸಂಖ್ಯಾತರು ಇದ್ದೇ ಇರುತ್ತಾರೆ. ನಮ್ಮ ದೃಷ್ಟಿ ಕೋನದಲ್ಲಿ ಪ್ರಜಾಪ್ರಭುತ್ವ ತತ್ವದ ಆಧಾರದಲ್ಲಿ ಭಾಷಾ ಅಲ್ಪ ಸಂಖ್ಯಾತರ ಹಕ್ಕುಗಳನ್ನು ರಕ್ಷಿಸಬೇಕು. ಉದಾಹರಣೆಗೆ ಭಾಷಾ ಅಲ್ಪ ಸಂಖ್ಯಾತರಿಗೆ ಬಹು ಸಂಖ್ಯಾತರಿಗಿದ್ದಂತೆ ತಮ್ಮ ಭಾಷೆಯಲ್ಲಿ ಶಿಕ್ಷಣ ಪಡೆದುಕೊಳ್ಳುವ ಅವಕಾಶವನ್ನು ಖಾತ್ರಿ ಪಡಿಸಬೇಕು.

ಎಲ್ಲಾ ಭಾಷಾ ರಾಷ್ಟ್ರೀಯತೆಗಳೂ ಒಂದೇ ಬಂಡವಾಳಶಾಹಿ ವ್ಯವಸ್ಥೆಯೊಳಗೇ ಇವೆ. ಬಂಡವಾಳಶಾಹಿ ಬೆಳವಣಿಗೆಯ ನಿಯಮವೇ ಅಸಮಾನ ಬೆಳವಣಿಗೆ. ಕೆಲವು ರಾಜ್ಯಗಳು ಬೆಳೆದಿವೆ. ಕೆಲವು ರಾಜ್ಯಗಳು ಹಿಂದುಳಿದಿವೆ. ರಾಜ್ಯ ರಾಜ್ಯಗಳ ನಡುವೆ ಅಸಮಾನತೆ ಇದೆ. ಇದು ಮಾತ್ರವೇ ಅಲ್ಲ, ರಾಜ್ಯಗಳ ಒಳಗೆ ಸಹ ಕೆಲವು ಭಾಗ ಮುಂದುವರಿದಿದ್ದರೆ, ಕೆಲವು ಭಾಗಗಳು ಹಿಂದುಳಿದಿವೆ. ಇದಕ್ಕೆ ಐತಿಹಾಸಿಕವಾದ ಹಲವು ಕಾರಣಗಳಿವೆ. ಕೆಲವೆಡೆ ವಸಾಹತುಶಾಹಿ ಆಡಳಿತದಲ್ಲಿ ಆಗಿದ್ದ ಮೂಲಭೂತ ಸೌಕರ್ಯಗಳ ಬೆಳವಣಿಗೆ ಮತ್ತು ರಾಜಕೀಯ ಕಾರಣಗಳು. ಕಾರಣ ಏನಾದರೂ ಇರಲಿ. ಈ ರೀತಿಯ ಪ್ರಾದೇಶಿಕ ಅಸಮಾನತೆಗಳು 'ತಾರತಮ್ಯವಾಗಿದೆ' ಎಂಬ ಭಾವನೆಗೆ ಮತ್ತು ಆ ಮೂಲಕ ತಮ್ಮದೇ ಆದ ಪ್ರತ್ಯೇಕ ರಾಜ್ಯವನ್ನು ರಚಿಸಿಕೊಳ್ಳಬೇಕೆಂಬ ಪ್ರತ್ಯೇಕತೆಯ ಭಾವನೆಗೆ ಕಾರಣವಾಗುತ್ತದೆ. ಆಂಧ್ರದ ತೆಲಂಗಾಣ ಇದಕ್ಕೆ ಒಂದು ಉತ್ತಮ ಉದಾಹರಣೆ. ಆಂಧ್ರ ಪ್ರದೇಶದ ಹೆಚ್ಚಿನ ಭಾಗ ನಿಜಾಮರ ಆಡಳಿತದಲ್ಲಿತ್ತು. ಬ್ರಿಟೀಷ್‌ರ ಆಳ್ವಿಕೆಯಲ್ಲಿ ಕೃಷಿ, ನೀರಾವರಿ, ಶಿಕ್ಷಣದಲ್ಲಿ ಆಂಧ್ರದ ಕರಾವಳಿ ಭಾಗಗಳು ಬೆಳವಣಿಗೆ ಹೊಂದಿದವು. ಹೀಗೆ ಹಿಂದುಳಿದ ಭಾಗಗಳಲ್ಲಿ ಬೆಳೆದು ಬರುವ ಮಧ್ಯಮ ವರ್ಗವು ತಮ್ಮ ಪ್ರಾಂತದ ಜನತೆ -ತಾವು ಶಿಕ್ಷಣ-ಉದ್ಯೋಗ ಮುಂತಾದ ಪ್ರಶ್ನೆಗಳಲ್ಲಿನ ಸ್ಪರ್ಧೆಗಳಲ್ಲಿ ಹಿಂದೆ ಬಿದ್ದಿರುವುದನ್ನು ಕಂಡು ಮೊದಲು ಪ್ರತ್ಯೇಕತೆ ಬೇಡಿಕೆಯನ್ನು ಎತ್ತುತ್ತಾರೆ. ಹಿಂದುಳಿದಿರುವಿಕೆಯ ಆಧಾರದಲ್ಲಿ ತೆಲಂಗಾಣ, ಬುಡಕಟ್ಟು ಜನರ ಹೆಸರಿನಲ್ಲಿ ಜಾರ್ಖಂಡ್ ರಾಜ್ಯಗಳ ಬೇಡಿಕೆಗಳನ್ನು ನಾವು ನೋಡಿದ್ದೇವೆ. ವಾಸ್ತವವಾಗಿ ಶೇ.30 ರಷ್ಟಿರುವ ಬುಡಕಟ್ಟು ಜನರ ಆಧಾರದಲ್ಲಿ ಶೇ. 70 ರಷ್ಟು ಬುಡಕಟ್ಟೇತರ ಜನರು ಇರುವಂತಹ ಜಾರ್ಖಂಡ್ ರಾಜ್ಯ ರಚನೆಯಾಗಿದೆ.

ವಾಸ್ತವವಾಗಿ ಇದು ಈ ರಾಜ್ಯಗಳಲ್ಲಿ ಬೆಳೆದು ಬಂದಿರುವ ಬೂರ್ಜ್ವಾ (ಬಂಡವಾಳಿಗರು) ಮತ್ತು ಪೆಟ್ಟಿ ಬೂರ್ಜ್ವಾ(ಸಣ್ಣ ಬಂಡವಾಳಿಗರು) ವರ್ಗಗಳ ಹಿತಾಸಕ್ತಿಗಳ ನಡುವಿನ ತಿಕ್ಕಾಟ ಮತ್ತು ಪರಸ್ಪರ ಸ್ಪರ್ಧೆಯ ಪರಿಣಾಮ. ಒಂದು ಅಂಶ ನಿಜ. ಕೆಲವು ಪ್ರದೇಶಗಳು ಹಿಂದುಳಿದಿವೆ. ಕೆಲವು ಮುಂದುವರಿದಿವೆ. ಉದಾಹರಣೆಗೆ ಮಹಾರಾಷ್ಟ್ರದ ವಿದರ್ಭ, ಮಹಾರಾಷ್ಟ್ರದ ಕರಾವಳಿ ಪ್ರದೇಶಗಳು ಹಿಂದುಳಿದಿವೆ. ಇಂತಹ ಕಡೆ ಪ್ರತ್ಯೇಕತೆಯ ಭಾವನೆ ಬಂದೇ ಬರುತ್ತದೆ. ಬರುವುದಿಲ್ಲ ಎಂದು ಭಾವಿಸಬಾರದು. ಪ್ರಶ್ನೆ ಎಂದರೆ ಅದನ್ನು ಹೇಗೆ ಎದುರಿಸುವುದು, ಬಗೆಹರಿಸುವುದು ಎಂಬುದು.

ಅಧಿಕಾರ ವಿಕೇಂದ್ರೀಕರಣ ಈ ಸಮಸ್ಯೆಗೆ ಒಂದು ಉತ್ತಮ ಪರಿಹಾರವನ್ನೊದಗಿಸಬಲ್ಲುದು. ನಾವು ಪ್ರತಿಪಾದಿಸುವುದೇನೆಂದರೆ ರಾಜ್ಯಗಳಿಗೆ ಹೆಚ್ಚು ಅಧಿಕಾರ ನೀಡುವ ಅಧಿಕಾರ ವಿಕೇಂದ್ರೀಕ[ರಣ] ಆಗಬೇಕು ಮತ್ತು ಆಯಾ ರಾಜ್ಯಗಳ ನಿರ್ದಿಷ್ಟ ಪರಿಸ್ಥಿತಿಗಳನ್ನಾಧರಿಸಿ ಆ ರಾಜ್ಯಗಳೊಳಗೆ ಅಧಿಕಾರ ವಿಕೇಂದ್ರಿಕರಣ ಸಾಧ್ಯವಾಗಬೇಕು.

ಈ ರಾಜ್ಯಗಳಲ್ಲಿ ಭಾಷಾ ಅಲ್ಪ ಸಂಖ್ಯಾತರಿಗೆ ತಮ್ಮ ಭಾಷೆ ಮತ್ತು ಸಾಂಸ್ಕೃತಿಕ ವಿಕಸನಕ್ಕೆ ಪೂರಕವಾದ ಸ್ವಾಯತ್ತತೆಯನ್ನು ನೀಡಬೇಕು. ಗಣನೀಯ ಸಂಖ್ಯೆಯ ಬುಡಕಟ್ಟು ಜನರಿರುವ ಪ್ರದೇಶಗಳಲ್ಲಿ ಪ್ರಾದೇಶಿಕ ಸ್ವಾಯುತ್ತ ಮಂಡಳಿಗಳನ್ನು ರಚಿಸಬೇಕೆಂಬುದನ್ನು ನಮ್ಮ ಪಕ್ಷದ ಕಾರ್ಯಕ್ರಮದಲ್ಲಿಯೂ ಹೇಳಿದ್ದೇವೆ. ಜನರು ತಮ್ಮ ಭಾಷೆ, ಸಂಸ್ಕೃತಿ, ಜನಾಂಗೀಯ ಹೆಗ್ಗುರುತು ಯಾವುದೇ ಇರಲಿ ಈ ಮೂಲಕ ಅವನ್ನು ರಕ್ಷಿಸಿಕೊಳ್ಳಲು ಸಾಧ್ಯವಾಗುವಂತಿರಬೇಕು. ಇಲ್ಲಿ ನಾವು ಸೂಚಿಸುತ್ತಿರುವ ಸ್ವಾಯತ್ತತೆಯು ಈಗ ಸಂವಿಧಾನದ 6ನೇ ಷೆಡ್ಯೂಲ್ ನೀಡಿರುವುದಕ್ಕಿಂತ ಹೆಚ್ಚಿನ ಅಧಿಕಾರವನ್ನು ನೀಡುವಂತಹದ್ದಾಗಿದೆ. ಈ ಸ್ವಾಯುತ್ತ ಮಂಡಳಿಯು ಕೆಲವು ರಾಜಕಾರಣಿಗಳ ಹುದ್ದೆಗಳನ್ನು ಒದಗಿಸುವುದಕ್ಕೆ ಸೀಮಿತವಾಗಬಾರದು. ಪ್ರಜಾಸತ್ತಾತ್ಮಕ ವಿಕೇಂದ್ರೀಕರಣದ ಸಂರಚನೆಯನ್ನು ಅದಕ್ಕೆ ಒದಗಿಸಬೇಕು. ಇದಕ್ಕೆ ಶಾಸನಾತ್ಮಕ ಅಧಿಕಾರವನ್ನು ನೀಡಬೇಕು. ರಾಜ್ಯ ಸರ್ಕಾರ ಈ ಅಧಿಕಾರವನ್ನು ಕೊಡಲು ಸಾಧ್ಯವಿಲ್ಲ. ಪಂಚಾಯಿತಿಗಳಿಗೆ ಅಧಿಕಾರ ವಿಕೇಂದ್ರೀಕರಣ ಹೇಗೆ ಅಗತ್ಯವೋ ಹಾಗೇ ಈ ಪ್ರಾದೇಶಿಕ ಸ್ವಾಯುತ್ತ ಮಂಡಳಿಗಳಿಗೆ ಸಹ ಅಧಿಕಾರ ವಿಕೇಂದ್ರೀಕರಣ ಅಗತ್ಯ.

ತ್ರಿಪುರ ರಾಜ್ಯದಲ್ಲಿ ನಮಗೊಂದು ಅನುಭವವಿದೆ. ಅಲ್ಲಿ ಬುಡಕ್ಕಟ್ಟು ಸ್ವಾಯುತ್ತ ಜಿಲ್ಲಾ ಮಂಡಳಿಗಳು ರಚಿತವಾಗಿವೆ. ನಾವು ಗಂಭೀರವಾಗಿ ಪ್ರಯತ್ನಿಸುತ್ತೇವೆ. ಆದರೆ ಅಲ್ಲಿ ಬಾಂಗ್ಲಾದೇಶದ ಗಡಿಭಾಗದ ಭಯೋತ್ಪಾದಕ ಸಮಸ್ಯೆಯಿಂದಾಗಿ ನಾವಂದು ಕೊಂಡದ್ದೆಲ್ಲವನ್ನು ಜಾರಿಗೆ ತರುವುದು ಸಾಧ್ಯವಾಗಿಲ್ಲ. ಆದರೆ ಈ ಸ್ವಾಯತ್ತ ಮಂಡಳಿಯ ಸಂರಚನೆಯಲ್ಲಿ ಅಗತ್ಯ ಅಧಿಕಾರವನ್ನು

ಒದಗಿಸಲಾಗಿದೆ.

ಈಗ ಸಂವಿಧಾನದಲ್ಲಿ 371ನೇ ವಿಧಿ ಮುಂತಾದ ಅವಕಾಶಗಳಿವೆ. ಅವುಗಳನ್ನು ಇನ್ನೂ ಬಲಪಡಿಸಬೇಕು. ಹಿಂದುಳಿದಿರುವಿಕೆ ಮುಂತಾದ ಕಾರಣಗಳಿಂದಾಗಿ ಎದ್ದು ಬರುವ ಪ್ರಶ್ನೆಗಳಿಗೆ ಸೂಕ್ತವಾಗಿ ಸ್ಪಂದಿಸಬೇಕು. ಪ್ರತ್ಯೇಕತೆಯ ಕೂಗು ಹಿಂದುಳಿದಿರುವ ಕಾರಣಕ್ಕಾಗಿ ಅಲ್ಲದೇ ಸಾಂಸ್ಕೃತಿಕ ಭಿನ್ನತೆಯ ಕಾರಣಕ್ಕಾಗಿ ಸಹ ಕೇಳಿ ಬರಬಹುದು.

ಪ್ರಶ್ನೆ: ಉತ್ತರ ಕರ್ನಾಟಕವನ್ನು ಸಂವಿಧಾನದ 371 ನೇ ವಿಧಿಗೆ ಸೇರಿಸಬೇಕೆಂಬ ಬೇಡಿಕೆ ಇದೆ...

ಕಾರಟ್ : ಹೌದು... ಹೌದು...

ಪ್ರಶ್ನೆ : ಸಣ್ಣ ರಾಜ್ಯಗಳ ರಚನೆಯ ಪರಿಣಾಮಗಳೇನು?

ಕಾರಟ್ : ಈಗಾಗಲೇ ಹೇಳಿದಂತೆ ಕರ್ನಾಟಕ, ಕೇರಳ, ಆಂಧ್ರಪ್ರದೇಶ, ತಮಿಳುನಾಡು, ಮಹಾರಾಷ್ಟ್ರ ಈ ಎಲ್ಲ ರಾಜ್ಯಗಳಲ್ಲಿ ಭಾಷಾ ರಾಷ್ಟ್ರೀಯ ಪ್ರಜ್ಞೆಯು ಸ್ವಾತಂತ್ರ್ಯ ಚಳುವಳಿಯ ಭಾಗವಾಗಿಯೇ ರೂಪುಗೊಂಡಿತು. ಈ ರಾಜ್ಯಗಳನ್ನು ಒಡೆದು ಸಣ್ಣ ರಾಜ್ಯಗಳನ್ನು ರಚಿಸುವುದು, ಭಾರತದ ಗಣ ತಂತ್ರ ಸ್ವರೂಪಕ್ಕೂ, ಪ್ರಜಾ ತಂತ್ರ ಸ್ವರೂಪಕ್ಕೂ ಹಾನಿಕಾರಕವಾದದ್ದು. ಭಾಷಾವಾರು ಪ್ರಾಂತ ರಚನೆಯ ಆಶಯಗಳು ಪೂರ್ಣವಾಗಿ ಈಡೇರಲಿಲ್ಲ. ಹೀಗಾಗಿ ಪ್ರತ್ಯೇಕತೆಯ ಭಾವನೆಯು ಬೆಳೆದಿದೆ. ಇಷ್ಟಾದರೂ ಭಾಷಾವಾರು ಪ್ರಾಂತಗಳನ್ನು ಹೊಂದಿರುವುದರಲ್ಲಿ ಬಹಳಷ್ಟು ಅನುಕೂಲಗಳಿವೆ. ಭಾಷಾವಾರು ಪ್ರಾಂತ್ಯಗಳನ್ನು ಒಡೆಯುವುದು ಒಟ್ಟಾರೆಯಾಗಿ ಭಾರತ ದೇಶವನ್ನು ದುರ್ಬಲಗೊಳಿಸುತ್ತದೆ.

ಪ್ರಸ್ತುತ ಭಾರತದಲ್ಲಿ ರಾಜ್ಯಗಳಿಗೆ ಹೆಚ್ಚು ಅಧಿಕಾರವಿಲ್ಲ. ಈಗಲೂ ಅಧಿಕಾರ ಕೇಂದ್ರೀಕರಣ ಇದೆ. ಅಂತಹ ಪರಿಸ್ಥಿತಿಯಲ್ಲಿ ಸಣ್ಣ ರಾಜ್ಯಗಳ ಪರಿಸ್ಥಿತಿ ಏನಾಗುತ್ತದೆ. ಈಗ ಉತ್ತರಾಂಚಲ ರಾಜ್ಯದ ಉದಾಹರಣೆಯನ್ನೇ ನೋಡೋಣ-ಕೇಂದ್ರ ಸರ್ಕಾರದ ಸಹಾಯವಿಲ್ಲದೇ ಈ ರಾಜ್ಯವು ಉಳಿಯಲಾರದು. ತನ್ನ ನೌಕರರಿಗೆ ಸಂಬಳ ನೀಡಲೂ ಅದು ಕೇಂದ್ರವನ್ನು ಅವಲಂಬಿಸಿದೆ. ಇಂತಹ ರಾಜ್ಯಗಳು ಕೇಂದ್ರದ ನೆರವಿನಲ್ಲೇ ಬದುಕಬೇಕಾಗುತ್ತದೆ. ಮೀಜೋರಾಂ, ಮಣಿಪುರ, ಅರುಣಾಂಚಲ ಪ್ರದೇಶ ಈ ಯಾವುದೇ ಇರಲಿ ಈ ರಾಜ್ಯಗಳು ರಚನೆಯಾಗಬೇಕೆಂದು ನಾವು ಸಹ ನಿಲುವು ತೆಗೆದುಕೊಂಡೆವು. ಇವು ಸಣ್ಣ ರಾಜ್ಯಗಳಾದರೂ ಇವು ರಚನೆಯಾಗಬಾರದಿತ್ತು ಎಂದೆನಲ್ಲ. ವಾಸ್ತವವೇನೆಂದರೆ, ಈ ಸಣ್ಣ ರಾಜ್ಯಗಳು ಪಂಜಾಬ್, ಕರ್ನಾಟಕ ರಾಜ್ಯಗಳಂತೆ ವರ್ತಿಸಲಾರವು.

ಬಿಜೆಪಿಯು ದೇಶದಲ್ಲಿ ಒಟ್ಟಾರೆ 60 ರಾಜ್ಯಗಳನ್ನು ರಚಿಸಬೇಕೆಂದು ವಾದಿಸುತ್ತದೆ. ಇದು ಆಡಳಿತಾತ್ಮಕವಾಗಿ ಬಾರಿ ಅನುಕೂಲ ಎಂದು ಬಿಜೆಪಿ ಹೇಳುತ್ತದೆ. ಭಾಷಾವಾರು ರಾಜ್ಯಗಳನ್ನು ಒಡೆದು ಸಣ್ಣಸಣ್ಣ ರಾಜ್ಯಗಳನ್ನು ಮಾಡಿದರೆ ಏನಾಗುತ್ತದೆ. ರಾಜ್ಯಗಳು ದುರ್ಬಲವಾಗುತ್ತವೆ. ಕೇಂದ್ರವು ಮತ್ತಷ್ಟು ಬಲಶಾಲಿಯಾಗುತ್ತದೆ.

ಸಣ್ಣ ರಾಜ್ಯಗಳು ಚೆನ್ನಾಗಿ ನಡೆಯುವುದೇ ಇಲ್ಲ ಎಂದೇನೂ ಅಲ್ಲ. ಕೆಲವು ರಾಜ್ಯಗಳು ಚೆನ್ನಾಗಿ ನಡೆಯುತ್ತಿವೆ. ಆದರೆ ಸಣ್ಣ ರಾಜ್ಯಗಳಾಗಿರುವುದರಿಂದಲೇ ಇವು ಚೆನ್ನಾಗಿ ನಡೆಯುತ್ತವೆ ಎಂಬುದಕ್ಕೆ ಆಧಾರಗಳೇನೂ ಇಲ್ಲ. ಕೆಲವು ಸಣ್ಣ ರಾಜ್ಯಗಳು ಚೆನ್ನಾಗಿ ಅಭಿವೃದ್ಧಿ ಹೊಂದುತ್ತಿರಬಹುದು. ಕೆಲವು ದೊಡ್ಡ ರಾಜ್ಯಗಳು ಅಭಿವೃದ್ಧಿ ಹೊಂದದೇ ಇರುವುದೂ ಇರಬಹುದು.

ಪ್ರಶ್ನೆ: ಯುಪಿಎ ಸರ್ಕಾರದ ಸಮಾನ ಕನಿಷ್ಠ ಕಾರ್ಯಕ್ರಮವು ತೆಲಂಗಾಣ ರಚನೆಯ ಬಗೆಗೆ ಭರವಸೆ ನೀಡಿದೆಯಲ್ಲ.....

ಕಾರಟ್: ಬಿಜೆಪಿ ಪಕ್ಷವು ಮೊದಲಿನಿಂದ 'ಅಖಂಡ ಭಾರತ'ದ ಸಿದ್ಧಾಂತವನ್ನು, ಸಣ್ಣ ರಾಜ್ಯಗಳ ರಚನೆಯನ್ನು ಪ್ರತಿಪಾದಿಸುತ್ತಾ ಬಂದಿದೆ ಮತ್ತು ಅದು ಭಾಷಾವಾರು ಪ್ರಾಂತ ರಚನೆಯನ್ನು ವಿರೋಧಿಸುತ್ತಲೂ ಬಂದಿದೆ. ಅಖಂಡ ಭಾರತ ತುಂಬಾ ಕೇಂದ್ರೀಕೃತವಾದ ವ್ಯವಸ್ಥೆ. ವಿದರ್ಭ, ತೆಲಂಗಾಣದ ವಿಚಾರದಲ್ಲಿ ನಾವು ಕಾಂಗ್ರೆಸ್‌ನ್ನು ನೋಡುತ್ತಿದ್ದೇವೆ. ಇಂತಹ ವಿಚಾರದಲ್ಲಿ ಜನ ಎತ್ತ ಎಳೆದರೂ ಅತ್ತ ವಾಲುವುದು ಕಾಂಗ್ರೆಸ್ ಪರಂಪರೆಯಾಗಿದೆ. ಆದರೆ ತೆಲಂಗಾಣದ ಪ್ರಶ್ನೆಯಲ್ಲಿ ಆಂಧ್ರದ ಕಾಂಗ್ರೆಸ್ ಸಮಿತಿ ಇನ್ನೂ ನಿಲುವು ತೆಗೆದುಕೊಂಡಿಲ್ಲ. ಯುಪಿಎ ಸರ್ಕಾರದ ಸಮಾನ ಕನಿಷ್ಠ ಕಾರ್ಯಕ್ರಮದಲ್ಲಿ ತೆಲಂಗಾಣ ರಾಜ್ಯ ರಚನೆಯ ಕುರಿತು ಚರ್ಚಿಸಿ ಒಂದು ಸಮಾನ ನಿಲುವಿಗೆ ಬರಲಾಗುವುದು ಎಂಬ ಭರವಸೆ ನೀಡಲಾಗಿದೆ. ಈ ಉದ್ದೇಶಕ್ಕೆ ಒಂದು ಉಪಸಮಿತಿಯನ್ನು ರಚಿಸಲಾಗಿದೆ. ಕಮ್ಯುನಿಸ್ಟ್ ಪಕ್ಷಗಳು ತೆಲಂಗಾಣ ರಚನೆಯ ವಿಚಾರವನ್ನು ಒಪ್ಪಿಲ್ಲ. ಅವು ಈಗಾಗಲೇ ಅದನ್ನು ಸ್ಪಷ್ಟಪಡಿಸಿವೆ. (ಈಗ ಸಿಪಿಐ ನಿಲುವು ಬದಲಿಸಿಕೊಂಡಿದೆ.)

ಪ್ರಶ್ನೆ: ನಕ್ಸಲ್‌ವಾದಿಗಳು 'ಸಂಯುಕ್ತ ಭಾರತದಲ್ಲಿ ಸ್ವತಂತ್ರ ಕರ್ನಾಟಕ? ಎಂದೂ, ಭಾರತದ 'ವರ್ಗ ಆಡಳಿತ' ದಲ್ಲಿ ಕನ್ನಡ ರಾಷ್ಟ್ರೀಯತೆಯ ದಮನ ನಡೆಯುತ್ತಿದೆ ಎಂದು ವಾದಿಸುತ್ತಿದ್ದಾರೆ. ಈ ಬಗ್ಗೆ ಏನು ಹೇಳುವಿರಿ?

ಕಾರಟ್ : ಕರ್ನಾಟಕದ ಆಳುವ ವರ್ಗದ ದೊಡ್ಡ ವಿಭಾಗವು ಒಟ್ಟು ದೇಶದ ಆಳುವ ವರ್ಗದ ಭಾಗವಾಗಿರುವಾಗ ಅಖಿಲ ಭಾರತ ಆಳುವ ವರ್ಗದ ಶೋಷಣೆಯ ವಿರುದ್ಧ ಕರ್ನಾಟಕದ ಎಲ್ಲ ವರ್ಗಗಳನ್ನೊಳಗೊಂಡ ರಂಗವನ್ನು ರಚಿಸುವುದು ಸಾಧ್ಯವಿಲ್ಲ. ಆಳುವ ವರ್ಗದ ಸಮಗ್ರತೆಯನ್ನು, ಅದರಲ್ಲಿ ದೊಡ್ಡ ಬಂಡವಾಳಿಗ (ಬಿಗ್ ಬೂರ್ಜ್ವಾ) ವರ್ಗವನ್ನು ಪ್ರತ್ಯೇಕಿಸುವುದು ಹೇಗೆ? ನಕ್ಸಲೀಯರು ಅವಾಸ್ತವಿಕವಾದ ಘೋಷಣೆಗಳನ್ನು ಕೊಡುತ್ತಾರೆ. ಈ ಘೋಷಣೆ ಈಗ ಅಪ್ರಸ್ತುತ. ಸ್ವಾತಂತ್ರ್ಯಕ್ಕೆ ಮುಂಚೆ ಇದು ಪ್ರಸ್ತುತವಾಗಿತ್ತು. ಆಗ ಕಾಂಗ್ರೆಸ್ ಪಕ್ಷವು ಸಹ ಭಾಷಾ ರಾಷ್ಟ್ರೀಯತೆಗಳ ಸ್ವಯಂ ನಿರ್ಣಯಾಧಿಕಾರದ ಹಕ್ಕನ್ನು ಒಪ್ಪಿತ್ತು. ಅದು ಬ್ರಿಟೀಷ್ ಸಾಮ್ರಾಜ್ಯಶಾಹಿಯ ವಿರುದ್ಧದ ಹೋರಾಟದ ಸಂದರ್ಭ. ಇಡೀ ಬ್ರಿಟೀಷ್ ಸಾಮ್ರಾಜ್ಯಶಾಹಿಯಿಂದ ಒಟ್ಟಾರೆ ವಿಮೋಚನೆಗೆ ಕಾಯದೇ, ಅದಕ್ಕೆ ಮುಂಚೆಯೇ ಯಾವುದೇ, ಭಾಷಾ ರಾಷ್ಟ್ರೀಯತೆಯು ವಿಮೋಚನೆ ಪಡೆಯುವುದು ಸಾಧ್ಯವಿದ್ದಲ್ಲಿ ಅದನ್ನು ಬೆಂಬಲಿಸಬಹುದಿತ್ತು.

1947ರ ನಂತರ ಭಾರತದ ವಿವಿಧ ಭಾಷಾ, ರಾಷ್ಟ್ರೀಯತೆಗಳ, ಸಾಂಸ್ಕೃತಿಕ ಗುಂಪುಗಳ ಹೋರಾಟ ತಮ್ಮ ಸಮಾನ ಶತ್ರುವಾದ ಭಾರತದ ಆಳುವ ವರ್ಗಗಳ ವಿರುದ್ಧ ಇರಬೇಕಾಗುತ್ತದೆ. ಈ ಅಂಶವನ್ನು ಮರೆತರೆ ನಾವು ಅತ್ಯಂತ ವಿಚ್ಛಿದ್ರಕಾರಿ ಶಕ್ತಿಗಳ ಜೊತೆ ಕೈಜೋಡಿಸುವಂತಾಗುತ್ತದೆ. ಹೀಗಾಗಿಯೇ ನಕ್ಸಲೀಯರ ಒಂದು ಗುಂಪು ಪಂಜಾಬ್‌ನಲ್ಲಿ ಖಾಲಿಸ್ತಾನ್ ಪ್ರತ್ಯೇಕತಾ ಚಳುವಳಿಯನ್ನು ಬಹಿರಂಗವಾಗಿ ಬೆಂಬಲಿಸಿತು.

ಪ್ರಶ್ನೆ: ಕೆಲವು ನಕ್ಸಲೀಯ ಗುಂಪುಗಳು ಎಲ್.ಟಿ.ಟಿ.ಇ. ಯನ್ನು ಬೆಂಬಲಿಸುವುದು ಇತ್ಯಾದಿಗಳಿವೆಯಲ್ಲಾ?

ಕಾರಟ್ : ಈ ಎಲ್ಲವೂ ಕೂಡ ರಾಷ್ಟ್ರೀಯತೆಯ ಕುರಿತು ಮಾರ್ಕ್ಸ್‌ವಾದಿ ದೃಷ್ಟಿಕೋನದ ವಿಚಾರದಲ್ಲಿನ ಗೊಂದಲಗಳಿಂದಾಗಿ ಆಗಿರುವಂತಹದ್ದು.

"ರಾಜ್ಯ ವಿಭಜನೆ ಎಂಬುದು ಲೂಟಿ ನೀತಿ"

ಪುಟ 8 ರಿಂದ

ಸಂಪನ್ಮೂಲಗಳನ್ನು ದೋಚಲು ಸಣ್ಣ ಸಣ್ಣ ರಾಜ್ಯಗಳು ಸುಲಭವಾಗಿ ತಮ್ಮ ಪ್ರವೇಶಕ್ಕೆ ಅನುಕೂಲ ಮಾಡಿಕೊಡಲಿವೆ ಎಂದು ಸಾಮ್ರಾಜ್ಯಶಾಹಿಗಳು ಮತ್ತು ವಿದೇಶಿ ಬಹುರಾಷ್ಟ್ರೀಯ ಕಂಪನಿ (ಎಂಎನ್‌ಸಿ)ಗಳು ಭಾವಿಸಿವೆ. ಈ ನಿರ್ಧಾರವನ್ನು ಆ ಕಂಪನಿಗಳು ಬೆಂಬಲಿಸುತ್ತವೆ. ಸಣ್ಣ ರಾಜ್ಯಗಳಲ್ಲಿ ತನ್ನ ಕೋಮುವಾದಿ ಅಜೆಂಡಾವನ್ನು ಹೆಚ್ಚು ಪರಿಣಾಮಕಾರಿಯಾಗಿ ಕೊಂಡೊಯ್ಯಲು ಸಾಧ್ಯ ಎಂಬ ಉದ್ದೇಶದಿಂದ ಬಿಜೆಪಿ ಸಹ ರಾಜ್ಯಗಳ ವಿಭಜನೆಯನ್ನು ಬಯಸುತ್ತದೆ. ಇದು ಸಮಸ್ಯೆಯ ಒಂದು ಮುಖ. ಎರಡನೆಯದಾಗಿ ಜನತೆಯ ಬದುಕು ದಿನೇ ದಿನೇ ಬಿಕ್ಕಟ್ಟಿಗೆ ಸಿಲುಕುವಂತಹ ಪರಿಸ್ಥಿತಿಯಲ್ಲಿ ಅವರು ಎದುರಿಸುತ್ತಿರುವ ಸಮಸ್ಯೆಗಳಿಂದ ಅವರ ಮನಸ್ಸನ್ನು ಬೇರೆಡೆಗೆ ಸೆಳೆಯುವ ಉದ್ದೇಶದಿಂದ ಆಳುವ ವರ್ಗಗಳು ಇಂತಹ ಭಾವನಾತ್ಮಕ ವಿಷಯಗಳನ್ನು ಮುಂಚೂಣಿಗೆ ತರುತ್ತವೆ. ಇಂತಹ ವಿಷಯಗಳನ್ನು ಪರಿಹರಿಸುವ ಬದಲು ಇನ್ನಷ್ಟು ಬೆಂಕಿ ಹೊತ್ತಿಸುತ್ತವೆ. ಕಾಂಗ್ರೆಸ್ ಪಕ್ಷ ಆಂಧ್ರ ಪ್ರದೇಶದಲ್ಲಿ ಸದ್ಯ ಇದನ್ನೇ ಮಾಡುತ್ತಿರುವುದು. ಅಗತ್ಯ ಉತ್ಪನ್ನಗಳ ದರಗಳು ವಿಪರೀತವಾಗಿ ಏರಿಕೆ ಕಾಣುತ್ತಿದ್ದು ಕಾಂಗ್ರೆಸ್ ಪಕ್ಷದ ಆಡಳಿತದ ವೈಫಲ್ಯ ಕಣ್ಣು ಕುಕ್ಕುವಂತೆ ಕಾಣುತ್ತಿದೆ. ಕಲ್ಯಾಣ ಯೋಜನೆಗಳಿಗೆ ನೀಡುವ ಹಣದಲ್ಲಿ ಕಡಿತಗೊಳಿಸಲಾಗಿದೆ. ನೀರಾವರಿ ಯೋಜನೆಗಳ ಕಾಮಗಾರಿಗಳನ್ನು ಸ್ಥಗಿತಗೊಳಿಸಲಾಗಿದೆ. ಜನತೆಯ ಆಕ್ರೋಶವನ್ನು ಬೇರೆಡೆಗೆ ತಿರುಗಿಸಲು ರಾಜ್ಯ ವಿಭಜನೆಯಂತಹ ಪ್ರಚೋದನಾತ್ಮಕ ವಿಷಯಗಳನ್ನು ಬಳಕೆ ಮಾಡಿಕೊಳ್ಳುತ್ತಿದೆ.

ಪ್ರ: ಆದರೆ ಸಣ್ಣ ರಾಜ್ಯಗಳಾಗಿ ವಿಭಜನೆ ಮಾಡುವುದರಿಂದ ಉತ್ತಮ ಅಭಿವೃದ್ಧಿ, ಆಡಳಿತ, ಉದ್ಯೋಗ ಅವಕಾಶಗಳಲ್ಲಿ ಏರಿಕೆ ಮತ್ತಿತರ ಅನುಕೂಲಗಳಿವೆ ಎಂಬ ವಾದಗಳಿವೆಯಲ್ಲ?

ಈ ಹಿಂದಿನ ಚಾರಿತ್ರಿಕ ಉದಾಹರಣೆಗಳನ್ನು ಗಮನಿಸಿದರೆ ಅಥವಾ ಇತ್ತೀಚಿನ ಸಣ್ಣ ರಾಜ್ಯಗಳ ಅನುಭವಗಳನ್ನು ಒಮ್ಮೆ ನೋಡಿದರೆ ಈ ವಾದ ಸರಿಯಲ್ಲ ಎಂಬುದು ಗೊತ್ತಾಗುತ್ತದೆ. ಯಾವುದೇ ರಾಜ್ಯದ ವಿಭಜನೆಯೂ ಅಭಿವೃದ್ಧಿ, ಆಡಳಿತ ಮತ್ತಿತರ ಪರಿಸ್ಥಿತಿಗಳನ್ನು ಉತ್ತಮಗೊಳಿಸಿದೆ ಎಂಬ ಅಂಶವನ್ನು ಸಾಬೀತುಗೊಳಿಸಿಲ್ಲ. ಬಂಡವಾಳಶಾಹಿ ಅಭಿವೃದ್ಧಿ ಪಥದಲ್ಲಿ, ಅದರಲ್ಲೂ ವಿಶೇಷವಾಗಿ ಹೊಸ ಉದಾರೀಕರಣ ನೀತಿಗಳು ಆರಂಭಗೊಂಡ ನಂತರದಲ್ಲಿ ಅಸಮತೋಲನ ಬೆಳವಣಿಗೆ ತೀವ್ರವಾಗುತ್ತಿದೆ. ಸರ್ಕಾರಗಳ ಪಾತ್ರವೇ ಸಂಕುಚಿತಗೊಳ್ಳುತ್ತಿರುವಂತಹ ಪ್ರಕ್ರಿಯೆಯು ನಿರ್ಲಕ್ಷಿತ ಪ್ರದೇಶಗಳ ಅಭಿವೃದ್ಧಿಯ ಸಾಧ್ಯತೆಗಳನ್ನು ಇನ್ನಷ್ಟು ಕಡಿಮೆಗೊಳಿಸಲಿದೆ. ಈ ಅಸಮಾನ ಬೆಳವಣಿಗೆಯನ್ನು ತಮ್ಮ ರಾಜಕೀಯ ಲಾಭಗಳಿಗಾಗಿ ಬಳಕೆ ಮಾಡಿಕೊಳ್ಳುವ ಎಲ್ಲ ರಾಜಕೀಯ ಪಕ್ಷಗಳು ವಾಸ್ತವವಾಗಿ ಹೊಸ ಆರ್ಥಿಕ ನೀತಿಗಳನ್ನು ಬೆಂಬಲಿಸಿದ ಪಕ್ಷಗಳೇ ಆಗಿವೆ. ಈ ನೀತಿಗಳ ವಿರುದ್ಧ ಹೋರಾಟ ಮಾಡುವುದರ ಮೂಲಕ ಮಾತ್ರವೆ ನಿರ್ಲಕ್ಷಿತ ಪ್ರದೇಶಗಳ ಅಭಿವೃದ್ಧಿ ಸಾಧ್ಯ.

ಪ್ರ: ಪ್ರತ್ಯೇಕ ತೆಲಂಗಾಣ ಮಸೂದೆಯನ್ನು ವಿಧಾನಸಭೆಯಲ್ಲಿ ಮಂಡಿಸಿದಾಗ ಸಿಪಿಎಂ ಪಕ್ಷ ಅದರ ವಿರುದ್ಧ ಮತ ಚಲಾಯಿಸುವುದೆ?

ಐಕ್ಯ ರಾಜ್ಯವಾಗಿರಬೇಕೆಂಬ ನಮ್ಮ ನಿಲುವಿನಲ್ಲಿ ಈಗಾಗಲಿ ಮುಂದೆಯಾಗಲಿ ಬದಲಾವಣೆ ಇಲ್ಲ. ವಿಧಾನ ಸಭೆಯಲ್ಲಿ ಮಸೂದೆ ಮಂಡಿಸಿದಾಗ ಏನು ಮಾಡಬೇಕೆಂದು ಈಗಲೇ ಯೋಚಿಸುವ ಅಗತ್ಯವಿಲ್ಲ. ಆಗ ನಿರ್ಧಾರ ತೆಗೆದುಕೊಳ್ಳುತ್ತೇವೆ.

ಪ್ರ: ರಾಜ್ಯದ ಜನತೆಯಲ್ಲಿ ನಿಮ್ಮ ಮನವಿ ಏನು?

ವಿಭಜನಕಾರಿಯಾದ ಭಾವೋನ್ಮಾದ ತೀವ್ರಗೊಂಡರೆ ರಾಜ್ಯ ಒಂದಾಗಿದ್ದರೂ ಅಥವಾ ವಿಭಜನೆಗೊಂಡರೂ ಒಟ್ಟಾರೆ ಜನತೆಗೆ ಅದರಿಂದ ಹಾನಿಯೇ ಸರಿ. ಒಂದು ಪ್ರದೇಶದ ಕಾರ್ಮಿಕರು, ನೌಕರರು, ವಿದ್ಯಾರ್ಥಿಗಳು ಮತ್ತಿತರ ವಿಭಾಗದ ಜನತೆಗೆ ಮತ್ತೊಂದು ಪ್ರದೇಶದ ಜನಗಳು ಶತ್ರುಗಳೇನೂ ಅಲ್ಲ. ಇದು ಆಳುವ ವರ್ಗಗಳ ನೀತಿಗಳಾಗಿದ್ದು ಇದರ ವಿರುದ್ಧ ಜನತೆ ಐಕ್ಯತೆಯಿಂದ ಹೋರಾಟ ನಡೆಸಬೇಕು. ಜನತೆ ಇಂದು ಎದುರಿಸುತ್ತಿರುವ ಸಂಕಷ್ಟಗಳ ನಿವಾರಣೆ ಕುರಿತು ಒತ್ತಡಗಳನ್ನು ಹೇರಲು ಇಂತಹ ಒಗ್ಗಟ್ಟು ಅಗತ್ಯ. ಇಂತಹ ಸಂದರ್ಭದಲ್ಲಿ ಜನತೆ ಪ್ರಚೋದನೆಗಳಿಗೆ ಒಳಗಾಗದೆ ಶಾಂತಿಯನ್ನು ಕಾಪಾಡಬೇಕು.

ಆಹಾರ ಹಣದುಬ್ಬರ ಈಗ ಶೇ. 19.9 ದಶಕದಲ್ಲೇ ಅತ್ಯಂತ ಹೆಚ್ಚು

ಕಳೆದ ವಾರ ಭಾರತದ ಕಾರ್ಖಾನೆ ಉತ್ಪಾದನೆ 10.3ಶೇ. ಬೆಳೆದಿದೆ. ಕಳೆದ ವರ್ಷಕ್ಕೆ ಹೋಲಿಸಿದರೆ ಇದು ಭಾರೀ ಬೆಳವಣಿಗೆ, ಇದು ಸರಕಾರದ ಉತ್ತೇಜಕ ಪ್ಯಾಕೇಜಿನ ಫಲ ಎಂದು ಯೋಜನಾ ಆಯೋಗದ ಉಪಾಧ್ಯಕ್ಷ ಅಹ್ಲುವಲಿಯ ಬೆನ್ನು ತಟ್ಟಿಕೊಂಡಿದ್ದಾರೆ. ಆದರೆ ಅದೇ ದಿನ ಆಹಾರ ಹಣದುಬ್ಬರ ದರ 19ಶೇ. ಕ್ಕಿಂತಲೂ ಹೆಚ್ಚಿನ ಏರಿಕೆ ದಾಖಲಿಸಿತು. ಅಕ್ಟೋಬರ್ ಕೊನೆಯಲ್ಲಿ ಕಾಣ ಬಂದ 13ಶೇ. ಏರಿಕೆ ನವಂಬರ್ ಮಧ್ಯದ ವೇಳೆಗೆ 15ಶೇ. ತಲುಪಿತು. ಈಗ ಇನ್ನಷ್ಟು ವೇಗದಿಂದ ಮೇಲೇರಿದೆ. ಇದಕ್ಕೇನು ಕಾರಣ ಎಂದು ಅವರು ಹೇಳಲಿಲ್ಲ. ಇದಕ್ಕೂ ಯುಪಿಎ-2 ಸರಕಾರವೇ, ಅದರ ಮುಕ್ತ ಮಾರುಕಟ್ಟೆ ನೀತಿಗಳೇ ಕಾರಣ ಎಂಬುದು ಸ್ಪಷ್ಟ. ಆರ್ಥಿಕ ಹಿಂಜರಿತದಿಂದಾಗಿ ಆಹಾರ ಬೆಲೆಗಳು, ಇಂಧನ ಬೆಲೆಗಳು ವಿಶ್ವಾದ್ಯಂತ ಇಳಿಮುಖಗೊಳ್ಳುತ್ತಿರುವಾಗ ಇಂತಹ ಬೆಲೆಯೇರಿಕೆ ಕಾಣುತ್ತಿರುವ ಏಕೈಕ ಪ್ರಮುಖ ಅಭಿವೃದ್ಧಿಶೀಲ ದೇಶ ನಮ್ಮೀ ಭಾರತ ಎಂದು ಸಿಪಿಐ(ಎಂ) ವಿಶ್ಲೇಷಿಸಿದೆ. ಕಾರ್ಪೊರೇಟುಗಳು ಮತ್ತು ದೊಡ್ಡ ವ್ಯಾಪಾರಸ್ಥರ ಕಾಳಸಂತೆ ಮತ್ತು ಲಾಭಕೋರತನ ಇದಕ್ಕೆ ಕಾರಣ ಎಂದಿರುವ ಸಿಪಿಐ(ಎಂ), ಯುಪಿಎ ಸರಕಾರ ತನ್ನ ನೀತಿಗಳಿಂದಾಗಿ ಇಂತವರ ಮೇಲೆ ತನ್ನ ಹತೋಟಿಯನ್ನು ಕಳಕೊಂಡಿರುವುದೇ ಈ ಅಗಾಧ ಬೆಲೆಯೇರಿಕೆಗೆ ಕಾರಣ ಎಂದು ಹೇಳಿದೆ.

× × ×

ನಿಜವಾಗಿ ಯಾರು ಈ ಹೆಡ್ಲಿ?

ಕಳೆದ ನವಂಬರ್ ನಲ್ಲಿ ಮುಂಬೈ ಮೇಲೆ ಎರಗಿದ ಭಯೋತ್ಪಾದಕರೊಂದಿಗೆ ಶಾಮೀಲಾಗಿದ್ದ ಹೆಡ್ಲಿ ಎಂಬಾತನ ಬಗ್ಗೆ ಈಗ ಪ್ರತಿದಿನ ಹೊಸ ರಹಸ್ಯಗಳು ಬಯಲಾಗುತ್ತಿವೆ. ಆತ ವಾಸ್ತವವಾಗಿ ದಶಕಗಳ ಕಾಲ ಅಮೆರಿಕನ್ ಗುಪ್ತಚಾರ, ಅವನು ಪಾಕಿಸ್ತಾನಿ ಭಯೋತ್ಪಾದಕರಿಗಾಗಿಯೂ ಕೆಲಸ ಮಾಡುತ್ತಿರುವ ಡಬಲ್ ಏಜೆಂಟ್ ಎಂಬ ಸಂದೇಹ ಉಂಟಾಗಿದೆ. ಆದರೆ ಆತನ ವಿಚಾರಣೆ ಮಾಡಲು ಅಮೆರಿಕಾ ಅವಕಾಶ ನೀಡುತ್ತಿಲ್ಲ. ಅವರ ತನಿಖಾ ಸಂಸ್ಥೆ ಎಫ್‌ಬಿಐ ಪ್ರಕಾರ ಅಮೆರಿಕನ್ ಕಾನೂನು ಇದಕ್ಕೆ ಅವಕಾಶ ಕೊಡುವುದಿಲ್ಲವಂತೆ. ಇದೇ ಎಫ್‌ಬಿಐಗೆ ಭಾರತ ಸರಕಾರ ಮುಂಬೈ ದಾಳಿ ಆರೋಪಿ ಕಸಬ್‌ನ ವಿಚಾರಣೆ ಮಾಡಲು ಅವಕಾಶ ನೀಡಿತ್ತು ಎಂಬುದನ್ನು ಇಲ್ಲಿ ನೆನಪಿಸಿಕೊಳ್ಳಬಹುದು. ಈತ ಭಾರತಕ್ಕೆ ಹಲವು ಭಾರಿ ಭೇಟಿ ನೀಡಿದ್ದನಂತೆ, ಇತ್ತೀಚೆಗೂ ಬಂದು ಹೋಗಿದ್ದನಂತೆ. ಈ ಬಗ್ಗೆ ಎಫ್‌ಬಿಐ ಮಾಹಿತಿ ನೀಡಿತ್ತೇ? ನಮ್ಮ ಗುಪ್ತಚರ ವಿಭಾಗಗಳಿಗೆ ಇದು ಗೊತ್ತಿತ್ತೆ? ಇವೆಲ್ಲಾ ಪ್ರಶ್ನೆಗಳು ಈಗ ಎದ್ದಿವೆ. ರಾಜ್ಯ ಸಭೆಯಲ್ಲಿ ಸಿಪಿಐ(ಎಂ) ನ ಬೃಂದಾಕಾರಟ್ ಈ ಪ್ರಶ್ನೆ ಎತ್ತಿದರು, ಯುಪಿಎ ಸರಕಾರ ಇದಕ್ಕೆ ಉತ್ತರ ಕೊಡಬೇಕಾಗಿದೆ ಎಂದರು(ಬಾಕ್ಸ್ ನೋಡಿ). ಇತರ ರಾಜಕೀಯ ಪಕ್ಷಗಳು ಇದನ್ನು ಒತ್ತಾಯಿಸಿವೆ. ಅಮೆರಿಕಾಕ್ಕೆ ನಿಜವಾಗಿ ಮುಂಬೈ ದಾಳಿಕೋರರನ್ನು ಶಿಕ್ಷಿಸಬೇಕೆಂದಿದೆಯೇ? ಈತನಿಗೆ ಮತ್ತು ಈತನ ಇನ್ನೊಬ್ಬ ಸಹಚರನಿಗೆ ಭಾರತ ಭೇಟಿಗೆ ವೀಸಾ ನೀಡಿದ ಚಿಕಾಗೊದಲ್ಲಿನ ಭಾರತದ ರಾಯಭಾರಿ ಕಚೇರಿಯಲ್ಲಿ ಇದಕ್ಕೆ ಸಂಬಂಧಪಟ್ಟ ದಾಖಲೆಗಳು ಕಾಣೆಯಾಗಿವೆ ಎಂಬ ಸುದ್ದಿಯೂ ಬಂದಿದೆ!

ಯುಪಿಎ II ದರ್ಬಾರ್‌ನಲ್ಲಿ



× × ×

ಅಮೆರಿಕನ್ನರ ಪ್ರೀತ್ಯರ್ಥ ಸುಪ್ರೀಂಕೋರ್ಟ್ ತೀರ್ಪುಗಳ ಉಲ್ಲಂಘನೆ

ಅಮೆರಿಕಾದೊಂದಿಗೆ ನಾಗರಿಕ ಪರಮಾಣು ವ್ಯವಹಾರ ಕುದುರಿಸಿರುವುದು ತನ್ನ ಒಂದು ಮಹಾಸಾಧನೆ ಎಂದು ಈಗಲೂ ಸಂಭ್ರಮ ಪಡುತ್ತಿರುವ ಯುಪಿಎ ಸರಕಾರಕ್ಕೆ ಇನ್ನೂ ಇಂಧನ ಮರು ಸಂಸ್ಕರಣೆಯ ಹಕ್ಕು ಕುರಿತಂತೆ ಒಪ್ಪಂದ ಕುದುರಿಸಲಾಗಲಿಲ್ಲ ಎಂಬ ವಿಫಲತೆಯ ಬೆನ್ನ ಹಿಂದೆಯೇ ಇಂತಹ ಪರಮಾಣು ಸ್ಥಾವರಗಳಲ್ಲಿ ಅವಘಡಗಳಾದರೆ ಅದರ ಹೊಣೆಗಾರಿಕೆಯ ಮೇಲೆ ಮಿತಿ ಹಾಕುವ ಒಂದು ಮಸೂದೆಯನ್ನು ಸಂಸತ್ತಿನಲ್ಲಿ ಮಂಡಿಸಲು ಕೇಂದ್ರ ಸಂಪುಟ ನಿರ್ಧರಿಸಿದೆ ಎಂಬ ಸುದ್ದಿ ಬಂದಿದೆ. ಇದು ಈ ವ್ಯವಹಾರದ ಅಡಿಯಲ್ಲಿ ಅಮೆರಿಕನ್ ಆಳರಸರ ಒತ್ತಾಯಕ್ಕೆ ಮಣಿದು ಕೈಗೊಂಡಿರುವ ಮತ್ತೊಂದು ಕ್ರಮ ಎಂಬುದು ಸ್ಪಷ್ಟ(ಇದೇ ಸಂಚಿಕೆಯಲ್ಲಿ ಪ್ರಕಟವಾಗಿರುವ ಪ್ರತ್ಯೇಕ ಲೇಖನ ನೋಡಿ). ಪ್ರಖ್ಯಾತ ವಕೀಲ, ಹಿಂದೆ ಅಟಾರ್ನಿ ಜನರಲ್ ಆಗಿದ್ದ ಸೋಲಿ ಸೊರಬ್ಜಿ ಇದು ದೇಶದ ಸರ್ವೋಚ್ಚ ನ್ಯಾಯಾಲಯದ ತೀರ್ಪುಗಳ ನಗ್ನ ಉಲ್ಲಂಘನೆ, ಇದನ್ನು ಸುಪ್ರಿಂ ಕೋರ್ಟ್ ಹೊಡೆದು ಹಾಕುವ ಸಂಭವವೇ ಹೆಚ್ಚು ಎಂದಿದ್ದಾರೆ. ಅಷ್ಟೇ ಅಲ್ಲ, ಇದು ಭಾರತದ ಜನತೆಯ ಅಮೂಲ್ಯ ಬದುಕಿನ ಹಕ್ಕಿಗೆ, ಅವರ ಹಿತಾಸಕ್ತಿಗಳಿಗೆ ವಿರುದ್ಧವಾಗಿದೆ. ವಾಸ್ತವವಾಗಿ ಈ ಹಕ್ಕನ್ನು ರಕ್ಷಿಸುವುದು ಯಾವುದೇ ನಾಗರಿಕ ಪ್ರಜಾಪ್ರಭುತ್ವ ಸರಕಾರದ ಪ್ರಾಥಮಿಕ ಕಾಳಜಿಯಾಗಿರಬೇಕು ಎಂದು ಅವರು ಹೇಳಿದ್ದಾರೆ.

× × ×


ಕಗ್ಗಂಟಾದ ತೆಲಂಗಾಣ ಪ್ರಶ್ನೆ

ತೆಲಂಗಾಣ ರಾಜ್ಯ ರಚನೆಯ ಪ್ರಕ್ರಿಯೆ ಆರಂಭಿಸಲಾಗುವುದು ಎಂಬ ಯುಪಿಎ ಸರಕಾರದ ಗ್ರಹಮಂತ್ರಿಗಳ ಮಧ್ಯ ರಾತ್ರಿಯ ಹೇಳಿಕೆ ಈಗ ಆಂಧ್ರಪ್ರದೇಶದಲ್ಲಿ ಮಾತ್ರವಲ್ಲ ಕಾಂಗ್ರೆಸಿನೊಳಗೂ ಬಿಕ್ಕಟ್ಟು ಸೃಷ್ಟಿಸಿದೆ. ಆಂಧ್ರ ಪ್ರದೇಶದ 292 ವಿಧಾನ ಸಭಾ ಸದಸ್ಯರಲ್ಲಿ 130 ಮಂದಿ(ಕಾಂಗ್ರೆಸಿಗರೂ) ರಾಜೀನಾಮೆ ಕೊಟ್ಟಿದ್ದಾರೆ. ಮಂತ್ರಿ ಮಂಡಲದಲ್ಲೂ ರಾಜಿನಾಮೆಯ ಬೆದರಿಕೆಗಳು ಬಂದವು. ಈಗ ಯುಪಿಎಯ ಒಳಗೂ ಇದು ಪ್ರತಿಧ್ವನಿಸುತ್ತಿದೆ. ಇತರ ರಾಜ್ಯಗಳಲ್ಲೂ ಇಂತಹುದೇ ಬೇಡಿಕೆಗಳು ಎದ್ದಿವೆ. ಯುಪಿಎ ಸರಕಾರ ದಾರಿಗಾಣದೆ ನಿಂತಿರುವಂತಿದೆ.

ಹೆಡ್ಲಿಯನ್ನು ಪ್ರಶ್ನಿಸುವಂತೆ ಮಾಡಲು ಭಾರತ ಸರ್ಕಾರ ಯಾವ ಕ್ರಮ ಕೈಗೊಳ್ಳುತ್ತಿದೆ ?

ರಾಜ್ಯ ಸಭೆಯಲ್ಲಿ ಸಿಪಿಐ(ಎಂ) ಸದಸ್ಯರಾಗಿರುವ ಬೃಂದಾ ಕಾರಟ್‌ರವರು ಕಳೆದ ವಾರ ಶೂನ್ಯಕಾಲದಲ್ಲಿ ಮುಂಬೈ ದಾಳಿಗಳ ಪಿತೂರಿಯ ಆರೋಪಕ್ಕೊಳಗಾಗಿರುವ ಡೇವಿಡ್ ಹೆಡ್ಲಿ ಕುರಿತಂತೆ ಬಂದಿರುವ ವರದಿಗಳ ಪ್ರಸ್ತಾಪ ಮಾಡಿ ಇವು ದೇಶದ ಭದ್ರತೆಯ ದೃಷ್ಟಿಯಿಂದ ನಿರ್ಣಾಯಕವಾಗುವ ಪ್ರಶ್ನೆಗಳು, ಸರಕಾರ ಈ ಬಗ್ಗೆ ಸ್ಪಷ್ಟೀಕರಣ ಕೊಡಬೇಕು ಎಂದರು. ಅವರು ಎತ್ತಿದ ಪ್ರಶ್ನೆಗಳ ವಿವರವನ್ನು ಇಲ್ಲಿ ಕೊಡಲಾಗಿದೆ-

ಅಮೆರಿಕದಿಂದ ಹೊಮ್ಮುತ್ತಿರುವ ಆಘಾತಕಾರಿ ವರದಿಗಳ ಸರಮಾಲೆಯಲ್ಲಿ ಹಲವು ಅಂಶಗಳು ಬಯಲಾಗುತ್ತಿವೆ. ಈತನ ನಿಜವಾದ ಹೆಸರು ದಾಊದ್ ಸಲಿಂ ಗೀಲಾನಿ ಎಂದು ಹೇಳಲಾಗಿದೆ. ಈತನನ್ನು ಅಮೆರಿಕಾದೊಳಗೆ ಮಾದಕ ದ್ರವ್ಯಗಳನ್ನು ಆಮದು ಮಾಡುವಲ್ಲಿ ಪಿತೂರಿ ನಡೆಸಿದ ಎಂಬ ಆರೋಪದ ಮೇಲೆ ನ್ಯೂಯಾರ್ಕಿನಲ್ಲಿ ಫೆಬ್ರುವರಿ 1997ರಲ್ಲಿ ಬಂಧಿಸಲಾಯಿತು. ಆತ 1999ರಿಂದ ಅಮೆರಿಕಾ ಸಂಯುಕ್ತ ಸಂಸ್ಥಾನಗಳ ಮಾದಕ ದ್ರವ್ಯ ಜಾರಿ ಆಡಳಿತ(ಡಿಇಎ)ಗೆ ಗುಪ್ತಚರ ಏಜೆಂಟನಾಗಿ ಕೆಲಸ ಮಾಡುತ್ತಿದ್ದಾನೆ. ಡಿಇಎ ಯೊಂದಿಗೆ ಸಹಕರಿಸಲು ಆರಂಭಿಸಿದ್ದರಿಂದ ಆತನನ್ನು ಅಮೆರಿಕನ್ ಆಡಳಿತ ಬಿಡುಗಡೆ ಮಾಡಿತು ಹಾಗೂ ಅಫಘಾನಿಸ್ತಾನ



ಮತ್ತು ಪಾಕಿಸ್ತಾನದಲ್ಲಿ ಮಾದಕ ದ್ರವ್ಯ ಸಾಗಾಟದ ಗ್ಯಾಂಗುಗಳ ಮೇಲೆ ಕಣ್ಣಿಡಲು ಪಾಕಿಸ್ತಾನಕ್ಕೆ ಹೋಗಿ ಬರಲು ಆತನಿಗೆ ಅವಕಾಶ ನೀಡಲಾಯಿತು. ಒಬ್ಬ ಮಾದಕ ದ್ರವ್ಯಗಳ ಕಳ್ಳ ಸಾಗಾಣಿಕೆದಾರನನ್ನು ಅಮೆರಿಕನ್ ಏಜೆಂಟನಾಗಿ ಪರಿವರ್ತಿಸಲಾಯಿತು.

ದಾಊದ್ ಗೀಲಾನಿ ಅಮೆರಿಕನ್ ಗುಪ್ತಚರ ಸಂಸ್ಥೆಗಳ ಆದೇಶಗಳಂತೆ 1999ರಿಂದ ಪಾಕಿಸ್ತಾನ ಮತ್ತು ಅಮೆರಿಕಾದ ನಡುವೆ ಆಗಾಗ ಹೋಗಿ ಬರುತ್ತಿದ್ದ ಎಂದು ವರದಿಗಳು ವಿವರಿಸಿವೆ. ಆತ ಡೇವಿಡ್ ಹೆಡ್ಲಿ ಆದದ್ದು ಕೂಡಾ ಅವನನ್ನು ರಕ್ಷಿಸುತ್ತಿದ್ದ ಅಮೆರಿಕನ್ ಏಜೆನ್ಸಿಗಳಿಗೆ ಗೊತ್ತಿದ್ದಿರಬೇಕು; ಇದು ಆತನ ಪ್ರವಾಸಗಳನ್ನು ಸುಲಭಗೊಳಿಸಲಿಕ್ಕಾಗಿ ಎಂದು ಸಹಜವಾಗಿಯೇ ಊಹಿಸಿಕೊಳ್ಳಬಹುದು.

ಈ ಹಿಂದೆ ಇಂತಹ ಹಲವು ಅಮೆರಿಕನ್ ಡಬಲ್ ಏಜೆಂಟರು, ಇವರಲ್ಲಿ ಅತ್ಯಂತ ಪ್ರಖ್ಯಾತನಾದ ಒಸಾಮ ಬಿನ್ ಲಾಡೆನ್‌ನಂತೆ ಸಿಐಎ ಪತ್ತೇದಾರರಾಗಿ ಕೆಲಸ ಪ್ರಾರಂಭಿಸಿದವರು ಮಾಡಿದಂತೆ, ಈ ಡೇವಿಡ್ ಹೆಡ್ಲಿ ಕೂಡಾ ಲಷ್ಕರ್‌ಗಾಗಿ ಕೆಲಸ ಮಾಡಲಾರಂಭಿಸಿದ ಎಂದು ವರದಿಗಳು ಹೇಳುತ್ತವೆ. ಈತ 2008ರಲ್ಲಿ ಭಾರತಕ್ಕೆ ಹಲವು ಬಾರಿ ಬಂದು ಹೋಗಿದ್ದ ಎಂದು ತನಿಖೆಗಳಿಂದ ಬಯಲಾಗಿದೆ. ಈ ಪ್ರವಾಸಗಳ ಕಾಲದಲ್ಲೇ, ಈ ಮಾದಕ ದ್ರವ್ಯಗಳ ಕಳ್ಳಸಾಗಾಣಿಕೆದಾರ-ಸಿಐಎ ಪತ್ತೇದಾರ-ಲಷ್ಕರ್ ಭಯೋತ್ಪಾದಕ ನಗರಗಳ, ಮುಂಬೈಯ ಸ್ಥಳಗಳ ನಿರೀಕ್ಷಣೆ ನಡೆಸಿದ. ಆತ ಈ ರೀತಿ ಸಂಗ್ರಹಿಸಿದ ಮಾಹಿತಿಗಳು 26/11 ದಾಳಿಗಳಲ್ಲಿ ಬಹಳ ನಿರ್ಣಾಯಕವಾದವು ಎಂದು ಹೇಳಲಾಗುತ್ತಿದೆ. ಆತ ಇತ್ತೀಚೆಗೆ ಎಪ್ರಿಲ್ 2009ರಲ್ಲೂ ಬಂದಿದ್ದನಂತೆ. ಎಫ್‌ಬಿಐ ಗೆ ಈತನ ಮೂವಾವರ ತಿಳಿದಿದ್ದು, ಮುಂಬೈ ದಾಳಿಗಳ ಮೊದಲೇ ಆತನ ಮೇಲೆ ನಿಗಾ ಇಟ್ಟಿತ್ತು ಎಂಬುದು ಸ್ವಯಂವೇದ್ಯ. ಅದು ತನಗೆ ಸಿಗುತ್ತಿದ್ದ ಮಾಹಿತಿಗಳನ್ನು ಭಾರತದ ಗುಪ್ತಚರ ಸಂಸ್ಥೆಗಳೊಂದಿಗೆ ಹಂಚಿಕೊಂಡಿದೆಯೇ? ಅಮೆರಿಕಾ ತನ್ನ ಏಜೆಂಟರನ್ನು ಎಂತಹ ವಂಚಕ ವಿಧಾನಗಳಿಂದ ಭರ್ತಿ ಮಾಡಿಕೊಳ್ಳುತ್ತದೆ ಎಂಬುದು ನಮಗೆ ಬೇಕಿಲ್ಲ. ಆದರೆ ನಮ್ಮ ನಗರಗಳು, ನಮ್ಮ ಜನಗಳು ಮತ್ತು ನಮ್ಮ ದೇಶದ ಭದ್ರತೆಯು ಮೇಲೆ ಗುರಿಯಿಟ್ಟಿರುವಾಗ ಅವರು ನಮಗೆ ಆತನ ಪ್ರವಾಸಗಳ ಬಗ್ಗೆ ತಿಳಿಸುತ್ತಿತ್ತೇ?

ಎರಡನೆಯದಾಗಿ, ಭಾರತದ ಸುಪರ್ದಿಯಲ್ಲಿರುವ ಅಜ್ಮಲ್ ಕಸಬ್‌ನನ್ನು ಪ್ರಶ್ನಿಸಲು ಎಫ್‌ಬಿಐಗೆ ಅವಕಾಶ ನೀಡಿರುವಾಗ ಡೇವಿಡ್ ಹೆಡ್ಲಿಯನ್ನು ಪ್ರಶ್ನಿಸಲು ಭಾರತೀಯ ತನಿಖಾಗಾರರಿಗೆ ಅವಕಾಶ ನಿರಾಕರಿಸುತ್ತಿರುವುದೇಕೆ? ಒಸಾಮಾ ಬಿನ್ ಲಾಡೆನ್‌ಗಳಂತಹ ಪೆಡಂಭೂತಗಳನ್ನು ಸೃಷ್ಟಿಸುವ ದಾಖಲೆ ಹೊಂದಿರುವ ಅಮೆರಿಕಾದ ಪರೋಕ್ಷ ಕಾರ್ಯಾಚರಣೆಗಳ ಮರ್ಮಸ್ಥಳಗಳು ಬಯಲಾಗಬಹುದು ಎಂಬ ಕಾರಣಕ್ಕಾಗಿಯೇ? ಅಮೆರಿಕಾ ನೀಡುತ್ತಿರುವ ಸಹಕಾರದ ವಿಧಾನ ಇದೇ ಏನು? ನಮ್ಮ ಪ್ರಧಾನ ಮಂತ್ರಿಗಳು ವಾಶಿಂಗ್ಟನ್‌ನಲ್ಲಿ ಅಮೆರಿಕಾದ ಅಧ್ಯಕ್ಷರನ್ನು ಭೇಟಿಯಾದಾಗ ಈ ಪ್ರಶ್ನೆಯನ್ನು ಎತ್ತಿದ್ದರೇ? ಭಾರತದ ತನಿಖಾಕಾರರು ಆದಷ್ಟು ಬೇಗನೇ ಡೇವಿಡ್ ಹೆಡ್ಲಿಯನ್ನು ಪ್ರಶ್ನಿಸುವಂತೆ ಮಾಡಲು ಭಾರತ ಸರಕಾರ ಯಾವ ಕ್ರಮ ಕೈಗೊಳ್ಳುತ್ತಿದೆ?

ಇವು ದೇಶದ ಭದ್ರತೆಯ ದೃಷ್ಟಿಯಿಂದ ನಿರ್ಣಾಯಕವಾಗುವ ಪ್ರಶ್ನೆಗಳು, ಸರಕಾರ ಈ ಬಗ್ಗೆ ಸ್ಪಷ್ಟೀಕರಣ ಕೊಡುವುದೆಂದು ಆಶಿಸುತ್ತೇನೆ.

ಪಂಚಾಯತ್ ಸದಸ್ಯರ ಅಪಹರಣ



ಬಿಜೆಪಿ ದರ್ಬಾರ್

ತಮ್ಮ ಗಣಿ ಲೂಟಿ ವ್ಯವಹಾರಗಳನ್ನು ಕಾಪಾಡಿಕೊಂಡು ತಮ್ಮ ಬಣದ ಅಕ್ರಮಗಳನ್ನು ಮುಚ್ಚಿಕೊಂಡು ಹೋಗಲು ಜನಾರ್ಧನ ರೆಡ್ಡಿ ಅಂಡ್ ಕಂಪನಿ ಕರ್ನಾಟಕದ ಸುಮಾರು 50 ಬಿಜೆಪಿ ಶಾಸಕರನ್ನು ಯಾರೊಬ್ಬರ ಕೈಗೂ ಸಿಗದಂತೆ ...ಡೊಯ್ದು ಹೈದರಾಬಾದ್‌ನ ಹೋಟೆಲ್ ರೆಸಾರ್ಟ್‌ಗಳಲ್ಲಿಟ್ಟಿದ್ದು ಜನ ಇನ್ನೂ ಮರೆತಿಲ್ಲ.

ಬಿ.ಜೆ.ಪಿ.ಯ ಕೇಂದ್ರ ನಾಯಕತ್ವ ಹಾಗೂ ಆರೆಸ್ಸೆಸ್‌ನ ಮಧ್ಯ ಪ್ರವೇಶದಿಂದಾಗಿ ಏನೋ ಒಂದು ತೇಪೆಯಾಗಿದೆ. ರೆಡ್ಡಿ ಬಳಗ ಈಗ ಪಂಚಾಯತ್ ಸದಸ್ಯರ ಅಪಹರಣ ಮಾಡಿದೆ. ಪ್ರಸ್ತುತ ಸ್ಥಳೀಯ ಸಂಸ್ಥೆಗಳಿಂದ ವಿಧಾನ ಪರಿಷತ್‌ಗೆ ನಡೆಯುತ್ತಿರುವ ಚುನಾವಣೆಯಲ್ಲಿ ಮತದಾರರಾಗಿರುವ ಸ್ಥಳೀಯ



ಪಂಚಾಯತ್ ಸದಸ್ಯರನ್ನು ರೆಸಾರ್ಟ್‌ಗಳಿಗೆ ಕೊಂಡೊಯ್ಯುತ್ತಿರುವ ಬಸ್‌ಗಳು

ಸಂಸ್ಥೆಗಳ ಚುನಾಯಿತ ಪ್ರತಿನಿಧಿಗಳನ್ನು ಅದರಲ್ಲೂ ಉತ್ತರ ಕರ್ನಾಟಕದ ಬಳ್ಳಾರಿ, ಗದಗ್, ರಾಯಚೂರು, ಕೊಪ್ಪಳ ಜಿಲ್ಲೆಗಳ ದೊಡ್ಡ ಸಂಖ್ಯೆಯ ಸದಸ್ಯರನ್ನು ರೆಡ್ಡಿ ಬಳಗ ಕರೆದೊಯ್ದು ಗೋವಾದ ರೆಸಾರ್ಟ್‌ಗಳಲ್ಲಿ ಹಾಗೂ ಗೋಕರ್ಣ ಧಾರವಾಡದ ಹೋಟೆಲ್‌ಗಳಲ್ಲಿ ಸೆರೆ ಇಟ್ಟುಕೊಂಡಿದೆ. ಬಳ್ಳಾರಿಯ ಕಲ್ಯಾಣ ಮಂಟಪಗಳಲ್ಲಿ ದೊಡ್ಡ ಸಂಖ್ಯೆಯ ಪಂಚಾಯ್ತಿ ಸದಸ್ಯರನ್ನು ಕೂಡಿಡಲಾಗಿದೆ. ಚುನಾವಣೆಯ ದಿನದವರೆಗೆ ಯಾರೂ ಅವರನ್ನು ಸಂಪರ್ಕಿಸುವಂತಿಲ್ಲ. ಭೇಟಿಯಾಗುವಂತಿಲ್ಲ. ಚುನಾವಣೆಯ ದಿನ ಅವರು ನೇರ ಮತದಾನ ಕೇಂದ್ರಕ್ಕೆ ಬರುತ್ತಾರೆ. ಆಹಾ ಕರ್ನಾಟಕದ ರಾಜಕಾರಣದಲ್ಲಿ ನೈತಿಕತೆ ಯಾವ ಪಾತಾಳವನ್ನು ತಲುಪುತ್ತಿವೆ. ಇದು ಹಣಬಲ, ತೋಳ್ಬಲದ ಈ ಅಸಹ್ಯಕರ, ನಗ್ನ ಪ್ರದರ್ಶನ.

ಕರ್ನಾಟಕ ರಾಜ್ಯ ಎಂದೂ ಕಾಣದ 'ಈ ಹೊಲಸು ರಾಜಕೀಯದ ಕೀರ್ತಿ' ಯಾರಿಗೆ ಸಲ್ಲಬೇಕು. ಖಂಡಿತ ಅದು ಬಿಜೆಪಿ ಮತ್ತು ಬಿಜೆಪಿಯ ಜುಟ್ಟು ಹಿಡಿದಿರುವ ಆರೆಸ್ಸೆಸ್‌ಗೆ ಸಲ್ಲಬೇಕು. ಆಹಾ ಏನು ರಾಷ್ಟ್ರಪ್ರೇಮ ಏನು ಶಿಸ್ತು? ಈ ಆರೆಸ್ಸೆಸ್ ಬಿಜೆಪಿಗಳದ್ದು !!!

×××

ಹೆಲಿಕಾಪ್ಟರ್ ಹಾರಾಟ ಯಡಿಯೂರಪ್ಪ ದಾಖಲೆ

ಹೆಲಿಕಾಪ್ಟರ್ ಹಾರಾಟದ ವಿಚಾರದಲ್ಲಿ ಯಡಿಯೂರಪ್ಪ ಹೊಸ ದಾಖಲೆ ಬರೆಯಲು ಹೊರಟಿದ್ದಾರೆ. ಈ ಹಿಂದಿನ ಎಲ್ಲ ಮುಖ್ಯಮಂತ್ರಿಗಳ ದಾಖಲೆ ಮುರಿದಿಕ್ಕುವತ್ತ ಅವರು ಮುನ್ನುಗ್ಗುತ್ತಿದ್ದಾರೆ.

20 ತಿಂಗಳು ಮುಖ್ಯಮಂತ್ರಿಯಾಗಿದ್ದ ಎಚ್.ಡಿ.ಕುಮಾರಸ್ವಾಮಿಯವರ ಹೆಲಿಕಾಪ್ಟರ್‌ನ ಓಡಾಟಕ್ಕೆಂದು 43.28 ಲಕ್ಷ ರೂಪಾಯಿ ಖರ್ಚಾಗಿದ್ದರೆ, ಯಡಿಯೂರಪ್ಪನವರಿಂದ 2008 ರ ಏಪ್ರಿಲ್‌ನಿಂದ 2009 ಮಾರ್ಚ್‌ವರೆಗಿನ ಕೇವಲ ಸುಮಾರು ಒಂದು ವರ್ಷದ ಅವಧಿಯಲ್ಲಿ 9.59 ಕೋಟಿ ರೂಪಾಯಿ ಖರ್ಚಾಗಿದೆ.

ಗುಡಿ, ಗುಂಡಾರ, ಮಠ ಮಾನ್ಯಗಳಿಗೆ ಭೇಟಿ ನೀಡಲು ಹೋಮ ಹವನ, ಯಾಗ ಯಜ್ಞ ನಡೆಸಿ ಹರಕೆ ತೀರಿಸಲು ಲೆಕ್ಕವಿಲ್ಲದಂತೆ ತಿರುಗುವ ಯಡಿಯೂರಪ್ಪನವರನ್ನು ಕೇಳಿದರೆ 'ರಾಜ್ಯದ ಅಭಿವೃದ್ಧಿಗೆ ಇವೆಲ್ಲಾ ಅಗತ್ಯ ಅಂದಾರು. ರಾಜ್ಯದ ಅಭಿವೃದ್ಧಿ ಅಂದರೆ ಏನು?

×××

ಅಕ್ಕಿ ಸಂತೆ ಎಂಬ ನಾಟಕ ಬಂದ್

ಚುನಾವಣೆಯ ಕಾಲಕ್ಕೆ 2 ರೂಪಾಯಿಗೆ ಅಕ್ಕಿ ನೀಡುವುದಾಗಿ ಹೇಳಿದ್ದ ಬಿಜೆಪಿಯು ರಾಜ್ಯದಲ್ಲಿ ಸರ್ಕಾರ ರಚಿಸಿದ ಮೇಲೆ ಅದನ್ನು 'ಮರೆತೇ' ಬಿಟ್ಟಿತು ಎಂಬ ಸಮಾಚಾರ ನಮಗೆ ಗೊತ್ತಿರುವುದೇ. ಜನ ಅದನ್ನು ಮರೆಯಲಿಲ್ಲ. ಆಹಾರಧಾನ್ಯಗಳ ಬೆಲೆ ಏರಿ ಹಾಹಾಕಾರವೆದ್ದಾಗ ಸರ್ಕಾರ ಜನರಿಗೆ ಅಕ್ಕಿ ಸಂತೆಯ ಮೂಲಕ ಮಾರುಕಟ್ಟೆ ದರಕ್ಕಿಂತ ಸ್ವಲ್ಪ ಕಡಿಮೆ ಬೆಲೆಗೆ ಅಕ್ಕಿ ಮಾರುವುದಾಗಿ ಹೇಳಿ ಕೆಲವೆಡೆ ಅಕ್ಕಿ ಸಂತೆ ಆರಂಭಿಸಿತು.

ಬಿಜೆಪಿ ಸರ್ಕಾರದ ಬದ್ಧತೆ ಬಲ್ಲವರಿಗೆ ಇದು ಎಷ್ಟು ದಿನದ ಆಟ ಎಂಬುದು ಗೊತ್ತಿತ್ತು. ಅದಕ್ಕೆ ತಕ್ಕಂತೆ ಬಿಜೆಪಿ ಸರ್ಕಾರ ಇದೀಗ ಅಕ್ಕಿ ಸಂತೆಯನ್ನು ನಿಲ್ಲಿಸಿದೆ. ಅಕ್ಕಿ ಗಿರಣಿ ಮಾಲೀಕರು ಲೆವಿಯಾಗಿ ಅಕ್ಕಿಯನ್ನು ನೀಡುತ್ತಿಲ್ಲವಂತೆ. ಸರ್ಕಾರ ಅದನ್ನು ಒಪ್ಪಿಕೊಂಡುಬಿಟ್ಟಿತಂತೆ !!

×××

ರೈತರ ಮೇಲೆ ಲಾಠಿ ನರ್ತನ

ಚಾಮರಾಜನಗರದಲ್ಲಿ ವಿದ್ಯುತ್, ರೇಷನ್ ಕಾರ್ಡ್ ಸೇರಿದಂತೆ ವಿವಿಧ ತಮ್ಮ ಹಲವು ಬೇಡಿಕೆಗಳಿಗಾಗಿ ಒತ್ತಾಯಿಸಿ ಪ್ರತಿಭಟನೆ ನಡೆಸುತ್ತಿದ್ದ ರೈತರ ಮೇಲೆ ಬಿಜೆಪಿ ಸರ್ಕಾರ ಎರಗಿಬಿದ್ದಿದೆ. ದಾವಣಗೆರೆಯಲ್ಲಿಯೂ ಕೂಡ ಅದೇ ರೀತಿ ಚಳುವಳಿ ನಿರತ ರೈತರ ಮೇಲೆ ಸರ್ಕಾರ ಯದ್ವಾತದ್ವಾ ಲಾಠಿ ಬೀಸಿದೆ. ಯಡಿಯೂರಪ್ಪ ಅವರು ರೈತರ ಮೇಲೆ ಯಾಕೆ ಆಣೆ ಮಾಡಿ ಪ್ರಮಾಣವಚನ ಸ್ವೀಕರಿಸಿದರು ಅಂತ ರಾಜ್ಯದ ರೈತರಿಗೆ ದಿನೇ ದಿನೇ ಅರ್ಥವಾಗುತ್ತಾ ಹೋಗುತ್ತಿದೆ. ಅನಗತ್ಯವಾದ ಬಳ್ಳಾರಿಯ ಮೂರನೇ ವಿಮಾನ ನಿಲ್ದಾಣಕ್ಕೆ ತಮ್ಮ ಫಲವತ್ತಾದ ಭೂಮಿ . ಕೊಡುವುದಿಲ್ಲ ಎನ್ನುತ್ತಿರುವ ಚಾಗನೂರು-ಸಿರಿವಾರ ರೈತರಿಗೂ ಬಿಜೆಪಿ ಸರ್ಕಾರದ ಲಾಠಿ ರುಚಿ ಸಾಕ್ಷಾತ್ಕಾರವಾಗಿದೆ. ಮುಂದಿನ ಸರದಿ ಯಾರದೆಂದು ನೋಡಬೇಕಿದೆ.



ಉಡುಪಿ ಜಿಲ್ಲೆಯಲ್ಲಿ ಚರ್ಚ್ ಮೇಲೆ ದಾಳಿ

×××

ಚರ್ಚ್ ಮೇಲೆ ದಾಳಿ

ಹಿಂದೆ ದಾವಣಗೆರೆ, ದಕ್ಷಿಣ ಕನ್ನಡ, ಬೆಂಗಳೂರ.... ಹೀಗೆ ರಾಜ್ಯದಲ್ಲೆಲ್ಲಾ ಚರ್ಚ್ ಮೇಲೆ ಧಾಳಿಗಳ ಸರಣಿ ನಡೆದದ್ದಾಯ್ತು. ಜನತೆ ತೀವ್ರವಾಗಿ ಪ್ರತಿಭಟಿಸಿದ್ದೂ ಆಯ್ತು. ಚರ್ಚ್ ಮೇಲಿನ ದಾಳಿಗಳು, ಅಲ್ಪಸಂಖ್ಯಾತರಮೇಲಿನ ಧಾಳಿಗಳು ನಿಂತಿವೆಯೇ? ಉಡುಪಿ ಕೊಳಲಗಿರಿ ಸೇಕ್ರೇಡ್ ಹಾರ್ಟ್ ಚರ್ಚ್ ಮೇಲೆ ಮೊನ್ನೆ ದಾಳಿ ನಡೆದಿದೆ. ಬೀದರ್ ಜಿಲ್ಲೆಯಲ್ಲೂ ಇತ್ತೀಚಿಗೆ ಚರ್ಚ್ ಒಂದರ ಮೇಲೆ ಧಾಳಿ ನಡೆದಿದೆ. ಇನ್ನೂ ಅಲ್ಪಸಂಖ್ಯಾತರ ಮೇಲಿನ ಧಾಳಿಗಳಿಗೆ ಲೆಕ್ಕವೇ ಇಲ್ಲ. ಅದು ನಿತ್ಯ ನಿರಂತರ.

×××

ಕೊನೆಯಿಲ್ಲದ ಗಣಿ ಲೂಟಿ ಮತ್ತು ಭಂಡತನ

ಗಣಿ ಲೂಟಿಕೋರ ರೆಡ್ಡಿ ಬಳಗದ ಒಡೆತನದ ಓಬಳಾಪುರಂ ಮೈನಿಂಗ್ ಕಂಪನಿ (ಓಎಂಸಿ) ನಡೆಸಿರುವ ಬಾರಿ ಅಕ್ರಮಗಳ ಬಗೆಗೆ ಈ ಅಂಕಣದಲ್ಲಿ ಈಗಾಗಲೇ ಹಲವು ಬಾರಿ ಬರೆಯಲಾಗಿದೆ. ಅದಕ್ಕೆ ಸಂಬಂಧಿಸಿದ ಕೆಲವು ಹೊಸ ಸುದ್ದಿ ಇವು.

ಆಂಧ್ರದ ಅನಂತಪುರ ಜಿಲ್ಲೆಯಲ್ಲಿನ ಈ ಕಂಪನಿ ನಡೆಸಿರುವ ಅಕ್ರಮಗಳ ಬಗೆಗೆ ತನಿಖೆ ಮಾಡಲು ಆಂಧ್ರ ಸರ್ಕಾರ ನೇಮಿಸಿದ್ದ ಮೂವರು ಸದಸ್ಯರ ಅತ್ಯುನ್ನತ ಸಮಿತಿಯು ಓಎಂಸಿ ಕಂಪನಿಯು ಕರ್ನಾಟಕದ ಗಡಿ ಭಾಗವನ್ನು ಒತ್ತುವರಿ ಮಾಡಿದೆ ಎಂದೂ, ತನ್ನ ವ್ಯಾಪ್ತಿ ಮೀರಿ ಬಾರಿ ಪ್ರಮಾಣದ ಅಕ್ರಮ ಗಣಿಗಾರಿಕೆ ನಡೆಸಿದೆ ಎಂದೂ, ಇದಕ್ಕಾಗಿ ಆಂಧ್ರ, ಕರ್ನಾಟಕದ ಗಡಿ ಗುರುತುಗಳನ್ನೇ ನಾಶ ಮಾಡಲಾಗಿದೆ ಎಂದು ವರದಿ ಸಲ್ಲಿಸಿದೆ.

ಆಂಧ್ರ ಪ್ರದೇಶದ ನೆಲದಿಂದ ಸಾಗಾಣಿಕೆ ಮಾಡಲಾಗಿರುವ ಕಬ್ಬಿಣದ ಅದಿರಿನ ಶೇ.40 ಭಾಗ ಮಾತ್ರ ಕಂಪನಿಗೆ ಅಧಿಕೃತ ಅನುಮತಿ ಇರುವ ಗಣಿಗಳಿಂದ ತೆಗೆದಿರುವಂತಹದ್ದು ಉಳಿದ ಶೇ.60 ಭಾಗದ ಅದಿರು ಬೇರೆಡೆಯಿಂದ ಅಕ್ರಮವಾಗಿ ತರಲಾದದ್ದು ಎಂದೂ ವರದಿ ಹೇಳಿದೆ. ಈ ಶೇ.60 ಭಾಗ ಅಂದರೆ ಲಕ್ಷಾಂತರ ಟನ್ ಅದಿರು ಬಂದದ್ದು ಎಲ್ಲಿಂದ ಎಂಬ ಪ್ರಶ್ನೆಗೆ ರೆಡ್ಡಿ ಬಳಗ ಉತ್ತರಿಸಬೇಕಿದೆ.

ಇಷ್ಟು ಮಾತ್ರವಲ್ಲ ವಿವಾದ ಎದ್ದ ಮೇಲೆ ಈ ಹಿಂದೆ ಒಮ್ಮೆ ನಡೆದಿರುವ ಗಡಿ ಸಮೀಕ್ಷೆಯಲ್ಲಿ ಕೂಡ ಬಾರಿ ಅಕ್ರಮ ನಡೆದಿದೆಯಂತೆ. ಹಾಗಿದ್ದರೆ ಎಷ್ಟೊಂದು ಪ್ರಭಾವಶಾಲಿಗಳು ನಮ್ಮ ರೆಡ್ಡಿತ್ರಯರು ಮತ್ತು ಬಳಗ. ಇದೀಗ ಹೊಡ ಗಡಿ ಸಮೀಕ್ಷೆ ನಡೆಯುತ್ತಿದೆ. ಈ ಮಧ್ಯೆ ಆಂಧ್ರ ಪ್ರದೇಶದ ಹೈಕೋರ್ಟ್, ಗಣಿಗಾರಿಕೆ ಸ್ಥಗಿತಕ್ಕೆ ಹಾಗೂ ಅದಿರು ಸಾಗಾಣಿಕೆ ನಡೆಸದಂತೆ ಹೇರಿದ್ದ ನಿರ್ಬಂಧಕ್ಕೆ ತಡೆಯಾಜ್ಞೆ ನೀಡಿದ್ದ ವರದಿ ಬಂತು. ಅದರ ಬೆನ್ನ ಹಿಂದೆಯೇ ಈಗ ಆಂಧ್ರ ಹೈಕೋರ್ಟ್ ಆದೇಶವನ್ನು ಅನೂರ್ಜಿತಗೊಳಿಸಿ ದೇಶದ ಸುಪ್ರಿಂ ಕೋರ್ಟ್ ಓಬಳಾಪುರಂ ಮೈನಿಂಗ್ ಕಂಪನಿಗೆ ಸೇರಿದ ಗಣಿಗಳಲ್ಲಿ ಕಾರ್ಯಾಚರಣೆ ಸ್ಥಗಿತಗೊಳಿಸಲು ಆದೇಶ ನೀಡಿದೆ.

ಈ ಮಧ್ಯೆ ಕರ್ನಾಟಕದ ಲೋಕಾಯುಕ್ತರು ಇದೇ ಅಕ್ರಮ ಗಣಿಗಾರಿಕೆ ಕುರಿತು ನೀಡಿದ್ದ ಮಧ್ಯಂತರ ವರದಿ ಕುರಿತು ಯಾವ ಕ್ರಮ ಕೈಗೊಳ್ಳಲಾಗಿದೆ ಎಂದು ರಾಜ್ಯ ಸರ್ಕಾರದಿಂದ ವಿವರ ಕೋರಿದ್ದ ರಾಜ್ಯಪಾಲರ ಪತ್ರಗಳಿಗೆ ಉತ್ತರವನ್ನೇ ನೀಡದ ಕುರಿತು ರಾಜ್ಯಪಾಲರು ಆಕ್ಷೇಪವೆತ್ತಿದ್ದಾರೆ. ನಾಡಿನ ಚಿಂತಕರು, ಸಾಹಿತಿಗಳಂತೂ ಮೊದಲಿನಿಂದಲೂ ಈ ಪ್ರಶ್ನೆಯನ್ನು ಎತ್ತುತ್ತಾ ಬರುತ್ತಿದ್ದು ಈಗಲೂ ಮತ್ತೊಮ್ಮೆ ಇದೇ ಪ್ರಶ್ನೆಯನ್ನು ಎತ್ತಿದ್ದಾರೆ.

ಈಗ ಅಕ್ರಮ ಗಣಿಗಾರಿಕೆ ಕುರಿತು ಸಿಬಿಐ ತನಿಖೆ ನಡೆಯುತ್ತಿದೆ. ಆರೋಪಿ ಸಚಿವರುಗಳು ನಿರ್ಲಜ್ಜವಾಗಿ ಅಧಿಕಾರ ಸ್ಥಾನದಲ್ಲಿ ಕುಳಿತು ಮೆರೆಯುತ್ತಿದ್ದಾರೆ. ರಾಜಿನಾಮೆ ಕೇಳುವ ನೈತಿಕತೆ, ತಾಕತ್ತು ಎರಡೂ ಇಲ್ಲದ ಯಡಿಯೂರಪ್ಪ ಈಗೇನು ಮಾಡುತ್ತಾರೋ?

ಜಗದಗಲ

ಶರತ್‌ಚಂದ್ರ

ಕೋಪನ್ ಹೆಗನ್‌ನಲ್ಲಿ ಒಪ್ಪಂದದ ಬಗ್ಗೆ ಕೊನೆಗಳಿಗೆಯ ಆಶಾಕಿರಣ

ಕೊಪನ್ ಹೆಗನ್‌ನಲ್ಲಿ ಹವಾಮಾನ ಬದಲಾವಣೆ ತಡೆಯುವ ಜಾಗತಿಕ ಕ್ರಮಗಳ ಬಗ್ಗೆ ಒಪ್ಪಂದಕ್ಕೆ ಬರಲು ಕರೆಯಲಾದ ಚಾರಿತ್ರಿಕ ಶೃಂಗಸಭೆಯ ಒಂದು ವಾರದ ಸಭೆ ಹಲವು ಏಳು ಬೀಳುಗಳನ್ನು ಕಂಡಿತು. ಆಫ್ರಿಕನ್ ದೇಶಗಳ ಸಭಾತ್ಯಾಗ, ಅಮೆರಿಕ-ಚೀನಾ ನಡುವೆ ವಾಗ್ಯುದ್ಧ, ಮಾತುಕತೆಗಳು ಕಳೆದ ಮೂರು ದಿನ ನಿಂತು ಹೋದದ್ದು, ಹಲವು ಸರ್ಕಾರೇತರ ಪ್ರತಿನಿಧಿಗಳಿಗೆ ಸಭೆಗೆ ಹೋಗಲಾಗದಷ್ಟು ಅವ್ಯವಸ್ಥೆ, ಶೃಂಗಸಭೆ ನಿರ್ವಹಣೆ ಸರಿ ಇಲ್ಲ ಎಂಬ ಗಂಭೀರ ಆಪಾದನೆಗಳ ನಡುವೆ ಶೃಂಗಸಭೆಯ ಅಧ್ಯಕ್ಷರ ರಾಜೀನಾಮೆ, ವಿಕಸಿತ ಮತ್ತು ವಿಕಾಸ ಹೊಂದುತ್ತಿರುವ ದೇಶಗಳ ನಡುವೆ ಸತತ ಸಂಘರ್ಷ, ಪರಿಸರ ಸಂಘಟನೆಗಳಿಂದ ಭಾರೀ ಪ್ರತಿಭಟನೆಗಳು - ಶೃಂಗಸಭೆಯ ಮುಖ್ಯ ಅಂಶಗಳು. ಆದರೆ ವಿಶ್ವದ 120 ಕ್ಕೂ ಹೆಚ್ಚು ದೇಶಗಳ ನಾಯಕರು ಕೊಪನ್ ಹೆಗನ್‌ಗೆ ಆಗಮಿಸಿ ಮಾತುಕತೆಯಲ್ಲಿ ತೊಡಗಿರುವಾಗ, ಕೊನೆಯ ದಿನದ ಹೊತ್ತಿಗೆ (ಡಿಸೆಂಬರ್ 18 ಬೆಳಿಗ್ಗೆ) ಒಂದು ಒಪ್ಪಂದ ಆಗಬಹುದು ಎಂಬ ಆಶಾಕಿರಣ ಕಂಡಿದೆ. ಆದರೆ ಎಂತಹ ಒಪ್ಪಂದ ಬರುವುದು ಎಂದು ಕಾದು ನೋಡಬೇಕು. ಸೀತಾರಾಂ ಯೆಚ್ಚೂರಿ ಮತ್ತು ಹಲವು ಪರಿಸರ ಸಂಘಟನೆಗಳು ಹೇಳಿರುವಂತೆ ಕೆಟ್ಟ ಒಪ್ಪಂದಕ್ಕಿಂತ ಒಪ್ಪಂದ ಆಗದೇ ಇರುವುದೇ ಲೇಸು.

ಶ್ರೀಮಂತ ದೇಶಗಳನ್ನು ಹಿಮ್ಮೆಟ್ಟಿಸಿದ ಬಡ ದೇಶಗಳ ಐಕ್ಯತೆ

ಶೃಂಗಸಭೆಯ ಉದ್ದಕ್ಕೂ ಶ್ರೀಮಂತ ದೇಶಗಳು ಒಪ್ಪಂದ ಆಗಬೇಕು ಎಂಬ ಬಡ ದೇಶಗಳ ತವಕ ಬಳಸಿ ಹಲವು ಪ್ರಮುಖ ವಿಷಯಗಳ ಬಗ್ಗೆ ಕ್ಯೋಟೊ ಒಪ್ಪಂದದ ನೀತಿಗಳನ್ನು ಬದಲಾಯಿಸಲು ಒತ್ತಡ ಹೇರಿದವು. ಆದರಲ್ಲೂ ಭಾರತ ಮತ್ತು ಚೀನಾದ ಮೇಲೆ ಅವು ಶೃಂಗಸಭೆಯ ಮೊದಲೇ ಘೋಷಿಸಿದ ಸ್ವಯಂಸ್ಫೂರ್ತ ಕಡಿತಗಳನ್ನು ಒಪ್ಪಂದದ ಭಾಗವಾದ ಬಾಧ್ಯತೆ ಮಾಡಲು ಮತ್ತು ಅಂತರ್ರಾಷ್ಟ್ರೀಯ ನಿರೀಕ್ಷಣೆಗೆ ಒಳಪಡಿಸಲು ಸತತ ಒತ್ತಡ ಹಾಕಿದವು. ಭಾರತ ಮತ್ತು ಚೀನಾಗಳನ್ನು ಇತರ ಜಿ-77 ದೇಶಗಳಿಂದ ಪ್ರತ್ಯೇಕಿಸಿ ಒಂಟಿಯಾಗಿಸಲು ಪ್ರಯತ್ನಿಸಿದವು. ಹವಾಮಾನ ವೈಪರೀತ್ಯದಿಂದ ಅತ್ಯಂತ ತ್ರಸ್ತ ದೇಶಗಳ ಕೂಟದ ಹೆಸರಲ್ಲಿ ಜಿ-77 ಕೂಟದ ಐಕ್ಯತೆ ಒಡೆಯಲು ಪ್ರಯತ್ನಿಸಿದವು. ಕ್ಯೋಟೊ ಒಪ್ಪಂದ ಮತ್ತು ಬದಲಿ ಕಾರ್ಯಯೋಜನೆಯಲ್ಲಿ ಒಪ್ಪಿತ ಪ್ರಮುಖ ನೀತಿ-ನಿರ್ದೇಶನಗಳನ್ನು ಕೈಬಿಡುವ ಹೊಸ ಒಪ್ಪಂದ ಕರಡು ತರಲು ಪ್ರಯತ್ನಿಸಿದವು. ಇನ್ನೂ ಪ್ರಯತ್ನಿಸುತ್ತಿವೆ.

ಶ್ರೀಮಂತ ದೇಶಗಳು ಈ ಸಮಸ್ಯೆ ಸೃಷ್ಟಿಸಿರುವುದು, ಆದ್ದರಿಂದ ಅವು ಇದರ ಪ್ರಮುಖ ಜವಾಬ್ದಾರಿ ಹೊರಬೇಕು. ಅದಕ್ಕಾಗಿ ಅವು ತೀವ್ರ ಅನಿಲ ಕಡಿತ, ಸುಲಭ ದರದಲ್ಲಿ ತಂತ್ರಜ್ಞಾನ ವರ್ಗಾವಣೆ, ಹೊಸ ತಂತ್ರಜ್ಞಾನಕ್ಕೆ ಬದಲಾಯಿಸಲು ಧನ ಸಹಾಯದ ಬದ್ಧತೆ ತೋರಬೇಕು. ಇವು ಆ ಪ್ರಮುಖ ನೀತಿಗಳು. ಅದಕ್ಕೆ ಬದಲಿಯಾಗಿ ಎಲ್ಲಾ ದೇಶಗಳು (ಚಾರಿತ್ರಿಕವಾಗಿ ಸಮಸ್ಯೆ ಸೃಷ್ಟಿಸುವಲ್ಲಿ ಅವುಗಳ ಪಾತ್ರ, ಆದಾಯ, ಬೆಳವಣಿಗೆಯ ಹಂತ ಇವ್ಯಾವುದನ್ನೂ ಲೆಕ್ಕಿಸದೆ) ಅನಿಲ ಕಡಿತ ಮತ್ತು ವೆಚ್ಚವನ್ನು ಸಮಾನವಾಗಿ ಹೊರಬೇಕು ಎಂಬುದು ಶ್ರೀಮಂತ ದೇಶಗಳ ಧೋರಣೆ. ಆದರೆ ಬೇಸಿಕ್ (ಬ್ರೆಜಿಲ್, ಇಂಡಿಯಾ, ಚೀನಾ, ದಕ್ಷಿಣ ಆಫ್ರಿಕಾ), ಜಿ-77, ಆಫ್ರಿಕಾ ಗುಂಪಿನ ದೇಶಗಳು ಕನಿಷ್ಠ ಈ ವರೆಗೆ ಶ್ರೀಮಂತ ದೇಶಗಳ ಪ್ರಯತ್ನವನ್ನು ಹಿಮ್ಮೆಟ್ಟಿಸಿವೆ. ಒಗ್ಗಟ್ಟಾಗಿ ನಿಂತಿವೆ ಎನ್ನುವುದು ಸಕಾರಾತ್ಮಕ ಅಂಶ. ಈ ಒಗ್ಗಟ್ಟಿನ ಒತ್ತಡದಿಂದ ಶ್ರೀಮಂತ ದೇಶಗಳು ಸ್ವಲ್ಪವಾದರೂ ಮಣಿಯಬೇಕಾಗಿದೆ.

3 ಡಿಗ್ರಿ ವಿಶ್ವ ತಾಪಮಾನ ಏರಿಕೆಯ ಆತಂಕ

ಅಮೆರಿಕ 100 ಶತಕೋಟಿ ಡಾಲರುಗಳ ನಿಧಿಗೆ ಪ್ರಯತ್ನಿಸುವುದು, ಚೀನಾ-ಭಾರತದಂತಹ ದೇಶಗಳ ಕ್ರಮಗಳು 'ಪಾರದರ್ಶಕ'ವಾಗಿ ತಮ್ಮ ಕಡಿತಗಳನ್ನು ಮಾಡಿದರೆ ಅದು ಸಹ ಕಡಿತ ಮುಂತಾದ ಬಾಧ್ಯ ಕ್ರಮಗಳಿಗೆ ಒಪ್ಪುವುದು - ಎಂದು ಹಿಲರಿ ಕ್ಲಿಂಟನ್ ಘೋಷಿಸಿದರು. ತಮ್ಮ ಕ್ರಮಗಳನ್ನು ಬಾಧ್ಯ ಕ್ರಮ ಮಾಡಲು ಒಪ್ಪುವುದಿಲ್ಲ. ಅಂತರ್ರಾಷ್ಟ್ರೀಯ ನಿರೀಕ್ಷಣೆಗೆ ಒಳಪಡಿಸುವುದಿಲ್ಲ. ಆದರೆ ಆ ಕ್ರಮಗಳ ಬಗ್ಗೆ ಮಾಹಿತಿ ಕೊಡಲು ಹಿಂಜರಿಯುವುದಿಲ್ಲ - ಭಾರತ-ಚೀನಾಗಳ ನಿಲುವಿನಿಂದ ಎರಡು ಬಣಗಳ ನಡುವೆ ಕಂದರ ಕಡಿಮೆಯಾಗಿದೆ. ಇದು ಒಪ್ಪಂದ ಅಥವಾ ಅಂತಹ ಒಪ್ಪಂದದ ರೂಪು ರೇಷೆಗಳನ್ನು ಕೊಡುವ ರಾಜಕೀಯ ಹೇಳಿಕೆಯ ಬಗ್ಗೆ ಆಶಾಕಿರಣ ಮೂಡಿಸಿದೆ. ರಾಜಕೀಯ ಹೇಳಿಕೆ - ಕ್ಯೋಟೊ ಒಪ್ಪಂದ ಮತ್ತು ಬಲಿ ಕಾರ್ಯಯೋಜನೆಯ ಪ್ರಮುಖ ನೀತಿಗಳನ್ನು ಬಿಟ್ಟು ಕೊಡದೆ, ಈಗ ಶೃಂಗಸಭೆಯ ಮುಂದಿರುವ ಎರಡು ಕರಡುಗಳ - ಮೇಲೆ ಆಧಾರಿತವಾಗಿರುತ್ತದೆ ಎಂಬ ಸ್ವಪ್ನವೇ ಸಹ ಇದಕ್ಕೆ ಕಾರಣವಾಗಿದೆ.



ಈ ನಡುವೆ ಈ ವರೆಗೆ ಒಪ್ಪಿತವಾದ- ಅನಿಲ ಕಡಿತ, ನಿಧಿ, ತಂತ್ರಜ್ಞಾನದ ವರ್ಗಾವಣೆ ಇತ್ಯಾದಿ - ಕ್ರಮಗಳು ಒಟ್ಟಾಗಿ ಹವಾಮಾನ ವೈಪರೀತ್ಯದ ಗಂಭೀರ ಸಮಸ್ಯೆ ಎದುರಿಸಲು ಏನೇನೂ ಸಾಲದು. ಈ ವರೆಗಿನ ಕ್ರಮಗಳು 3 ಡಿಗ್ರಿ ವಿಶ್ವ ತಾಪಮಾನ ಏರಿಕೆಗೆ ಕಾರಣವಾಗುತ್ತವೆ. ಈ ಅಂದಾಜು ಇರುವ ವಿಶ್ವಸಂಸ್ಥೆಯ ಕಾರ್ಯಗುಂಪಿನ ಆಂತರಿಕ ದಾಖಲೆ ಮಾಧ್ಯಮಗಳಿಗೆ ಮತ್ತು ಸರ್ಕಾರೇತರ ಸಂಘಟನೆಗಳಿಗೆ ದೊರಕಿದ್ದು ಕೋಲಾಹಲ ಉಂಟು ಮಾಡಿದೆ. ಸಮಸ್ಯೆಯ ಗಂಭೀರತೆಯನ್ನು ಇನ್ನಷ್ಟು ವಿಶದ ಪಡಿಸಿದೆ.

ಪಾರ್ಲಿಮೆಂಟು ಹಾಕಿದ 'ಲಕ್ಷ್ಮಣ ರೇಖೆ'

ಪರಿಸರ ಮಂತ್ರಿ ಜೈರಾಮ್ ರಮೇಶ್ ನಾಯಕತ್ವದಲ್ಲಿ ಭಾರತದ ಅಧಿಕೃತ ನಿಯೋಗ ಈ ವರೆಗೆ ಸಮಾಧಾನಕರ ಪಾತ್ರ ವಹಿಸಿದೆ. ಶೃಂಗಸಭೆಯ ಮೊದಲು ಜೈರಾಮ್ ರಮೇಶ್ ಅವರ ಹೇಳಿಕೆಗಳ ಹಲವು ತಿಪ್ಪರಲಾಗಗಳು ತೀವ್ರ ಸಂಶಯ ಮೂಡಿಸಿದ್ದವು. ಜಿ-77 ಮತ್ತು ಬೇಸಿಕ್ ಗುಂಪುಗ ನಾಯಕತ್ವ ವಹಿಸದಿದ್ದರೂ ಆದರ ಐಕ್ಯ ಕಾಪಾಡಿಕೊಂಡು ಬಂದು, ಚೀನಾ ವಹಿಸಿ ನಾಯಕತ್ವಕ್ಕೆ ಬೆಂಬಲ ಕೊಟ್ಟಿದೆ. ಕೊಪನ್ ಹೆಗನ್ ಶೃಂಗಸಭೆಯಲ್ಲಿ ಭಾರತದ ನಿಲುವಿನ ಬ ಪಾರ್ಲಿಮೆಂಟು ಹಾಕಿದ 'ಲಕ್ಷ್ಮಣ ರೇಖೆ' ದಾಟಿ ಭಾರತದ ಹಿತಾಸಕ್ತಿ ಕಾಪಾಡುವ ನಿಲುವು ಎ ಹಿಡಿಯುವ ಸೀತಾರಾಂ ಯೆಚ್ಚೂರಿ, ಡಾ ಸ್ವಾಮಿನಾಥನ್ ಮುಂತಾದ ಪ್ರಮುಖರು ಇರುವ ಶೃಂಗಸಭೆಯಲ್ಲಿ ಭಾಗವಹಿಸುತ್ತಿರು ಪಾರ್ಲಿಮೆಂಟರಿ ನಿಯೋಗ ಮತ್ತು ಸುನಿತ ನಾರಾಯಣ್ ಮುಂತಾದ ಪರಿಸರ ಸಂಘಟನೆಗ ನಾಯಕರು ಇರುವ ಸರ್ಕಾರೇತರ ಪ್ರತಿನಿಧಿಗಳ ಸತ ಒತ್ತಡವೂ ಇದಕ್ಕೆ ಕಾರಣ. ಭಾರತದ ಸ್ವಯಂಸ್ಫೂರ್ತ ಅನಿಲ ಕಡಿತದ ಘೋಷಣೆಯನ್ನು ಬಾಧ್ಯ ಒಪ್ಪ ಭಾಗವಾಗಲು, ಅಂತರ್ರಾಷ್ಟ್ರೀಯ ನಿಧಿಯ ನೆರ ಇರದ ಭಾರತದ ಕ್ರಮಗಳ ಅಂತರ್ರಾಷ್ಟ್ರೀಯ ತಪಾಸಣೆಗೆ, ನಿಗದಿತ ವರ್ಷದ ಅನಿಲದ ಪ್ರಮಾಣ ಗರಿಷ್ಠ ಮಿತಿಯ ನಂತರ ಅದನ್ನು ಮೀರದೇ ಇರುವುದ - ಈ ನಿಲುವುಗಳಿಗೆ ಒಪ್ಪದೆ ಇರುವುದು, ಕ್ಯೋಟೊ ಒಪ್ಪಂದದ ಪ್ರಮುಖ ಅಂಶಗಳನ್ನು ಬಿಟ್ಟು ಕೊಡ ಇರುವುದು - ಇವು ಪಾರ್ಲಿಮೆಂಟು ಹಾಕಿದ 'ಲಕ್ಷ್ಮಣ ರೇಖೆ'.

ಆದರೆ ಪ್ರಧಾನಿ ಮನ ಮೋಹನ ಸಿಂಗ್ ಈ 'ಲಕ್ಷ್ಮಣ ರೇಖೆ' ದಾಟುತ್ತಾರೆಯೇ? ಅಮೆರಿಕದ ಅಧ್ಯ ಒಬಾಮಾ ಮನ ಮೋಹನ ಸಿಂಗ್ ಶೃಂಗಸ ಕುಸಿಯದಂತೆ ಸಹಾಯ ಮಾಡಬೇಕು ಎನ್ನು ಮೂಲಕ ಅವರದೇ 'ಲಕ್ಷ್ಮಣ ರೇಖೆ' ಎಳೆದಿದ್ದಾರೆ. ಅಮೆರಿಕದ ಅಧ್ಯಕ್ಷರು ಹಾಕಿದ 'ಲಕ್ಷ್ಮಣ ರೇಖೆ'ಯನ್ನು ಭಾರತದ ಜನತೆ ಮತ್ತು ಪಾರ್ಲಿಮೆಂಟು ಹಾಕಿ 'ಲಕ್ಷ್ಮಣ ರೇಖೆ' ಗಿಂತ ಹೆಚ್ಚು ಭಯ-ಭಕ್ತಿಯಿಂ ಕಾಣುವ ಮನಮೋಹನ ಸಿಂಗ್ ಅವರು ಮಾಡುತ್ತಾರೆ ಎಂದು ಕಾದು ನೋಡಬೇಕಾಗಿದೆ.

...ಶ್ವ ತುಳು ಸಮ್ಮೇಳನ...

...3 5 ರಿಂದ

...ನಾಡಿನಲ್ಲಿ ಕುಲಕಸುಬುಗಳ ಪಲ್ಲಟಗೊಳ್ಳಬೇಕಾದ ...ತ್ಯವಿತ್ತು. ಅದು ಆಗಿದೆ. ಕಸುಭಾಧಾರಿತ ಜಾತಿ ...ಸ್ಥೆ ಹೇಳಲು, ಹೊರಗಿನಿಂದ ನೋಡಲು ತುಂಬಾ ...ದವಾಗುತ್ತದೆ. ಆದರೆ ಕಸುಬಿನ ಹಿಂದಿರುವ ...ಬುದಾರರ ನೋವಿನ ಕತೆಗಳನ್ನು ಅರ್ಥ ...ಡಿಕೊಂಡರೆ ಈ ಪಲ್ಲಟದ ಅಗತ್ಯ ...ರ್ಥವಾಗುತ್ತದೆ ಎಂದು ವಿವರಿಸಿದರು. ...ರ್ತಾಭಾರತಿ ದಿನಾಂಕ 13.12.2009) ಆದರೆ ...ತಹ ಆಶಯಗಳಿಗೆ ವ್ಯತಿರಿಕ್ತವಾಗಿ ತುಳು ಮಾದರಿ ...ಮ ಅನಾವರಣಗೊಂಡಿದ್ದು ಅಲ್ಲಿದ್ದ ವಿವಿಧ ...ತಿಯ ಮನೆಗಳು, ಆ ಜಾತಿಗನುಗುಣವಾಗಿಯೇ ...ದ್ದು ಕಾಣುತ್ತಿರುವ ಅವ್ಯವಸ್ಥೆ, ಬಡತನಗಳು ದಲಿತ ...ಳಿದ ಮನೆಗಳಾಗಿದ್ದರೆ ಗುತ್ತಿನಮನೆ, ...ೀಯಿಸರ ಮನೆ, ಶ್ಯಾನುಭೋಗರ ಮನೆಗಳನ್ನು ...ಚ್ಚುಕಟ್ಟು, ಶಿಸ್ತು, ಸುಂದರ ಎಲ್ಲವೂ ಇದ್ದು ...ದವರಿಗೆ ಏನೂ ಇಲ್ಲ ಎಂಬುವಂತಹ ಸಂದೇಶ ...ದ್ದು ಕಾಣುತ್ತಿತ್ತು. ಇಂತಹ ಅಸಮಾನತೆಯ ...ವೀಕರಣ ಅಗತ್ಯವಿರಲಿಲ್ಲ. ತುಕರಾಮ ಪೂಜಾರಿ, ...ಮಲೆ ಮೊದಲಾದವರೂ ಸೇರಿದಂತೆ ತುಳು ...ಮದ ಕಣ್ಣೋಟದ ಬಗ್ಗೆ ಯಾವ ಚಕಾರವನ್ನೂ ...ಲ್ಲ.

...ಪುರುಷೋತ್ತಮ ಬಿಳಿಮಲೆಯವರು ಸ್ವಲ್ಪಮಟ್ಟಿಗೆ ...ರವಲ್ಲದಿದ್ದರೂ ಒಂದು ರೀತಿಯಲ್ಲಿ ಸುತ್ತು ...ಸಿದ ಚಿಂತನೆಯನ್ನು ಮತ್ತೊಂದು ಗೋಷ್ಠಿಯಲ್ಲಿ ...ಬಿಸಿದರು. ಅವರು ತುಳು ನಾಡಿನ ಚರಿತ್ರೆಯ ...ಣ ಕೇವಲ ವೈಭರೀಕರಣ ಮಾಡದೆ ಅಲ್ಲಿನ ...ಡಾಯ ದಲಿತ ಪ್ರಜ್ಞೆಗಳ ಜೊತೆ ಕೋಮು ...ಸ್ಯದ ಘಟನೆಗಳನ್ನು ವಿವರಿಸಿದರು ಎಂದು ...ತಾಭಾರತಿ ದಿನ ಪತ್ರಿಕೆಯಲ್ಲಿ ವರದಿಯಾಗಿದೆ. ...ೀಲ್ಕಂಡ ಎರಡೂ ಚಿಂತಕರ ಚಿಂತನೆಯೂ ...ಆಳಕ್ಕೆ ಇಳಿಯಬೇಕಿತ್ತು. ಏಕೆಂದರೆ ಕುಲಕಸುಬಿನ ...ದೆ ಕೇವಲ ನೋವು ಮಾತ್ರವಲ್ಲ ಅವಮಾನವಿದೆ. ...ಕಿನ ನವಗಾನವನ್ನು ಪ್ರಾರಂಭದಲ್ಲೇ ಹೊಸುಕಿ ...ಕುವ ಅಸ್ಪೃಶ್ಯತೆಯ ಎಂದೂ ಬತ್ತದ ಒರತೆ ಇದೆ. ...ಸುದರಿಂದ ತುಳು ಸಂಸ್ಕೃತಿ ಎಂದರೆ ...ತಾರಾಧನೆಯ ಸಂಸ್ಕೃತಿ ಎಂದು ...ೀಕರಿಸುವುದರ ಮೂಲಕ ದಲಿತ ಮತ್ತು ...ದುಳಿದ ಜಾತಿ ಜನಾಂಗಗಳು ಅನುಭವಿಸುತ್ತಿರುವ ...ಮಾಜಿಕ ತಾರತಮ್ಯ, ಜಾತಿ ಪದ್ಧತಿ, ...ಳಿಗಮಾನ್ಯತನವನ್ನು ಶಾಶ್ವತಗೊಳಿಸುವುದಾಗಿದೆ.

...ತುಳು ಭಾಷೆಗಾಗಿ ಸಿಪಿಐ(ಎಂ)

...ತುಳು ಸಂಸ್ಕೃತಿ ಭಾಷೆಗಾಗಿ ಪ್ರಾಮಾಣಿಕವಾಗಿ ...ಸತ್ತಿನಲ್ಲಿ ಪ್ರಶ್ನೆ ಎತ್ತಿದ ... ಸಂವಿಧಾನದ ...ಎಂದು ...

ನಿದ್ರೆಯಲ್ಲಿ ಹಲವಾರು ದಶಕಗಳನ್ನು ಕಳೆದಿರುವಾಗ ಮಲಯಾಳಂ ಮಾತೃಭಾಷಿಕ ಸಂಸದರು ತುಳುಭಾಷೆಗಾಗಿ ಲೋಕಸಭೆಯಲ್ಲಿ ಮಾತನಾಡಿದಾಗ ದನಿ ಕೂಡಿಸದ ಬಿಜೆಪಿ ಮತ್ತು ಕಾಂಗ್ರೆಸ್ ಪಕ್ಷದ ಸಂಸದರು ಮೂರು ದಿನವೂ ಉಜಿರೆಯಲ್ಲೇ ಟೀಕಾಣಿ ಹೂಡಿದ್ದರು. ಇಷ್ಟು ಮಾತ್ರವೇ ಅಲ್ಲದೇ ಕೇರಳ ರಾಜ್ಯ ಸರಕಾರ ತುಳು ಸಾಹಿತ್ಯ ಅಕಾಡಮಿಯನ್ನು ರಚಿಸಿ, ಹಲವಾರು ರಚನಾತ್ಮಕ ಕಾರ್ಯಕ್ರಮಗಳನ್ನು ಬಜೆಟ್ ಅನುದಾನದ ಮೂಲಕ ನಡೆಸುತ್ತಿರುವ ಪ್ರಾಮಾಣಿಕ ಪ್ರಯತ್ನವನ್ನು ನೆನಪಿಸಲು ಯಾವ ತುಳು ಸಾಹಿತಿ, ವಿದ್ವಾಂಸರಿಗೆ ಸಾಧ್ಯವಾಗದೇ ಹೋದುದು ವಿಷಾದದ ಸಂಗತಿ.

ಉಪಸಂಹಾರ

ತುಳು ಸಂಸ್ಕೃತಿಯ ಬಗ್ಗೆ ನಡೆದ ವಿಶ್ಲೇಷಣೆಯನ್ನು ಕೊನೆಗೊಳಿಸುವ ಈ ಸನ್ನಿವೇಶದಲ್ಲಿ ಅವಿಭಾಜಿತ ದ.ಕ. ಹಾಗೂ ಕಾಸರಗೋಡು ಜಿಲ್ಲೆಯೂ ಸೇರಿದಂತೆ ಯಕ್ಷಗಾನ ಕಲೆ ತನ್ನ ಎಂದಿನ ರಾಜಮರ್ಯಾದೆ ವರ್ಚಸ್ಸನ್ನು ಕಳೆಯುತ್ತಿರುವುದನ್ನು ಗಮನಿಸಬಹುದು. ಯಕ್ಷಗಾನ ಕಲೆಯ ಉಳಿವಿಗಾಗಿ ಪ್ರಯತ್ನಿಸಬೇಕೆಂಬ ಕರೆ ಮತ್ತು ಕೂಗು ಕೇಳುಬರುತ್ತಿದೆ. ಬಹುಷ: ಭರತನಾಟ್ಯದಂತೆಯೇ ಈ ಕಲೆಯೂ ಕೆಲವೇ ಕೆಲವು ಆಸಕ್ತರ ಹವ್ಯಾಸವಾಗಿ ಬದಲಾವಣೆಗೊಂಡರೆ ವಿಶೇಷವೇನೂ ಇಲ್ಲ. ಏಕೆಂದರೆ ಸಮಾಜದ ಮೇಲ್ವರ್ಗದ ಸಮುದಾಯಕ್ಕೆ ಬಾಗಿಲು ಬಂದ್ ಆಗಿತ್ತು (ಐರೋಡಿ ಪ್ರಕರಣ ನೆನಪಿಸಿ) ಈಗ ಈ ಮೇಲ್ವರ್ಗದ ಪೀಳಿಗೆ ಬದಲಾದ ಸಾಮಾಜಿಕ ರಾಜಕೀಯ ಸನ್ನಿವೇಶದಲ್ಲಿ ಯಕ್ಷಗಾನದ ಬದಲು ಇತರ ಲಾಭದಾಯಕ ಉದ್ಯೋಗಗಳತ್ತ ಸಾಮೂಹಿಕವಾಗಿ ತೆರಳುವುದು ಸಾಮಾನ್ಯವಾಗಿದೆ. ದೀರ್ಘಕಾಲದಿಂದ ಇದ್ದ ವೃತ್ತಿಪರ ಮೇಳಗಳೂ ಮುಚ್ಚಿದೆ. ಪ್ರೇಕ್ಷಕರೂ ಕಡಿಮೆಯಾಗಿದ್ದಾರೆ. ಈ ರೀತಿ ಎಲ್ಲಾ ಭಾಗಗಳಿಂದಲೂ ಪ್ರತಿಕೂಲ ಸನ್ನಿವೇಶವನ್ನು ಯಕ್ಷಗಾನ ಕಲೆ ಎದುರಿಸುತ್ತಿದೆ. ಆದರೆ ಇದಕ್ಕೆ ವ್ಯತಿರಿಕ್ತವಾಗಿ ಭೂತಾರಾಧನೆಯ ಸಂಸ್ಕೃತಿ ಬೆಳೆಯುತ್ತಿದೆ. ಎಲ್ಲೆಂದರಲ್ಲಿ ಭೂತಾರಾಧನೆಯ ಗುಡಿಗಳು ತಲೆ ಎತ್ತುತ್ತಿವೆ. ಇಂದು ಇದು ಕೇವಲ ಸಂಸ್ಕೃತಿಯ ಭಾಗವಾಗಿ, ಧಾರ್ಮಿಕತೆಯಾಗಿ ಮಾತ್ರ ಉಳಿದಿಲ್ಲ. ಬದಲಾಗಿ ಲಾಭದಾಯಕ ಉದ್ಯಮವಾಗಿದೆ. ಜಾತೀಯತೆ, ಅಸ್ಪೃಶ್ಯತೆ ಮತ್ತು ಕೋಮುವಾದದ ತಾಣಗಳಾಗಿಯೂ ಇದೆ. ಕೊರಗಜ್ಜನ ಹೆಸರಲ್ಲಿ ಮಾರ್ಗದ ಬದಿಯಲ್ಲಿ ಇಟ್ಟ ಕಾಣಿಕೆ ಡಬ್ಬ 25 ರಿಂದ 30,000 ದಷ್ಟು ಹಣ ಸಂಗ್ರಹ ಪ್ರತೀ ತಿಂಗಳಿಗೆ ಬರುತ್ತದೆ. ಹತ್ತಾರು ಸಾವಿರ ರೂಪಾಯಿ ವಸ್ತು ರೂಪದಲ್ಲಿ ಸಂಗ್ರಹವಾಗುತ್ತದೆ. ಕಲ್ಲುರ್ಟಿ ಅಗೇಲು ಎಂಬ ಭೂತಕ್ಕೆ ನೈವಿಧ್ಯ ನೀಡುವೆ ಕಾರ್ಯಕ್ರಮದಲ್ಲಿ ತಿಂಗಳಿಗೆ 50 ರಿಂದ 60,000 ರೂಪಾಯಿ ಸಂಗ್ರಹವಾಗುತ್ತದೆ. ಈ ಮೊದಲು ದೇವಸ್ಥಾನಗಳಿಗೆ ಗೋಪುರ, ಕಮಾನು, ಚಿನ್ನದ ಖಡ್ಗ, ಬಜ್ರದ ಕಿರೀಟ ಅರ್ಪಣೆ ಈಗ ದೇವಸ್ಥಾನಗಳಿಗೂ ಭೂತಗಳಿಗೂ ಬಂದಿದೆ. ಅನ್ನದಾನ, ಸಾಂಸ್ಕೃತಿಕ ಕಾರ್ಯಕ್ರಮ, ರಸಮಂಜರಿಗಳೂ ಜನಾಕರ್ಷಣೆಗಾಗಿ ನಡೆಯುತ್ತಿದೆ. ಈ ರೀತಿ ಹಂತಹಂತವಾಗಿ ಬದಲಾಗುತ್ತಿರುವ ವ್ಯವಸ್ಥೆಗೆ ಬಗ್ಗಿಕೊಂಡು ಭೂತಾರಾಧನೆ ನಡೆಯುತ್ತಿದೆ. ಆದರೆ ಭೂತಗಳಾಗಿ ಕುಣಿಯುವ ಏಕದಿನದ ಹಿರೋಗಳಾದ ದಲಿತರು ಉಳಿದ ದಿನಗಳಲ್ಲಿ ಜಿರೋಗಳಾಗುತ್ತಾರೆ. ಸಾಮಾಜಿಕ ತಾರತಮ್ಯ ಅಸ್ಪೃಶ್ಯತೆಗೆ ಬಲಿಯಾಗಿ ಅದುವೇ ತಮ್ಮ ಐಡೆಂಟಿಟಿ ಎಂದು ಬಗೆಯುತ್ತಿದ್ದಾರೆ. ಶಿಕ್ಷಣ ಉದ್ಯೋಗದತ್ತ ದಲಿತ ಕಲಾವಿದರ ಜಾತಿ, ಸಮುದಾಯ ಮನಸ್ಸು ಮಾಡದಿದ್ದಲ್ಲಿ ಭೂತಾರಾಧನೆಯ ಶ್ರೇಣೀಕೃತ ಶ್ರಮವಿಭಜನೆ ಅದು ಜಾತಿ ಆಧಾರಿತವಾಗಿರುವುದರಿಂದ ಹಾಗೆಯೇ ಮುಂದುವರೆಇಯುತ್ತದೆ. ಭೂತಾರಾಧನೆಯ ಅವಿಭಾಜ್ಯರಾದ ಸಮುದಾಯಗಳು ವೃತ್ತಿ ಪಲ್ಲಟಗೊಂಡು ಪರ್ಯಾಯ ಕಸುಬಿನಿಂದ ಗೌರವಾರ್ಹ ಸ್ವಾಭಿಮಾನದ ಬದುಕು ಸಾಧ್ಯವೆಂಬುದನ್ನು ತಿಳಿ ಹೇಳಬೇಕಾಗಿದೆ. ಯಕ್ಷಗಾನಕ್ಕೆ ಬಂದೊದಗಿದಂತೆ ಭೂರಾರಾಧನೆಗೂ ಭೂತಾರಾಧನೆಯ ಕಲಾವಿದರ ಕೊರತೆ ಉಂಟಾಗುವ ಸನ್ನಿವೇಶ ನಿರ್ಮಾಣವಾಗಬೇಕಾಗಿದೆ. ಇದು ಸಾಧ್ಯವಾಗಬೇಕಾದರೆ ದಲಿತ ಸಮಾಜಕ್ಕೆ ಸಂಬಂಧಿಸಿ ಉತ್ಪಾದನಾ ಸಮಾರಂಭಗಳಲ್ಲಿ ಆಮೂಲಾಗ್ರ ಬದಲಾವಣೆಯಾಗಬೇಕು. ವೃತ್ತಿ ಮತ್ತು ಪ್ರವೃತ್ತಿಗಳ ಮಧ್ಯೆ ಬೆಳ್ಳಿಗೆರೆ ಎಳೆಯಬೇಕು, ಆಗ ಮಾತ್ರ ಸಮಾಜದ ಶ್ರಮ ಸಂಸ್ಕೃತಿ ಯಾ ತುಳು ಸಂಸ್ಕೃತಿ ನಿರ್ಮಾಣ ಸಾಧ್ಯ.

ಆದುದರಿಂದ ಅನ್ಯಾಯ ಶೋಷಣೆ ದಬ್ಬಾಳಿಕೆಯ ಪಾಳೆಯಗಾರಿ ಮೌಲ್ಯಗಳ ಪುನರುತ್ಥಾನಕ್ಕೆ ಪ್ರಯತ್ನಿಸುತ್ತಿರುವ ಶಕ್ತಿಗಳ ಎದುರು ಉತ್ಪಾದನಾ ಸಂಬಂಧಗಳಲ್ಲಿ ಅಮೂಲಾಗ್ರ ಬದಲಾವಣೆ ಬಯಸುವ ಹೊಸ ಚಿಂತನಾ ಲಹರಿಯನ್ನು ಪ್ರಜ್ಞಾಪೂರ್ವಕವಾಗಿ ಬೆಳೆಸಬೇಕಾದುದು ಜತ್ಯಾತೀತ ಪ್ರಗತಿಪರ ಪ್ರಜಾಸತ್ತಾತ್ಮಕ ಶಕ್ತಿಗಳ ಕರ್ತವ್ಯವಾಗಬೇಕು. ಇಂತಹ ಘನವಾದ ಉದ್ದೇಶ ಈ ವಿಶ್ವ ತುಳು ಸಮ್ಮೇಳನದಿಮದ ನಿರೀಕ್ಷಿಸಲು ಸಾಧ್ಯವಿಲ್ಲ.

ಮಹದಾಯಿ: ನ್ಯಾಯಾಧೀಕರಣ ನ್ಯಾಯ ವಿಳಂಬಕ್ಕೆ ಬಿಜೆಪಿ- ಕಾಂಗ್ರೆಸ್ ಹೊಣೆ

ಗೋವಾ -ಕರ್ನಾಟಕ ಉಭಯ ನಡುವಿನ ಮಹದಾಯಿ ನದಿ ನೀರಿನ ಹಂಚಿಕೆಯ ಪ್ರಶ್ನೆಯನ್ನು ರಾಜ್ಯಗಳ ನ್ಯಾಯಾಧೀಕರಣಕ್ಕೆ ಒಪ್ಪಿಸಲು ಕೇಂದ್ರ ಸರ್ಕಾರ ತೀರ್ಮಾನಿಸಿರುವುದು ನ್ಯಾಯ ಪಡೆಯುವಲ್ಲಿ ವಿಳಂಬವೆಂದೇ ಹೇಳಬೇಕು. ಮಹಾದಾಯಿ ನೀರು ಮೂಲತಃ ಕುಡಿಯುವ ನೀರಿನ ಯೋಜನೆಯಾಗಿದೆ. ಈ ಯೋಜನೆ ಜಾರಿಗೆ ಹಿಂದೆ ಕೇಂದ್ರ ಸರ್ಕಾರ ಪರವಾನಗಿಯನ್ನು ನೀಡಿತ್ತು. ಇದಕ್ಕೆ ಗೋವಾ ಸರ್ಕಾರ ಆಕ್ಷೇಪಿವೆಸಿದಾಗ ಕೇಂದ್ರ ಸರ್ಕಾರ ಅದಕ್ಕೆ ತಡೆಯಾಜ್ಞೆ ನೀಡಿತು. ಆಗ ಗೋವಾದಲ್ಲಿ ಅಧಿಕಾರದಲ್ಲಿದ್ದು ಬಿಜೆಪಿ ಸರ್ಕಾರ. ಕೇಂದ್ರ ದಲ್ಲಿದ್ದು ಬಿಜೆಪಿ ನೇತೃತ್ವದ ಎನ್.ಡಿ.ಎ. ಸರ್ಕಾರ ಆಗ ಕರ್ನಾಟಕದಲ್ಲಿ ಕಾಂಗ್ರೆಸ್ -ಜೆಡಿ(ಎಸ್) ಸರ್ಕಾರ.

ಇಲ್ಲಿ ಎದ್ದಿರುವ ವಿವಾದವನ್ನು ಸರ್ಕಾರಗಳು ಪರಸ್ಪರ ಮಾತುಕತೆಗಳ ಮೂಲಕ ಬಗೆಹರಿಸಿಕೊಳ್ಳಬಹುದಾಗಿವೆ. ಆದರೆ ತನ್ನ ಪಕ್ಷದ ಸರ್ಕಾರವನ್ನು ಬೆಂಬಲಿಸುವ ಏಕ ಮಾತ್ರ ಉದ್ದೇಶದಿಂದ ವಾಜಪೇಯಿಯವರ ಎನ್.ಡಿ.ಎ. ಕುಡಿಯುವ ನೀರಿನ ಯೋಜನೆ ಜಾರಿಗೆ ತಡೆ ನೀಡಿತು. ಕರ್ನಾಟಕದಲ್ಲಿ ಸರ್ವ ಪಕ್ಷಗಳ ಮನವಿಯನ್ನು ಕೇಳಲಿಲ್ಲ. ಆಗ ತಡೆಯಾಜ್ಞೆ ಇದ್ದರೂ ಯೋಜನೆ ಅನುಷ್ಠಾನದತ್ತ ಕ್ರಮವಹಿಸಬೇಕೆಂಬ ಕರ್ನಾಟಕದಲ್ಲಿನ ಕೆಲವರು ಪ್ರಸ್ತಾಪಗಳು ಸಿಪಿಐ(ಎಂ) ಸರಿಯಲ್ಲವೆಂದಿತು. ಮಾತ್ರವಲ್ಲ ಕೇಂದ್ರದ ಮಧ್ಯಪ್ರವೇಶದೊಂದಿಗೆ ಪರಸ್ಪರ ಮಾತುಕತೆ ನಡೆಸಿ ಬಗೆಹರಿಸಿಕೊಳ್ಳಬೇಕೆಂದು ಅದು ಸೂಚಿಸಲಾಯಿತು. ಎನ್.ಡಿ.ಎ. ಅಂತಹ ಕ್ರಮ ವಹಿಸಲಿಲ್ಲ. ತಡೆಯಾಜ್ಞೆ ತೆರವು ಮಾಡಲಿಲ್ಲ. ಹೀಗಾಗಿ ಈ ವಿವಾದ ನೆನೆಗುದಿಗೆ ಬಿದ್ದಿತು.

ಇದೀಗ ಕೇಂದ್ರದಲ್ಲಿ ಕಾಂಗ್ರೆಸ್ ನೇತೃತ್ವದ ಯುಪಿಎ, ಗೋವಾದಲ್ಲಿ ಕಾಂಗ್ರೆಸ್ ಸರ್ಕಾರ. ಈ ಹಂತದಲ್ಲಾದರೂ ಕೇಂದ್ರ ಸರ್ಕಾರ ತಡೆಯಾಜ್ಞೆಯನ್ನು ಹಿಂತೆಗೆಸುಕೊಂಡು ಕರ್ನಾಟಕ-ಗೋವಾ ಸರ್ಕಾರಗಳ ನಡುವೆ ಮಾತುಕತೆಗೆ ಚಾಲನೆ ನೀಡಬೇಕಿತ್ತು. ಅದನ್ನು ಬಿಟ್ಟು ವಿವಾದವನ್ನು ನ್ಯಾಯಾಧೀಕರಣಕ್ಕೆ (ಟ್ರಿಬ್ಯೂನಲ್) ಒಪ್ಪಿಸಲು ಕೇಂದ್ರ ಸರ್ಕಾರ ನಿರ್ಧರಿಸಿದೆ. ಇಂತಹ ನಿರ್ಧಾರ ಕೈಗೊಳ್ಳಲು ಇರುವ ಕಾರಣ ಗೋವಾದಲ್ಲಿಯೂ ತನ್ನದೇ ಸರ್ಕಾರ. ಅಂದರೆ ಒಕ್ಕೂಟದ ವ್ಯವಸ್ಥೆಯಲ್ಲಿ ನೆಲ-ಜಲದಂತಹ ಪ್ರಶ್ನೆಗಳಲ್ಲಿ ಎರಡು ರಾಜ್ಯಗಳ ನಡುವೆ ಭಿನ್ನಾಭಿಪ್ರಾಯ ಬಂದಾಗ ಬಗೆಹರಿಸಲು ಅತ್ಯಂತ ಹೊಣೆಗಾರಿಕೆಯ ಪಾತ್ರ ವಹಿಸಬೇಕಿರುವುದು ಕೇಂದ್ರದ ಕರ್ತವ್ಯ. ಅದರಲ್ಲೂ ವಿಫಲವಾದರೆ ಮುಂದಿನ ಕ್ರಮ. ಆದರೆ ಅದನ್ನು ಬಿಟ್ಟು ತೀರಾ ಸಂಕುಚಿತ ನಿಲುವಿನಿಂದ ಕಾಂಗ್ರೆಸ್ ವರ್ತಿಸಿದೆ.

ಹಿಂದಿನ ಅನುಭವಗಳಿಂದ ತಿಳಿಯುವುದೇನೆಂದರೆ ನ್ಯಾಯಾಧೀಕರಣದಲ್ಲಿ ವಿವಾದ ಇತ್ಯರ್ಥವಾಗಲು ದಶಕಗಳೇ ಕಳೆದಿವೆ.ಈ ಆ ಪ್ರಕ್ರಿಯೆಯೇ ಜನಗಳ ತಕ್ಷಣದ ಅಗತ್ಯಗಳಿಗೆ ಪರಿಹಾರ ನೀಡದೇ ಸತಾಯಿಸುತ್ತದೆ. ಹೀಗಾಗಿ ಇಂದು ಅಂತಹ ದುಸ್ಥಿತಿಗೆ ಎರಡೂ ರಾಜ್ಯಗಳನ್ನು ತಳ್ಳಲಾಗಿದೆ.

ಇಂತಹ ಸ್ಥಿತಿ ಒದಗಲು ಆರಂಭದಲ್ಲೇ ತಡೆಯಾಜ್ಞೆ ನೀಡಿದ ಬಿಜೆಪಿ-ಎನ್.ಡಿ.ಎ. ಮೊದಲ ಅಪರಾಧಿ, ಕಾಂಗ್ರೆಸ್ ಈಗಿನದು. ಇಬ್ಬರದೂ ಒಂದೇ ಹೊಣೆಗೇಡಿತನ.

ರೈತ ಕಂಡಲ್ಲಿ ಲಾಠಿ ಏಟು

ಬಿಜೆಪಿ ಸರ್ಕಾರದ ನೀತಿ



ದಾವಣಗೆರೆ



ಚಾಮರಾಜನಗರ

ರೈತನ ಮೇಲೆ ಆಣೆ ಮಾಡಿ ಪ್ರಮಾಣ ವಚನ ಸ್ವೀಕರಿಸಿದ ಯಡಿಯೂರಪ್ಪ ನೇತೃತ್ವದ ಬಿಜೆಪಿ ಸರ್ಕಾರದ ಧೋರಣೆ 'ರೈತ ಕಂಡಲ್ಲಿ ಲಾಠಿ ಏಟು' ಎಂಬಂತಾಗಿದೆ. ರೈತರು ಬೇಡಿಕೆ ಇಡುವುದೇ ತಪ್ಪಾ? ಚಾಮರಾಜನಗರ, ದಾವಣಗೆರೆಗಳಲ್ಲಿ ತಮ್ಮ ಸಮಸ್ಯೆಗಳ ವಿರುದ್ಧ ಚಳುವಳಿಗಿಳಿದ ರೈತರ ಮೇಲೆ ಎರಗಿರುವ ಬಿಜೆಪಿ ಸರ್ಕಾರದ ಪೊಲೀಸರು.

ಹಸಿವು ಮುಕ್ತ ಕರ್ನಾಟಕಕ್ಕಾಗಿ ಸಾಂಸ್ಕೃತಿಕ ಜಾಥಾ

ಒಂದು ಕಡೆ ಅತಿವೃಷ್ಠಿ ಮತ್ತೊಂದೆಡೆ ಅನಾವೃಷ್ಠಿ. ಅತ್ತ ಮಾರುಕಟ್ಟೆಯಲ್ಲಿನ ತೀವ್ರ ಏರಿಳಿತ. ಬೆಳೆಗಳಿಗೆ ಲಾಭದಾಯಕ ಬೆಲೆಗಳ ಕೊರತೆ. ಇತ್ತ ಸಾಲದ ಶೂಲ. ಹೀಗೆ ಎಲ್ಲಾ ಕಡೆಯಿಂದಲೂ ಗ್ರಾಮೀಣ ಜನತೆ ಧಾಳಿಗೊಳಗಾಗಿದ್ದಾರೆ. ಹತಾಶರಾಗಿ ಆತ್ಮಹತ್ಯೆಯ ದಾರಿ ಹಿಡಿಯುತ್ತಿದ್ದಾರೆ. ಆತ್ಮಹತ್ಯೆಯೊಂದೇ ದಾರಿಯಲ್ಲ. ಸಮಸ್ಯೆಗಳ ಪರಿಹಾರಕ್ಕೆ ಸಂಘಟಿತ ಹೋರಾಟ ಕೂಡ ಸಾಧ್ಯ. ಈ ಹಿನ್ನಲೆಯಲ್ಲಿ ಸಾಂಸ್ಕೃತಿಕ ರಂಗದ ಮತ್ತು ಸಾರಸ್ವತ ಲೋಕದ ಜನರು ಸ್ಪಂದಿಸಬೇಕಾದ ಅಗತ್ಯತೆ ಮತ್ತು ಅನಿವಾರ್ಯತೆ ಇಂದು ಎಂದಿಗಿಂತಲೂ ಹೆಚ್ಚಿದೆ ಎಂಬ ಅಭಿಪ್ರಾಯದ ಆಧಾರದಲ್ಲಿ 'ಸಮುದಾಯ'ದ ನೇತೃತ್ವದಲ್ಲಿ ಒಂದು ರಾಜ್ಯಮಟ್ಟದ ವಿಚಾರ ಸಂಕಿರಣ ನಡೆದಿರುವುದು ತಮಗೆ ತಿಳಿದೇ ಇದೆ. ಆ ನಂತರ ಹರಪನಹಳ್ಳಿ, ರಾಯಚೂರು, ಹೊಸಪೇಟೆಗಳಲ್ಲಿಯೂ ಅದೇ ವಿಷಯದ ಮೇಲೆ ವಿಚಾರ ಸಂಕಿರಣಗಳು ನಡೆದಿವೆ. ನವೆಂಬರ್ 29, 2009 ರಿಂದ ಡಿಸೆಂಬರ್ 3, 2009 ರವರೆಗೆ ರಾಯಚೂರಿನಲ್ಲಿ ರಂಗ ತರಬೇತಿ ಶಿಬಿರ ನಡೆದು ಬೀದಿ ನಾಟಕ ಮತ್ತು ಹಾಡುಗಳನ್ನು ಸಿದ್ಧಪಡಿಸಲಾಗಿದೆ.

ಈಗ ರಾಜ್ಯಮಟ್ಟದ ಎರಡು ಜಾಥಾಗಳನ್ನು ಡಿಸೆಂಬರ್ 26, 2009 ರಿಂದ ಜನವರಿ 2, 2010 ರವರೆಗೆ ಏಕಕಾಲದಲ್ಲಿ ನಡೆಸಲು ಯೋಜಿಸಲಾಗಿದೆ. ಬೀದರ್‌ನಿಂದ ಮತ್ತು ಚಿಕ್ಕಬಳ್ಳಾಪುರದಿಂದ ಉದ್ಘಾಟನೆಗೊಂಡು ಹೊರಡುವ ಈ ಜಾಥಾಗಳು ಕೊನೆಯಲ್ಲಿ ಧಾರವಾಡದಲ್ಲಿ ಸೇರಲಿವೆ. ಇದರ ಯಶಸ್ಸಿಗೆ ಜನ ಚಳುವಳಿಗಳ ಪ್ರಗತಿಪರರ ಬೆಂಬಲ, ಸಹಕಾರ ಸಕ್ರಿಯ ಪಾಲ್ಗೊಳ್ಳುವಿಕೆ ಅಗತ್ಯವಾಗಿದೆ. ರಾಜ್ಯಮಟ್ಟದ ಜಾಥಾ ಕೊನೆಗೊಂಡ ನಂತರ ಜನವರಿ 4, 2010 ರಿಂದ ಒಂದು ವಾರ ಕಾಲ ಘಟಕಮಟ್ಟದಲ್ಲಿ ಜಾಥಾಗಳು ನಡೆಯಲಿದ್ದು ಅವು ಹಳ್ಳಿ ಹಳ್ಳಿಗಳಿಗೆ ಭೇಟಿ ನೀಡಲಿವೆ.



ಕವಿತೆ

ಏನೂ ಕೇಳೋಂಗಿಲ್ಲ

ಏನೂ ಹೇಳೊಂಗಿಲ್ಲ
ಈ ಬೆಲೆಗಳೆಂಗೇರಿದವು
ಕೇಳೋ ನೀ ರೈತಣ್ಣ
ಈ ದರಗಳೆಂಗೇರಿದವು
ಕೇಳೋ ನೀ ಕೂಲಿಯಣ್ಣ
ಈ ಸೋನಿಯಾ ದರ್ಬಾರಿನಲ್ಲಿ
ಈ ಮೋಹನ್‌ಸಿಂಗ್ ಮೋಜಿನಲ್ಲಿ
ಈ ಬೆಲೆಗಳೆಂಗೇರಿದವು
ಕೇಳೋ ನೀ ಕಾರ್ಮಿಕಣ್ಣ
ಸಕ್ಕರೆ ಕೇಳಲು ಹೋಗಿ ತಲೆ ಚಕ್ಕರ್
ಹೊಡೆದಂಗಾಯ್ತೆ.
ಬೆಲ್ಲ ಕೇಳಲು ಹೋಗಿ ಬೆಪ್ಪಾಗಿ
ನಿಂತಂಗಾಯ್ತೆ
ಬೇಳೆ ಕೇಳಲು ಹೋಗಿ ಬೆವರಿ
ಬಿದ್ದಂಗಾಯ್ತೆ
ಈ ಯಡ್ಡಿಯ ಜಂಜಾಟದಲ್ಲಿ
ಈ ರೆಡ್ಡಿಯ ರಂಪಾಟದಲ್ಲಿ
ಈ ದರಗಳೆಂಗೇರಿದವು
ಕೇಳೋ ನೀ ಕೂಲಿಯಣ್ಣ
ಕಾಳು ಕೇಳಲು ಹೋಗಿ ಕೈಕಾಲು
ಮುರಿದಂಗಾಯ್ತೆ
ಎಣ್ಣೆ ಕೇಳಲು ಹೋಗಿ ಕಣ್ಣೀರು
ಸುರಿದಂಗಾಯ್ತೆ
ಅಕ್ಕಿ ಕೇಳಲು ಹೋಗಿ
ಕಕ್ಕಾಬಿಕ್ಕಿಯಾದಂಗಾಯ್ತೆ
ಜೂಜುಕೋರ ಕಂಪನಿಗಳ ಭರಾಟೆಯಲ್ಲಿ
ಈ ಕೇಳಸಂತೆಕೋರರ ಕಾರುಬಾರಿನಲ್ಲಿ
ಈ ಬೆಲೆಗಳೆಂಗೇರಿದವು
ಕೇಳೋ ನೀ ರೈತಣ್ಣ
ತರಕಾರಿ ಕೇಳಲು ಹೋಗಿ
ತಳಮಳಕ್ಕೊಳಗಾದಂಗಾಯ್ತೆ
ಗೋಧಿ ಕೇಳಲು ಹೋಗಿ ಗಕ್ಕನೆ
ಗರಬಡಿದಂಗಾಯ್ತೆ
ಹಾಲು ಕೇಳಲು ಹೋಗಿ ಹಾವು
ಕಡಿದಂಗಾಯ್ತೆ
ಈ ನೋಟು ಓಟಿನ ಮಾಟದಲ್ಲಿ
ಸಿಟುಗು ಮುಳ್ಳಾಗಬೇಡವೋ ನಿನ್ನ
ಹೊಟ್ಟೆಯ ಹೊಡೆಯುವವರ ಮೇಲೆ
ಸಿಟ್ಟಾಗಿ ಸಿಡಿದೇಳೋ ರೈತ, ಕೂಲಿ,
ಕಾರ್ಮಿಕಣ್ಣ

ಪ್ರೊ. ಚಂದ್ರಪ್ಪ

JANASHAKTHI KANNADA VARA PATRIKE: Printed by G.N.NAGARAJ, No 12. 18th Cross, S.R.Nagar, BANGALORE-560027 Published by: G.N.NAGARAJ, No 12. 18th Cross, S.R.Nagar, BANGALORE-560027, Karnataka on behalf of / owned by COMMUNIST PARTY OF INDIA (MARXIST) and Printed at : Kriya Prakashana, 12. 18th Cross, S.R.Nagar, BANGALORE - 560 027 Karnataka (State) and Published at BANGALORE No 12.18th Cross, S.R.Nagar, BANGALORE-560027 Editor S.Y.GURURSHANTH, No12. 18th Cross, S.R.Nagar, BANGALORE - 560027
Editor : S.Y.GURUSHANTH